ಶುಕ್ರವಾರ, ಮಾರ್ಚ್ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 78 | ಪುಟ 14 + 4

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಗಂಭೀರ ಘಟನೆಯೊಂದನ್ನು ತಮಾಷೆಯಾಗಿ ನಿರೂಪಿಸಲು ಮುಂದಾಗಿದೆ 'ಒಂದು ಗಂಟೆಯ ಕಥೆ'



'ಸಾಮಾಜಿಕ ಮಾಧ್ಯಮಗಳ ದುರುಪಯೋಗಕ್ಕೆ ಅವಕಾಶ ನೀಡುವುದಿಲ್ಲ' 7

ಆಳ-ಅಗಲ
ಕಾಳಗಕ್ಕಿಳಿದ ಬೈಡನ್-ಪುಟಿನ್

ಮಂಗಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ 6

ಸೆನ್ಸೆಕ್ಸ್	ನಿಫ್ಟಿ	₹/$
49,802	14,721	72.55

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



45 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ: ಕೇಂದ್ರ ಸರ್ಕಾರದ ಪರಿಶೀಲನೆ

ಒಂದೇ ದಿನ 35 ಸಾವಿರ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ ಕೋವಿಡ್–19 ಸೋಂಕು ಹೆಚ್ಚುತ್ತಿದ್ದು, ಗುರುವಾರ ಒಂದೇ ದಿನ 35,871 ಪ್ರಕರಣಗಳು ದೃಢಪಟ್ಟಿವೆ. ಇದು ಕಳೆದ 102 ದಿನಗಳಲ್ಲಿ ದೃಢಪಟ್ಟ ಅತಿ ಹೆಚ್ಚು ಪ್ರಕರಣಗಳಾಗಿವೆ.

ಸೋಂಕು ನಿಯಂತ್ರಿಸುವ ನಿಟ್ಟಿನಲ್ಲಿ 45 ವರ್ಷ ಮೇಲ್ಪಟ್ಟ ಎಲ್ಲ ವಯೋಮಾನದವರಿಗೆ ಲಸಿಕೆ ಹಾಕುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ.


'ಎರಡನೇ ಅಲೆ ಹಬ್ಬುವ ಭೀತಿ ಮತ್ತು ರಾಜ್ಯ ಸರ್ಕಾರಗಳ ಬೇಡಿಕೆಗೆ ಅನುಗುಣವಾಗಿ ಲಸಿಕೆ ಹಾಕುವ ವ್ಯಾಪ್ತಿಯನ್ನು ಹೆಚ್ಚಿಸಬೇಕಾಗಿದೆ. ಆದರೆ, ಈಗಿರುವ ನಿರ್ಬಂಧವನ್ನು ತೆಗೆದು ಹಾಕಿದರೆ ತಯಾರಕರಿಂದ ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಕೆಯಾಗುವುದೇ ಎನ್ನುವ ಬಗ್ಗೆ ಚರ್ಚಿಸಲಾಗುತ್ತಿದೆ' ಎಂದು ಲಸಿಕೆ ಕುರಿತಾದ ರಾಷ್ಟ್ರೀಯ ತಜ್ಞರ ತಂಡದ ಸದಸ್ಯರೊಬ್ಬರು ತಿಳಿಸಿದ್ದಾರೆ.

'ಲಸಿಕೆ ಹಾಕುವ ವ್ಯಾಪ್ತಿಯನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ. ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಿ ವಯೋಮಾನದ ಆಧಾರದ ಮೇಲೆ ಲಸಿಕೆ ಹಾಕಬೇಕು. ಸದ್ಯಕ್ಕೆ 45 ವರ್ಷದ ಮೇಲ್ಪಟ್ಟವರಿಗೆ ನೀಡುವುದು ಸಮರ್ಪಕವಾಗಿದೆ' ಎಂದು ಭಾರತದ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನದ ಸಾಂಕ್ರಾಮಿಕ ರೋಗ ತಜ್ಞ ಗಿರಿಧರ್ ಬಾಬು ಪ್ರತಿಪಾದಿಸಿದ್ದಾರೆ.

ಕೇಂದ್ರ ಆರೋಗ್ಯ ಸಚಿವಾಲಯ ನಿರ್ಬಂಧಗಳನ್ನು ತೆಗೆದುಹಾಕಿದರೆ ಮುಂದಿನ ಮೂರು ತಿಂಗಳಲ್ಲಿ 18 ವರ್ಷದ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ಹಾಕಲು ಸಿದ್ಧ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ತಿಳಿಸಿದ್ದಾರೆ. ಪತ್ರಕರ್ತರು, ವಿಮಾನ ನಿಲ್ದಾಣದಲ್ಲಿನ ಕಾರ್ಮಿಕರು, ವಿದ್ಯುತ್ ಪೂರೈಕೆಯ ನಿರ್ವಹಣೆಯಲ್ಲಿ ತೊಡಗಿರುವವರು ಮತ್ತು ಜಗನ್ನಾಥ ದೇವಾಲಯದ ಪೂಜಾರಿಗಳಿಗೂ ಲಸಿಕೆ ಹಾಕಲು ಅವಕಾಶ ಕಲ್ಪಿಸಬೇಕು ಎಂದು ಒಡಿಶಾ ಸಹ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು. ಹೀಗಾಗಿ, ಕೋವಿಡ್–19ಗೆ ಲಸಿಕೆ ಹಾಕುವ ಕುರಿತಾದ ರಾಷ್ಟ್ರೀಯ ತಜ್ಞರ ತಂಡ ಈ ಹೊಸ ಪ್ರಸ್ತಾವದ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಿದೆ.

7ನೇ ಪುಟ ನೋಡಿ

ಐದು ರಾಜ್ಯಗಳಲ್ಲಿ ಗರಿಷ್ಠ ಪ್ರಕರಣಗಳು



ಕರ್ನಾಟಕವೂ ಸೇರಿದಂತೆ ಐದು ರಾಜ್ಯಗಳಲ್ಲೇ ಕೋವಿಡ್–19ರ ಗರಿಷ್ಠ ಪ್ರಕರಣಗಳು ದೃಢಪಟ್ಟಿವೆ. ಮಹಾರಾಷ್ಟ್ರ, ಪಂಜಾಬ್, ಕರ್ನಾಟಕ, ಗುಜರಾತ್ ಮತ್ತು ತಮಿಳುನಾಡಿನಲ್ಲಿ ಕೋವಿಡ್–19 ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ಗುರುವಾರ ದೃಢಪಟ್ಟ ಹೊಸ ಪ್ರಕರಣಗಳಲ್ಲಿ ಶೇಕಡ 79.54ರಷ್ಟು ಈ ಐದು ರಾಜ್ಯಗಳಿಗೆ ಸೇರಿವೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚಿನ 25,833, ಕೇರಳದಲ್ಲಿ 1,792 ಮತ್ತು ಪಂಜಾಬ್‌ನಲ್ಲಿ 1,492 ಪ್ರಕರಣಗಳು ಪತ್ತೆಯಾಗಿವೆ. ಕಳೆದ ವರ್ಷ ಡಿಸೆಂಬರ್ 6ರಂದು 36,011 ಪ್ರಕರಣಗಳು ದೃಢಪಟ್ಟಿದ್ದವು. ದೇಶದಲ್ಲಿ ಗುರುವಾರ 172 ಮಂದಿ ಸಾವಿಗೀಡಾಗಿದ್ದಾರೆ. ಇವರಲ್ಲಿ ಮಹಾರಾಷ್ಟ್ರದ 84, ಪಂಜಾಬ್‌ನ 35 ಮತ್ತು ಕೇರಳದ 13 ಮಂದಿ ಸೇರಿದ್ದಾರೆ. ಕಳೆದ ಎಂಟು ದಿನಗಳಿಂದ ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 2.52 ಲಕ್ಷ ದಾಟಿದೆ. ಗುಣಮುಖರಾಗುವವರ ಪ್ರಮಾಣ ಶೇಕಡ 96.41ರಷ್ಟಿದೆ. ಒಂದು ತಿಂಗಳಿಂದ ಕೇರಳದಲ್ಲಿ ಪ್ರಕರಣಗಳು ಕಡಿಮೆಯಾಗುತ್ತಿವೆ. ಆದರೆ, ಮಹಾರಾಷ್ಟ್ರ, ತಮಿಳುನಾಡು, ಪಂಜಾಬ್, ಮಧ್ಯಪ್ರದೇಶ, ದೆಹಲಿ, ಗುಜರಾತ್, ಕರ್ನಾಟಕ ಮತ್ತು ಹರಿಯಾಣದಲ್ಲಿ ಹೆಚ್ಚುತ್ತಿರುವುದು ವಿಶ್ಲೇಷಣೆಯಿಂದ ತಿಳಿದುಬಂದಿದೆ. 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್–19ನಿಂದ ಗುರುವಾರ ಯಾವುದೇ ಸಾವು ಸಂಭವಿಸಿಲ್ಲ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

23 ಕೋಟಿ ಮಂದಿಗೆ ಪರೀಕ್ಷೆ: ದೇಶದಲ್ಲಿ ಇದುವರೆಗೆ 23 ಕೋಟಿಗೂ ಹೆಚ್ಚು ಮಂದಿಯ ಕೋವಿಡ್–19 ಪರೀಕ್ಷೆ ನಡೆಸಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಇನ್ನಷ್ಟು ಸುದ್ದಿಗಳು 5B

ಪ್ರತಿ ದಿನ 3 ಲಕ್ಷ ಜನರಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲೂ ಕೋವಿಡ್ ಎರಡನೇ ಅಲೆ ಬಿರುಸುಗೊಳ್ಳುತ್ತಿರುವ ಬೆನ್ನಲ್ಲೇ ಅದನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಪರೀಕ್ಷೆ ಮತ್ತು ಪ್ರತಿ ದಿನ 3 ಲಕ್ಷ ಜನರಿಗೆ ಕೋವಿಡ್ ಲಸಿಕೆ ನೀಡಲು ರಾಜ್ಯ ಸರ್ಕಾರ ತಯಾರಿ ನಡೆಸಿದೆ.

ಅಲ್ಲದೆ, ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ ವೈದ್ಯಕೀಯ ವ್ಯವಸ್ಥೆ ಇಲ್ಲದ ಗ್ರಾಮೀಣ ಪ್ರದೇಶದ ಹಿರಿಯ ನಾಗರಿಕರಿಗೆ ಲಸಿಕೆ ನೀಡಲು ವ್ಯವಸ್ಥೆ ಮಾಡಿದೆ. 50 ದಿನಗಳಲ್ಲಿ ಎರಡನೇ ಅಲೆಯನ್ನು ನಿಯಂತ್ರಣಕ್ಕೆ ತರುವ ಗುರಿ ನಿಗದಿ ಮಾಡಿರುವ ಸರ್ಕಾರ, ತುರ್ತುಸ್ಥಿತಿ ನಿಭಾಯಿಸಲು ಬೆಂಗಳೂರಿನಲ್ಲಿ 1,000 ಹಾಸಿಗೆಗಳ 'ಕೋವಿಡ್ ಕೇರ್ ಸೆಂಟರ್' ಸ್ಥಾಪಿಸಿದೆ.

ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಗುರುವಾರ ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆಯನ್ನೂ ನಡೆಸಿ, ಹಲವು ಕ್ರಮಗಳನ್ನು ಪ್ರಕಟಿಸಿದರು.

ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ವೈದ್ಯ ಸಿಬ್ಬಂದಿ ಮತ್ತು ಅಧಿಕಾರಿಗಳು 50 ದಿನಗಳ ಕಾಲ ಶ್ರಮಿಸಲಿದ್ದಾರೆ. ಈ ಹಂತದಲ್ಲಿ ಲಸಿಕೆ ಹಾಕಿಸಿಕೊಳ್ಳುವುದು ಅತಿ ಮುಖ್ಯ. ಇನ್ನು ಮುಂದೆ ಪ್ರತಿ ದಿನ ಮೂರು ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿಯನ್ನು ನಿಗದಿಪಡಿಸಲಾಗಿದೆ. ಈಗ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮತ್ತು 45 ವರ್ಷ ಮೇಲ್ಪಟ್ಟ ವಿವಿಧ ರೀತಿಯ ಅನಾರೋಗ್ಯದಿಂದ ಬಳಲುತ್ತಿರುವವರು ಲಸಿಕೆ ಹಾಕಿಸಿಕೊಳ್ಳಬೇಕು. ಈ ಮೂಲಕ ಎರಡನೇ ಅಲೆಯನ್ನು ಹಿಮ್ಮೆಟ್ಟಿಸಲಾಗುವುದು ಎಂದು ಸುಧಾಕರ್ ಹೇಳಿದರು. ಆಂಬ್ಯುಲೆನ್ಸ್‌ಗಳ ಕೊರತೆ ಆಗಬಾರದು ಎಂಬ ಕಾರಣಕ್ಕೆ ಬೆಂಗಳೂರು ನಗರದಲ್ಲಿ 200 ಆಂಬ್ಯುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ.

7ನೇ ಪುಟ ನೋಡಿ

ಸಿ.ಎಂ ಮನವೊಲಿಕೆ ಧರಣಿ ಕೈಬಿಟ್ಟ ಜೆಡಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮಂಜೂರಾಗಿದ್ದ ಕಾಮಗಾರಿಗಳನ್ನು ತಡೆ ಹಿಡಿದಿರುವುದನ್ನು ವಿರೋಧಿಸಿ ವಿಧಾನಸಭೆಯಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದ್ದ ಜೆಡಿಎಸ್ ಸದಸ್ಯರು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸ್ಥಳಕ್ಕೆ ಬಂದು ಮನವೊಲಿಸಿದ ಬಳಿಕ ಪ್ರತಿಭಟನೆ ಅಂತ್ಯಗೊಳಿಸಿದರು.

ನಿಯಮ 69ರ ಅಡಿಯಲ್ಲಿ ಈ ಕುರಿತು ನಡೆದ ಚರ್ಚೆಯಲ್ಲಿ ಮಾತನಾಡಿದ ಜೆಡಿಎಸ್‌ನ ಎಚ್‌.ಡಿ. ರೇವಣ್ಣ, ಕೆ.ಎಂ. ಶಿವಲಿಂಗೇಗೌಡ, ಎ.ಟಿ. ರಾಮಸ್ವಾಮಿ, ಸಿ.ಎನ್. ಬಾಲಕೃಷ್ಣ ಮತ್ತಿತರರು ಸರ್ಕಾರದ ತೀರ್ಮಾನವನ್ನು ಟೀಕಿಸಿದರು. ಜೆಡಿಎಸ್ ಪ್ರತಿನಿಧಿಸುವ ಕ್ಷೇತ್ರಗಳನ್ನು ಗುರಿಯಾಗಿಟ್ಟುಕೊಂಡು ದ್ವೇಷದ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಪರವಾಗಿ ಉತ್ತರ ನೀಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, 'ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ತಲಾ ₹ 80 ಕೋಟಿ, ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ತಲಾ ₹ 48 ಕೋಟಿ ಮತ್ತು ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ತಲಾ ₹ 24 ಕೋಟಿ ಮೊತ್ತದ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿತ್ತು. ಒಟ್ಟಾರೆ ಸುಮಾರು ₹ 3,500 ಕೋಟಿ ಮೊತ್ತದ ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲಾಗಿತ್ತು' ಎಂದರು.

6ನೇ ಪುಟ ನೋಡಿ

ವಿಧಾನಸಭೆ ಉಪಚುನಾವಣೆ

ವಲಸಿಗರಿಗೆ ಕಾಂಗ್ರೆಸ್, ಜೆಡಿಎಸ್ ಮಣೆ

ಪ್ರಜಾವಾಣಿ ವಾರ್ತೆ



ಬಸನಗೌಡ ತುರ್ವಿಹಾಳ



ಮಲ್ಲಮ್ಮ ನಾರಾಯಣರಾವ್



ಅಶೋಕ ಮನಗೂಳಿ



ಯಸ್ರಬ್ ಅಲಿ

ನವದೆಹಲಿ/ಬೆಂಗಳೂರು: ಆಡಳಿತ ಪಕ್ಷ ಬಿಜೆಪಿ ಅಭ್ಯರ್ಥಿ ಘೋಷಿಸುವ ಮೊದಲೇ ಮೂರು ವಿಧಾನಸಭೆ ಕ್ಷೇತ್ರಗಳಿಗೆ ಕಾಂಗ್ರೆಸ್, ಒಂದು ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿಗಳ ಹೆಸರು ಘೋಷಿಸುವ ಮೂಲಕ ಉಪಚುನಾವಣೆಯ ಅಖಾಡಕ್ಕೆ ಧುಮುಕಿವೆ.

ಮಸ್ಕಿ ಮತ್ತು ಸಿಂದಗಿ ಕ್ಷೇತ್ರದಲ್ಲಿ ಕ್ರಮವಾಗಿ ಬಿಜೆಪಿ, ಜೆಡಿಎಸ್‌ನಿಂದ ವಲಸೆ ಬಂದ ಅಭ್ಯರ್ಥಿಗಳಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದರೆ, 15 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದು ಗುರುವಾರವಷ್ಟೇ ಪಕ್ಷ ಸೇರಿದ್ದವರಿಗೆ ಜೆಡಿಎಸ್ ಟಿಕೆಟ್ ಕೊಟ್ಟಿದೆ.

ಚುನಾವಣೆ ದಿನಾಂಕ ಪ್ರಕಟವಾದ ಕೂಡಲೇ ಅಭ್ಯರ್ಥಿ ಪಟ್ಟಿ ಘೋಷಿಸಿ, ಆರಂಭದಿಂದಲೇ ಸಿದ್ಧತೆ ನಡೆಸುವ ಕೆಲಸವನ್ನು ಸಾಮಾನ್ಯವಾಗಿ ಬಿಜೆಪಿ ಮಾಡುತ್ತಿತ್ತು. ಈಗ, ಕಾಂಗ್ರೆಸ್ ಈ ಕೆಲಸ ಮಾಡಿದೆ.

8ನೇ ಪುಟ ನೋಡಿ

'ಅಕ್ರಮ ತಡೆಗೆ ಕೆಪಿಎಸ್‌ಸಿ ಪರೀಕ್ಷಾ ಪದ್ಧತಿ ಬದಲು'

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮ ತಡೆಗಟ್ಟಲು ಪರೀಕ್ಷಾ ಪದ್ಧತಿಯಲ್ಲಿಯೇ ಬದಲಾವಣೆ ತರಲು ಚಿಂತನೆ ನಡೆಯುತ್ತಿದೆ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು. 6

'ಟೋಲ್ ಸಂಗ್ರಹ: ವರ್ಷದೊಳಗೆ ಜಿಪಿಎಸ್ ಆಧರಿತ ವ್ಯವಸ್ಥೆ'

ನವದೆಹಲಿ: 'ಜಿಪಿಎಸ್ ಆಧರಿಸಿ ಟೋಲ್ ಸಂಗ್ರಹಿಸುವ ವ್ಯವಸ್ಥೆ ಒಂದು ವರ್ಷದಲ್ಲಿ ಜಾರಿಗೆ ಬರಲಿದ್ದು, ಹಾಲಿ ಇರುವ ಟೋಲ್ ಬೂತ್‌ಗಳನ್ನು ತೆಗೆಯಲಾಗುವುದು' ಎಂದು ಭೂ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದರು. 7

ಗುಜರಿ ನೀತಿ: ವಾಹನ ವಹಿವಾಟು ವೃದ್ಧಿ ನಿರೀಕ್ಷೆ

ನವದೆಹಲಿ: 'ವಾಹನಗಳ ಗುಜರಿ ನೀತಿ'ಯಡಿ ಹಳೆಯ ವಾಹನಗಳನ್ನು ಕೈಬಿಟ್ಟು ಹೊಸ ವಾಹನ ಖರೀದಿಸಲು ಮುಂದಾದಲ್ಲಿ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಇದು, ಗ್ರಾಹಕರು – ಮಾರಾಟಗಾರರು ಇಬ್ಬರಿಗೂ ಅನುಕೂಲಕರವಾದ ನೀತಿಯಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಯಲ್ಲಿ ತಿಳಿಸಿದರು. 7

ಸರ್ಕಾರಿ ಆಭರಣ ಮಳಿಗೆ

ಬೆಂಗಳೂರು: ಬೆಂಗಳೂರು, ಮೈಸೂರು ಸೇರಿ ರಾಜ್ಯದ ಪ್ರಮುಖ ನಗರಗಳಲ್ಲಿ ಚಿನ್ನಾಭರಣಗಳ ಮಳಿಗೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು. 12

'ವಿಮೆ ಪ್ರೀಮಿಯಂ ಬದಲಾವಣೆ ಬೇಡ'

ನವದೆಹಲಿ (ಪಿಟಿಐ): ಚಾಲ್ತಿಯಲ್ಲಿರುವ ಆರೋಗ್ಯ ವಿಮೆಗಳ ಪ್ರೀಮಿಯಂ ಮೊತ್ತ ಹೆಚ್ಚಿಸುವಂತಹ ಯಾವುದೇ ಬದಲಾವಣೆಗೆ ಮುಂದಾಗದಂತೆ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ವಿಮಾ ಕಂಪನಿಗಳಿಗೆ ಸೂಚನೆ ನೀಡಿದೆ. ವೈಯಕ್ತಿಕ ಅಪಘಾತ ಮತ್ತು ಪ್ರಯಾಣ ವಿಮೆಗಳಿಗೆ ಕೂಡ ಈ ಸೂಚನೆ ಅನ್ವಯ ಆಗುತ್ತದೆ. 12

ಬೈಯಪ್ಪನಹಳ್ಳಿ ಟರ್ಮಿನಲ್ ಕಾಮಗಾರಿ ಬಹುತೇಕ ಪೂರ್ಣ: ಉದ್ಘಾಟನೆಗೆ ದಿನಾಂಕ ನಿಗದಿ ಬಾಕಿ

ಉದ್ಘಾಟನೆಗೆ ಕಾದಿರುವ ರೈಲ್ವೆ ಟರ್ಮಿನಲ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬೈಯಪ್ಪನಹಳ್ಳಿ ಬಳಿ ನಿರ್ಮಾಣವಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಕೋಚಿಂಗ್ ಟರ್ಮಿನಲ್ ಲೋಕಾರ್ಪಣೆಗೆ ಸಿದ್ಧವಾಗಿದೆ. ವಿಮಾನ ನಿಲ್ದಾಣದ ಮಾದರಿಯ ಸೌಕರ್ಯಗಳೊಂದಿಗೆ ತಲೆ ಎತ್ತಿ ನಿಂತಿರುವ ರೈಲು ನಿಲ್ದಾಣ, ಉದ್ಘಾಟನೆಗೆ ಕಾಯುತ್ತಿದೆ.

ರಸ್ತೆಯಿಂದ ನಿಲ್ದಾಣದ ಆವರಣದ ಕಡೆಗೆ ಸಾಗುತ್ತಿದ್ದಂತೆ ವಿಶಾಲವಾದ ವಾಹನ ನಿಲುಗಡೆ ತಾಣ ಎದುರಾಗುತ್ತದೆ. 250 ಕಾರುಗಳು, 900 ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ ಇದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನೇ ಹೋಲುವ ವಿನ್ಯಾಸದ ಚಾವಣಿ ನಿರ್ಮಾಣವಾಗಿದೆ.

ಮುಂಭಾಗದಲ್ಲಿ ಸಣ್ಣ ಉದ್ಯಾನದ ಜೊತೆಗೆ ನೀರು ಚಿಮ್ಮುವ ಕಾರಂಜಿಯೊಂದು ನಿರ್ಮಾಣವಾಗಿದೆ. ಅದರ ಪಕ್ಕದಲ್ಲಿ 'ಐ ಲವ್ ಬೆಂಗಳೂರು' ಎಂಬ ಆಕರ್ಷಕವಾದ ಫಲಕ ಅಳವಡಿಸಲಾಗಿದೆ.

ಒಳಾಂಗಣ (ಕಾನ್‌ಕೋರ್ಸ್) ಪ್ರವೇಶಿಸಿದರೆ ಮೊದಲ ಮಹಡಿಯಲ್ಲಿ ವಿಶ್ರಾಂತಿ ಕೊಠಡಿಗಳಿವೆ. ಅಲ್ಲಿಗೆ ತೆರಳಲು ಲಿಫ್ಟ್ ಮತ್ತು ಎಸ್ಕಲೇಟರ್ ವ್ಯವಸ್ಥೆ ಇದೆ. ಅಲ್ಲಿಯೇ ಕಾಫಿ, ತಿಂಡಿ ಮತ್ತು ಆಹಾರದ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ರೈಲು ಗಾಡಿ ಎಲ್ಲಿದೆ, ಎಷ್ಟು ಗಂಟೆಗೆ ಬರಲಿದೆ ಎಂಬ ನೈಜ ಸಮಯದ ಮಾಹಿತಿ ಒದಗಿಸಲು ಡಿಜಿಟಲ್ ಫಲಕಗಳನ್ನು ಅಳವಡಿಸಲಾಗಿದೆ. ಎರಡೂ ಮಹಡಿಗಳಿಗೂ ಸಂಪೂರ್ಣ ಹವಾ ನಿಯಂತ್ರಿತ ವ್ಯವಸ್ಥೆ ಮಾಡಲಾಗಿದೆ.

ಪ್ರಯಾಣಿಕ ರೈಲುಗಳಿಗೆ 7 ಪ್ಲಾಟ್‌ಫಾರಂಗಳನ್ನು ನಿರ್ಮಿಸಲಾಗಿದೆ. ಒಂದು ಪ್ಲಾಟ್‌ಫಾರಂನಿಂದ ಇನ್ನೊಂದು ಪ್ಲಾಟ್‌ಫಾರಂ ತಲುಪಲು ಸಬ್‌ವೇ ಮತ್ತು ಪಾದಚಾರಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಮೆಟ್ರೊ ರೈಲು ನಿಲ್ದಾಣಗಳ ಮಾದರಿಯಲ್ಲಿ ಎಲ್ಲ ಪ್ಲಾಟ್‌ಫಾರಂಗಳಿಗೂ ಲಿಫ್ಟ್ ಮತ್ತು ಎಸ್ಕಲೇಟರ್ ಸೌಲಭ್ಯ ಕಲ್ಪಿಸಲಾಗಿದೆ.

ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ನಿಲ್ದಾಣ ಸುತ್ತಮುತ್ತಲ ಜನರ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. 2015–16ನೇ ಸಾಲಿನಲ್ಲಿ ಈ ನಿಲ್ದಾಣಕ್ಕೆ ರೈಲ್ವೆ ಮಂಡಳಿ ಮಂಜೂರಾತಿ ನೀಡಿತ್ತು. 2017ರಿಂದ ಕಾಮಗಾರಿ ಆರಂಭವಾಗಿದ್ದು, ಬಹುತೇಕ ಪೂರ್ಣಗೊಂಡಿದೆ. ಉದ್ಘಾಟನೆಗೆ ದಿನಾಂಕ ನಿಗದಿಯಾಗುವುದಷ್ಟೇ ಬಾಕಿ ಇದೆ.



ಸರ್ ಎಂ. ವಿಶ್ವೇಶ್ವರಯ್ಯ ನಿಲ್ದಾಣ ಎಂಬ ಫಲಕ ಹಾಕಿರುವುದು

ಅಂಕಿ-ಅಂಶಗಳು

₹314 ಕೋಟಿ
ಟರ್ಮಿನಲ್ ನಿರ್ಮಾಣ ವೆಚ್ಚ

50 ರೈಲುಗಳು
ಪ್ರತಿದಿನ ಕಾರ್ಯಾಚರಣೆಗೆ ಅವಕಾಶ

ದಿನಕ್ಕೆ 50 ರೈಲು ಕಾರ್ಯಾಚರಣೆ

ಪ್ರತಿ ದಿನ 50 ರೈಲುಗಳು ಬಂದು ಹೋಗಲು ಸಾಧ್ಯವಾಗುವಷ್ಟು ವ್ಯವಸ್ಥೆ ಈ ನಿಲ್ದಾಣದಲ್ಲಿ ಇದೆ. ಈ ನಿಲ್ದಾಣ ಸಾರ್ವಜನಿಕ ಸೇವೆಗೆ ಲಭ್ಯವಾದರೆ ಕೆಎಸ್‌ಆರ್ ರೈಲು ನಿಲ್ದಾಣ, ಯಶವಂತಪುರ ರೈಲು ನಿಲ್ದಾಣಕ್ಕೆ ಇರುವ ಒತ್ತಡ ಕಡಿಮೆಯಾಗಲಿದೆ ಎನ್ನುತ್ತಾರೆ ಅಧಿಕಾರಿಗಳು.

ದೆಹಲಿ, ಚೆನ್ನೈ, ಹೈದರಾಬಾದ್, ಮುಂಬೈ, ಹುಬ್ಬಳ್ಳಿ ಕಡೆಗೆ ಇದೇ ನಿಲ್ದಾಣದಿಂದ ನೇರವಾಗಿ ರೈಲುಗಳ ಕಾರ್ಯಾಚರಣೆ ಆರಂಭಿಸಲು ಸಾಧ್ಯವಿದೆ. ಆಗ ಎರಡೂ ನಿಲ್ದಾಣಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ. ಅಲ್ಲಿ ಅಗತ್ಯ ಇರುವ ಹೊಸ ಮಾರ್ಗದ ರೈಲುಗಳ ಕಾರ್ಯಾಚರಣೆಗೆ ಅನುಕೂಲ ಆಗಲಿದೆ ಎಂಬುದು ರೈಲ್ವೆ ಇಲಾಖೆಯ ಲೆಕ್ಕಾಚಾರ. ತಡೆ ರಹಿತ ಗೂಡ್ಸ್ ರೈಲುಗಳ ಸಂಚಾರಕ್ಕೆ ಅವಕಾಶ ಇರುವ ಬೆಂಗಳೂರಿನ ಮೊದಲ ರೈಲು ನಿಲ್ದಾಣ ಇದಾಗಿದೆ ಎನ್ನುತ್ತಾರೆ ಅಧಿಕಾರಿಗಳು.

ಕಾಮಗಾರಿ ಮುಗಿದರೂ ಮೀನಮೇಷ

ಕಾಮಗಾರಿ ಮುಗಿದರೂ ಈ ನಿಲ್ದಾಣದಿಂದ ರೈಲುಗಳ ಕಾರ್ಯಾಚರಣೆಗೆ ಮೀನಮೇಷ ಎಣಿಸಲಾಗುತ್ತಿದೆ ಎಂದು ರೈಲ್ವೆ ಹೋರಾಟಗಾರರು ಬೇಸರ ವ್ಯಕ್ತಪಡಿಸುತ್ತಾರೆ. 'ಕಾರ್ಯಾಚರಣೆ ಆರಂಭ ಯಾವಾಗ, ಅದಕ್ಕಿರುವ ತೊಡಕುಗಳೇನು, ಅಗತ್ಯ ಇರುವ ಸಿಬ್ಬಂದಿ ನೇಮಕವಾಗಿದೆಯೇ ಎಂಬುದನ್ನು ಅಧಿಕಾರಿಗಳು ಖಚಿತವಾಗಿ ಹೇಳುತ್ತಿಲ್ಲ' ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ ತಿಳಿಸಿದರು. ಸಮರ್ಪಕ ಸಂಪರ್ಕ ರಸ್ತೆ ಇಲ್ಲದಿರುವುದು ಈ ವಿಳಂಬಕ್ಕೆ ಕಾರಣ ಇರಬಹುದು ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಇ. ವಿಜಯಾ, 'ಹಾಲಿ ಇರುವ ಸಿಬ್ಬಂದಿಯನ್ನೇ ಈ ನಿಲ್ದಾಣಕ್ಕೆ ಬಳಸಿಕೊಳ್ಳಲಾಗುವುದು. ಎಲ್ಲವೂ ಸಿದ್ಧವಿದ್ದು, ಉದ್ಘಾಟನೆಗೆ ದಿನಾಂಕ ನಿಗದಿಯಷ್ಟೇ ಬಾಕಿ ಇದೆ' ಎಂದು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

ಮಹಿಳೆಯರಿಂದ 'ಸ್ಮಾರ್ಟ್ ಮುದ್ದೆ ಸ್ಪೈಸಿ ಫಿಶ್'

ಬೆಂಗಳೂರು: ಮಹಿಳೆಯರೇ ಸೇರಿ ಇಲ್ಲಿನ ರಾಜರಾಜೇಶ್ವರಿ ನಗರದಲ್ಲಿ 'ಸ್ಮಾರ್ಟ್ ಮುದ್ದೆ ಸ್ಪೈಸಿ ಫಿಶ್' ರೆಸ್ಟೋರೆಂಟ್ ಪ್ರಾರಂಭಿಸಿದ್ದಾರೆ.

ನಗರದಲ್ಲಿ ಬುಧವಾರ ಈ ಹೋಟೆಲ್ ಉದ್ಘಾಟಿಸಿದ ರಾಜ್ಯ ಮೀನುಗಾರಿಕೆ ಸಚಿವ ಎಸ್. ಅಂಗಾರ, 'ಮಹಿಳಾ ಉದ್ಯಮಿಗಳೇ ಸೇರಿ ಈ ರೀತಿಯ ರೆಸ್ಟೋರೆಂಟ್ ಪ್ರಾರಂಭಿಸಿರುವುದು ಸ್ವಾಗತಾರ್ಹ. ಪ್ರಧಾನಮಂತ್ರಿಯವರ ನಾರಿಶಕ್ತಿ, ಆತ್ಮನಿರ್ಭರದಂತಹ ಕಲ್ಪನೆಗಳಿಗೆ ಇಂತಹ ಬೆಳವಣಿಗೆಗಳು ಪೂರಕವಾಗಿವೆ' ಎಂದು ಶ್ಲಾಘಿಸಿದರು.

'ಎಂಟು ಮಹಿಳೆಯರು ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ನಗರದ 40 ಕಡೆ ಇಂತಹ ಹೋಟೆಲ್‌ಗಳನ್ನು ಪ್ರಾರಂಭಿಸುವ ಉದ್ದೇಶವಿದೆ' ಎಂದು ರೆಸ್ಟೋರೆಂಟ್ ಮಾಲೀಕರಾದ ಸ್ವಪ್ನಾ ಅರುಣ್ ಹೇಳಿದರು.

ಮಮತಾ ಷಣ್ಮುಗಂ ಅವರೊಂದಿಗೆ ಸೇರಿ ಸ್ವಪ್ನಾ ಈ ಹೋಟೆಲ್ ಪ್ರಾರಂಭಿಸಿದ್ದಾರೆ. 'ಮಹಿಳೆಯರನ್ನು ಸ್ವಾವಲಂಬಿಯಾಗಿಸುವುದರ ಜೊತೆಗೆ ಅವರು ಆರ್ಥಿಕವಾಗಿ ಸಬಲರಾಗಬೇಕು ಎಂಬ ಉದ್ದೇಶದಿಂದ ಈ ರೆಸ್ಟೋರೆಂಟ್ ಪ್ರಾರಂಭಿಸುತ್ತಿದ್ದೇವೆ. ವಿಶೇಷ ಎಂದರೆ, ತಿಂಗಳಿಗೊಮ್ಮೆ ವಾರ್ಡ್‌ನಲ್ಲಿನ ಪೌರಕಾರ್ಮಿಕರಿಗೆ ಉಚಿತವಾಗಿ ಮೀನಿನ ಊಟ ವಿತರಿಸಲಾಗುವುದು' ಎಂದೂ ಹೇಳಿದರು.



ಎಚ್.ಎಂ. ರೇವಣ್ಣ ಮಾ.21ಕ್ಕೆ ಅಭಿನಂದನೆ

ಬೆಂಗಳೂರು: ಎಚ್.ಎಂ. ರೇವಣ್ಣ ಸಾಂಸ್ಕೃತಿಕ ಪ್ರತಿಷ್ಠಾನದ ನೇತೃತ್ವದಲ್ಲಿ ಮಾರ್ಚ್ 21ರಂದು ನಗರದ ಮೈಸೂರು ರಸ್ತೆಯ ಪೂರ್ಣಿಮಾ ಕನ್ವೆನ್ಷನ್ ಸೆಂಟರ್‌ನಲ್ಲಿ ಮಾಜಿ ಸಚಿವ ಎಚ್.ಎಂ. ರೇವಣ್ಣ ಅವರ ಅಭಿನಂದನಾ ಸಮಾರಂಭ ನಡೆಯಲಿದೆ.

ಈ ಕುರಿತು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಎಂ. ನಾಗರಾಜ್, 'ಸಮಾರಂಭದಲ್ಲಿ ರೇವಣ್ಣ ಅವರ ಜೀವನ ಮತ್ತು ಸಾಧನೆಗೆ ಸಂಬಂಧಿಸಿದ 'ಸಂಗತ' ಅಭಿನಂದನಾ ಕೃತಿ, 'ದೃಶ್ಯಯಾನ' ಫೋಟೊ ಸಂಗ್ರಹ ಮತ್ತು 'ಇಟ್ಟ ಹೆಜ್ಜೆ ದಿಟ್ಟ ನಿಲುವು' ಎಂಬ ಕಿರುಚಿತ್ರಗಳನ್ನು ಬಿಡುಗಡೆ ಮಾಡಲಾಗುವುದು' ಎಂದರು.

ಕೇಂದ್ರದ ಮಾಜಿ ಸಚಿವ ಎಂ. ವೀರಪ್ಪ ಮೊಯಿಲಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟಿಸುವರು. ಕೇಂದ್ರದ ಮಾಜಿ ಸಚಿವ ಎಸ್.ಎಂ. ಕೃಷ್ಣ 'ಸಂಗತ' ಕೃತಿಯನ್ನು ಮತ್ತು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ 'ದೃಶ್ಯಯಾನ'ವನ್ನು ಬಿಡುಗಡೆ ಮಾಡುವರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಿರುಚಿತ್ರ ಬಿಡುಗಡೆ ಮಾಡುತ್ತಾರೆ ಎಂದು ತಿಳಿಸಿದರು.

'ಸಂಗತ' ಕೃತಿಯ ಸಂಪಾದಕರಾದ ಹಿರಿಯ ಪತ್ರಕರ್ತ ಲಕ್ಷ್ಮಣ ಕೊಡಸೆ, ನಿವೃತ್ತ ಅಧಿಕಾರಿ ಕಾ.ತ. ಚಿಕ್ಕಣ್ಣ, ಪ್ರತಿಷ್ಠಾನದ ಸದಸ್ಯ ಡಾ.ಬಿ.ಕೆ. ರವಿ, ಕಾರ್ಯದರ್ಶಿ ಟಿ. ಮಂಜಪ್ಪ ಮಾಗೊದಿ ಪತ್ರಿಕಾಗೋಷ್ಠಿಯಲ್ಲಿದ್ದರು.

ವಿಪತ್ತು ನಿರ್ವಹಣೆ ಯೋಜನೆ ಸಿದ್ಧಪಡಿಸಿಲ್ಲ: ಮಾಹಿತಿ

ಬೆಂಗಳೂರು: '2020–21ನೇ ಸಾಲಿನ ರಾಜ್ಯ ವಿಪತ್ತು ನಿರ್ವಹಣಾ ಯೋಜನೆಯನ್ನು ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಸಿದ್ಧಪಡಿಸಿಲ್ಲ. ಆದರೆ, ಕಂದಾಯ ಇಲಾಖೆ ಯೋಜನೆ ತಯಾರಿಸಿದೆ' ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

'ವಿಪತ್ತು ನಿರ್ವಹಣಾ ಕಾಯ್ದೆಯ ಸೆಕ್ಷನ್ 23ರ ಪ್ರಕಾರ ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿಯೇ ಯೋಜನೆ ಸಿದ್ಧಪಡಿಸಬೇಕು. ಈ ಕೆಲಸವನ್ನು ಕಂದಾಯ ಇಲಾಖೆಗೆ ವರ್ಗಾಯಿಸಲು ಕಾಯ್ದೆಯಲ್ಲಿ ಅವಕಾಶ ಇಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ.

'ಕಾನೂನಿನ ಪ್ರಕಾರ ಸಿದ್ಧವಾಗದ ಈ ಯೋಜನೆಯನ್ನು ಕಾರ್ಯಕಾರಿ ಸಮಿತಿ ಪರಿಶೀಲಿಸಿ ನವೀಕರಿಸುತ್ತದೆಯೇ, ಇಲ್ಲವೇ ಎಂಬುದರ ಬಗ್ಗೆ ಹೇಳಿಕೆ ಸಲ್ಲಿಸಬೇಕು' ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿತು.

ಶುಲ್ಕ ಹೆಚ್ಚಿಸದಂತೆ ಸುತ್ತೋಲೆ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಶುಲ್ಕದ ವಿಷಯದಲ್ಲಿ ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ(-ಕೆಎಂಎಸ್) ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ಆಧರಿಸಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಲು ಆದೇಶಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಮತ್ತು ಆಯುಕ್ತ ಅನ್ಬುಕುಮಾರ್ ಅವರಿಗೆ ನೋಟಿಸ್ ನೀಡಲು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿದೆ.

'ಆಡಳಿತ ಮಂಡಳಿಗಳ ಮನವಿ ಪರಿಗಣಿಸುವಂತೆ ಹೈಕೋರ್ಟ್ ಮೌಖಿಕ ಆದೇಶ ನೀಡಿದೆ. ಈ ಆದೇಶವನ್ನು ಅಧಿಕಾರಿಗಳು ಧಿಕ್ಕರಿಸಿದ್ದಾರೆ. 2020–21ನೇ ಸಾಲಿನ ಶುಲ್ಕವನ್ನು ಹೆಚ್ಚಿಸಿದರೆ ಕ್ರಮ ಕೈಗೊಳ್ಳುವುದಾಗಿ ಸುತ್ತೋಲೆ ಹೊರಡಿಸಿದ್ದಾರೆ. ಆ ಮೂಲಕ ಶಾಲಾ ಆಡಳಿತ ಮಂಡಳಿಗಳ ಸಾಂವಿಧಾನಿಕ ಹಕ್ಕು ಕಸಿದುಕೊಳ್ಳಲಾಗಿದೆ' ಎಂದು ಅರ್ಜಿದಾರರು ಆರೋಪಿಸಿದ್ದಾರೆ.

'ಖಾಸಗಿ ಶಾಲೆಗಳಲ್ಲಿ 55 ಸಾವಿರಕ್ಕೂ ಹೆಚ್ಚು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇದ್ದಾರೆ. 15 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಶುಲ್ಕ ಹೆಚ್ಚಳ ಮಾಡದಿದ್ದರೆ ಶಾಲೆಗಳನ್ನು ನಡೆಸುವುದು ಕಷ್ಟವಾಗಲಿದೆ' ಎಂದು ಹೇಳಿದ್ದಾರೆ. ವಿಚಾರಣೆಯನ್ನು ಏಪ್ರಿಲ್ 16ಕ್ಕೆ ಪೀಠ ಮುಂದೂಡಿತು.



ಐಎಂಎ: ಆಸ್ತಿ ಮುಟ್ಟುಗೋಲಿಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣ ಸಂಬಂಧ ಆಸ್ತಿ ಮುಟ್ಟುಗೋಲು ವಿಷಯದಲ್ಲಿ ಸ್ವತಂತ್ರವಾಗಿ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮಾಜಿ ಶಾಸಕ ರೋಷನ್ ಬೇಗ್ ಅವರಿಗೆ ಸೇರಿದ ಆಸ್ತಿ ಮುಟ್ಟುಗೋಲು ಆದೇಶ ಹೊರಡಿಸಲು ಸಿಬಿಐನಿಂದ ಕೆಲ ಮಾಹಿತಿ ಕೇಳಿದ್ದಕ್ಕೆ ಪ್ರತಿಕ್ರಿಯೆಯಾಗಿ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಹೇಂದ್ರ ಜೈನ್ ಸಲ್ಲಿಸಿದ್ದ ಅನುಸರಣಾ ಪ್ರಮಾಣ ಪತ್ರವನ್ನು ಪರಿಶೀಲಿಸಿದ ಪೀಠ, 'ಸಿಬಿಐ ಅಂತಿಮ ವರದಿ ನೀಡುವ ತನಕ ರಾಜ್ಯ ಸರ್ಕಾರ ಕಾಯಲು ಆಗುವುದಿಲ್ಲ. ಅಂತಿಮ ವರದಿಗೆ ಕಾಯುತ್ತಿದ್ದರೆ ಅಷ್ಟರಲ್ಲಿ ಆಸ್ತಿಯೇ ಅಸ್ತಿತ್ವದಲ್ಲಿ ಇಲ್ಲದಂತೆ ಆಗಬಹುದು. ಸಿಬಿಐನಿಂದ ಮಾಹಿತಿ ಕೇಳುವ ನಿಲುವು ಸಂಪೂರ್ಣ ತಪ್ಪು. ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ಕೆಪಿಐಡಿ) ಕಾಯ್ದೆ 2004ರ ಅಡಿಯಲ್ಲಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆ' ಎಂದು ಪೀಠ ಹೇಳಿತು.

ಈವರೆಗೆ ₹4.9 ಕೋಟಿಯನ್ನು 3,243 ಹಕ್ಕುದಾರರಿಗೆ ವರ್ಗಾಯಿಸಲಾಗಿದೆ ಎಂದು ಐಎಂಎ ಪ್ರಕರಣದಲ್ಲಿ ನೇಮಕಗೊಂಡಿರುವ ಸಕ್ಷಮ ಪ್ರಾಧಿಕಾರ ಮಾಹಿತಿ ನೀಡಿತು.

ನಗರದಲ್ಲಿ ಇಂದು

ಬೆಂಗಳೂರು ಜಿಲ್ಲಾ ಮಹಿಳಾ ಕೈಗಾರಿಕೆ ಹಾಗೂ ಉದ್ಯಮಿಗಳ ಸಮಿತಿ ಅನಾವರಣ: ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ, ಮುಖ್ಯ ಅತಿಥಿ: ಶಾಸಕರಾದ ಶಾಮನೂರು ಶಿವಶಂಕರಪ್ಪ, ಈಶ್ವರ ಖಂಡ್ರೆ, ಗೌರವ ಅತಿಥಿಗಳು: ಮಧುರ ಅಶೋಕ್, ಅರುಣಾ ದೇವಿ, ಉಮೇಶ್ ಎಚ್. ಪಾಟೀಲ, ಗಂಗಾಂಬಿಕೆ ಮಲ್ಲಿಕಾರ್ಜುನ, ಭಾರತಿ ಮುಗ್ದಮ್, ಭ್ರಮರಾಂಬಾ ಶಿವಶಂಕರ್, ಆಯೋಜನೆ: ಅಖಿಲ ಭಾರತ ವಿರಶೈವ ಮಹಾಸಭಾ, ಸ್ಥಳ: ವೀರಶೈವ ಲಿಂಗಾಯತ ಭವನ, ರಮಣಮಹರ್ಷಿ ರಸ್ತೆ, ಸದಾಶಿವನಗರ, ಬೆಳಿಗ್ಗೆ 9.30

ಕರಕುಶಲ ವಸ್ತುಗಳ ಪ್ರದರ್ಶನ: 23 ರಾಜ್ಯಗಳ 77 ಕಲಾವಿದರು ಭಾಗಿ, ಉದ್ಘಾಟನೆ: ವೀಣಾ ಜೈನ್, ಆಯೋಜನೆ: ಇಂಡಿಯನ್ ಆರ್ಟ್ ಆ್ಯಂಡ್ ಕ್ರಾಫ್ಟ್ ಬಜಾರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ 4

ಪುಸ್ತಕ ಬಿಡುಗಡೆ: ಎನ್. ಪ್ರಭಾಕರ್ ಅವರ 'ಗೋಲ್ಡನ್ ಗೇಟ್', ಬಿಡುಗಡೆ: ಕೆ.ಎಸ್. ಈಶ್ವರಪ್ಪ, ಅಧ್ಯಕ್ಷತೆ: ನಾ. ದಾಮೋದರ ಶೆಟ್ಟಿ, ಕೃತಿ ಪರಿಚಯ: ರಾಜಶೇಖರ ಮಠಪತಿ, ಉಪಸ್ಥಿತಿ: ಎನ್. ಪ್ರಭಾಕರ್, ಎಸ್.ಎಲ್.ಎನ್. ಸ್ವಾಮಿ, ರವೀಂದ್ರ ನಾಥ್ ಸಿರಿವರ, ಆಯೋಜನೆ: ಸ್ವರ ಪ್ರಿಂಟ್ ಆ್ಯಂಡ್ ಪಬ್ಲಿಕೇಷನ್, ಸ್ಥಳ: ದೇವರಾಜು ಅರಸು ಸಭಾಂಗಣ, ಚಿತ್ರಕಲಾ ಪರಿಷತ್, ಸಂಜೆ 5

ಜೆಇಇ: ಬಿ.ಆರ್ಕ್ ಫಲಿತಾಂಶ ಪ್ರಕಟ

ನವದೆಹಲಿ: ಜೆಇಇ (ಮೇನ್ಸ್) ಪರೀಕ್ಷೆಯ ಬಿ.ಆರ್ಕ್ ಮತ್ತು ಬಿ. ಪ್ಲಾನಿಂಗ್ ಪರೀಕ್ಷೆಗಳ ಫಲಿತಾಂಶವನ್ನು ಗುರುವಾರ ಪ್ರಕಟಿಸಲಾಗಿದ್ದು, ಇಬ್ಬರು ವಿದ್ಯಾರ್ಥಿಗಳು 100ರಷ್ಟು ಎನ್‌ಟಿಎ ಅಂಕಗಳನ್ನು ಗಳಿಸಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಫೆಬ್ರುವರಿ 23ರಂದು ಈ ಪರೀಕ್ಷೆ ನಡೆಸಿತ್ತು. ತೆಲಂಗಾಣದ ಜೊಸ್ಯುಲಾ ವೆಂಕಟ ಆದಿತ್ಯ ಮತ್ತು ಮಹಾರಾಷ್ಟ್ರದ ಆದಿತ್ಯ ಸುನೀಲ್ ಜಾಧವ್ ಬಿ.ಆರ್ಕ್ ಮತ್ತು ಬಿ.ಪ್ಲಾನಿಂಗ್‌ಗೆ ಕ್ರಮವಾಗಿ 100 ಅಂಕಗಳನ್ನು ಗಳಿಸಿದ್ದಾರೆ. ಕರ್ನಾಟಕದಲ್ಲಿ ಇ.ಎಸ್. ಮನೋಜ್ ಮತ್ತು ಪಿ. ಸಾಯಿ ಕೃಷ್ಣ ಬಿ.ಆರ್ಕ್ ಮತ್ತು ಬಿ.ಪ್ಲಾನಿಂಗ್‌ನಲ್ಲಿ ಮೊದಲ ಸ್ಥಾನಗಳನ್ನು ಪಡೆದಿದ್ದಾರೆ. ಬಿ.ಆರ್ಕ್‌ಗೆ 59,962 ವಿದ್ಯಾರ್ಥಿಗಳು ಮತ್ತು ಬಿ. ಪ್ಲಾನಿಂಗ್‌ಗೆ 25,810 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಅನಾವರಣ

ರಾಜರಾಜೇಶ್ವರಿನಗರ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ವೇದಿಕೆಯ ವತಿಯಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಅನಾವರಣ, ಗ್ರಾಮದ ಬಿಎಸ್‌ಎಫ್ ಯೋಧ ಕಿರಣ್‌ಕುಮಾರ್ ಅವರಿಗೆ ಬೆಳ್ಳಿ ಕಿರೀಟಧಾರಣೆ ಮತ್ತು ರಕ್ತದಾನ ಶಿಬಿರವನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಗುಲಗಂಜನಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಮೋಹಳ್ಳಿ ಗ್ರಾಮಪಂಚಾಯಿತಿ ಸದಸ್ಯ ಭೀಮನಕುಪ್ಪೆ ಜಿ.ಮಹೇಶ್ ತಿಳಿಸಿದರು.

ಕಾಗಿನೆಲೆ ಕನಕಗುರು ಪೀಠಾಧ್ಯಕ್ಷ ನಿರಂಜನಾನಂದಪುರಿ ಸ್ವಾಮಿಜಿ, ಹೊಸದುರ್ಗ ಮಠದ ಈಶ್ವರಾನಂದಪುರಿ ಸ್ವಾಮೀಜಿ, ರಾಮಾನುಜ ಮಠದ ತ್ರಿದಂಡಿ ವೆಂಕಟರಾಮಾನುಜ ಜೀಯರ್, ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಹೆಗಡೆ ನಗರದ ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆಗೆ ಹಸ್ತಾಂತರ

ಎಂಬೆಸ್ಸಿ ಆರ್‌ಇಐಟಿಯಿಂದ ₹4.5 ಕೋಟಿ ವೆಚ್ಚದ ಶಾಲೆ

ಪ್ರಜಾವಾಣಿ ವಾರ್ತೆ

ಯಲಹಂಕ: ನಗರದ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿರುವ ಎಂಬೆಸ್ಸಿ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ (ಆರ್‌ಇಐಟಿ) ವತಿಯಿಂದ ₹4.5 ಕೋಟಿ ವೆಚ್ಚದಲ್ಲಿ ಹೆಗಡೆ ನಗರದಲ್ಲಿ ದೊಡ್ಡ ಶಾಲೆಯನ್ನು ನಿರ್ಮಿಸಲಾಗಿದೆ. ಈ ಕಟ್ಟಡವನ್ನು ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆಗೆ ಬುಧವಾರ ಹಸ್ತಾಂತರಿಸಲಾಯಿತು.

ಎಎನ್‌ಝಡ್ ಸ್ಮಾರ್ಟ್ ಸೆಂಟರ್ ಕಂಪನಿಯ ಸಹಯೋಗದಲ್ಲಿ ಎಂಬೆಸ್ಸಿ ಸಮೂಹ ಈ ಶಾಲೆಯನ್ನು ನಿರ್ಮಿಸಿದೆ. 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಉಪಯೋಗ ಪಡೆಯಲಿದ್ದಾರೆ.

ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ವಿ. ಅನ್ಬುಕುಮಾರ್, 'ಎಂಬೆಸ್ಸಿ ಸಮೂಹ ಮತ್ತು ಎಎನ್‌ಝಡ್‌ನಂತಹ ಕಾರ್ಪೊರೇಟ್ ಕಂಪನಿಗಳು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಇಂತಹ ಅತ್ಯುತ್ತಮ ಕಟ್ಟಡ ನಿರ್ಮಿಸಿರುವುದು ಅತ್ಯಂತ ಸ್ವಾಗತಾರ್ಹ. ಶಾಲಾ ಕಟ್ಟಡದಲ್ಲಿನ ಅತ್ಯಾಧುನಿಕ ಸೌಲಭ್ಯ ಮತ್ತು ವಾತಾವರಣವು ಮಕ್ಕಳ ಏಳಿಗೆಗೆ ಪೂರಕವಾಗುವುದಲ್ಲದೆ, ಶಿಕ್ಷಣದ ಗುಣಮಟ್ಟ ಹೆಚ್ಚಲು ಸಹಕಾರಿಯಾಗಲಿವೆ' ಎಂದರು.

15 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ತಲೆ ಎತ್ತಿರುವ ಈ ಶಾಲೆಯಲ್ಲಿ 19 ಕೊಠಡಿಗಳಿವೆ. ಸಿಬ್ಬಂದಿ ಕೊಠಡಿ, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ವಿವಿಧೋದ್ದೇಶದ ಸಭಾಂಗಣ, ಶೌಚಾಲಯ, ಶುದ್ಧ ಕುಡಿಯುವ ನೀರು, ಮಳೆ ನೀರು ಸಂಗ್ರಹ ವ್ಯವಸ್ಥೆ ಸೇರಿದಂತೆ ಎಲ್ಲ ಮೂಲ ಮತ್ತು ಅತ್ಯಾಧುನಿಕ ಸೌಲಭ್ಯಗಳು ಈ ಕೊಠಡಿಯಲ್ಲಿವೆ.

ಶಾಸಕ ಕೃಷ್ಣ ಬೈರೇಗೌಡ, ಎಂಬೆಸ್ಸಿ ಸಮೂಹದ ನಿರ್ದೇಶಕ ಜಿತು ವಿರ್ವಾನಿ, ಎಎನ್‌ಝಡ್ ಬೆಂಗಳೂರು ಸರ್ವಿಸ್ ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ವಿ. ವೆಂಕಟರಾಮನ್ ಇದ್ದರು.



ಎಂಬೆಸ್ಸಿ ಆರ್‌ಇಐಟಿ ಮತ್ತು ಎಎನ್‌ಝಡ್ ಕಂಪನಿ ವತಿಯಿಂದ ನಿರ್ಮಿಸಿ ಸರ್ಕಾರಿ ಶಾಲೆಗೆ ಹಸ್ತಾಂತರಿಸಲಾಗಿರುವ ಶಾಲಾ ಕಟ್ಟಡದ ಹೊರನೋಟ

ಹೊರ ರಾಜ್ಯ ಗುತ್ತಿಗೆದಾರರಿಗೆ ಕಡಿವಾಣ ಹಾಕಲು ಆಗ್ರಹ

‘ತಳಿ ದೋಷದಿಂದ ಕಳಪೆ ಬೆಲ್ಲ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಜಿಲ್ಲೆಯಲ್ಲಿ ಬೆಳೆಯಲಾಗುವ ಕಬ್ಬಿನ ತಳಿಯಲ್ಲಿ ಸಿಹಿ ಅಂಶ ಕಡಿಮೆಯಾಗಿದ್ದರಿಂದ ಹಾಗೂ ತಳಿಯ ದೋಷದಿಂದಾಗಿ, ಗಾಣದ ಮಾಲೀಕರು ಸಕ್ಕರೆ ಹಾಗೂ ರಾಸಾಯನಿಕ ಬಳಸಿ ಬೆಲ್ಲ ತಯಾರಿಸುವ ಅನಿವಾರ್ಯತೆಗೆ ಸಿಲುಕಿದ್ದಾರೆ’ ಎಂದು ಕಬ್ಬಿನ ಗಾಣದ ಮಾಲೀಕರ ಸಂಘದ ಅಧ್ಯಕ್ಷ ಸೋಮಶೇಖರೇಗೌಡ ಗುರುವಾರ ಇಲ್ಲಿ ಹೇಳಿದರು.

‘ರೈತರು ಮೊದಲು ಸಿಒ–419 ತಳಿಯ ಕಬ್ಬು ಬೆಳೆಯುತ್ತಿದ್ದರು. ಈ ಕಬ್ಬಿನಲ್ಲಿ ಸಕ್ಕರೆ ಅಂಶ ಹೆಚ್ಚಾಗಿತ್ತು. ಆದರೆ, ಅದು ಬಹಳ ಬೇಗನೇ ರೋಗಕ್ಕೆ ತುತ್ತಾಗುತ್ತಿದ್ದ ಕಾರಣ ತಳಿ ಬದಲಾವಣೆ ಮಾಡಬೇಕಾಯಿತು’ ಎಂದೂ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘90ರ ದಶಕದಲ್ಲಿ ರೈತರು 62/175 ತಳಿಯ ಕಬ್ಬು ಬೆಳೆಯಲು ಆರಂಭಿಸಿದರು. ಈ ತಳಿಯಲ್ಲಿ ಸಿಹಿ ಅಂಶ ಹೆಚ್ಚಿದ್ದು, ಇಳುವರಿ ಕುಂಠಿತವಾಯಿತು. ನಷ್ಟದಲ್ಲಿದ್ದ ನಮ್ಮ ಆಲೆಮನೆಗಳನ್ನು ಹೊರರಾಜ್ಯದವರು ಗುತ್ತಿಗೆ ಪಡೆದರು. ರಾಸಾಯನಿಕ ಬಳಸಿ ಬೆಲ್ಲ ತಯಾರಿಸಿದರು. ಮಂಡ್ಯ ಬೆಲ್ಲದ ಗುಣಮಟ್ಟವನ್ನು ಹಾಳುಗೆಡವಿದರು’ ಎಂದರು.

‘ಈಚೆಗೆ ಹೊಸದಾಗಿ ವಿಸಿಎಫ್–517 ಕಬ್ಬಿನ ತಳಿ ಬೆಳೆಯಲಾಗುತ್ತಿದ್ದು ಇಳುವರಿ ಮತ್ತು ಸಕ್ಕರೆ ಅಂಶ ಚೆನ್ನಾಗಿದೆ. ಈಗಲೂ ಸ್ಥಳೀಯ ಆಲೆಮನೆ ಮಾಲೀಕರು ಶುದ್ಧ ಬೆಲ್ಲ ತಯಾರಿಸುತ್ತಿದ್ದಾರೆ. ಹೊರರಾಜ್ಯಗಳ ಗುತ್ತಿಗೆದಾರರು ಹೊಳಪಿಗಾಗಿ ರಾಸಾಯನಿಕ ಬಳಕೆ ಮುಂದುವರಿಸಿದ್ದಾರೆ’ ಎಂದರು.

‘ಹೊರರಾಜ್ಯಗಳ ಗುತ್ತಿಗೆದಾರರ ಹಾವಳಿ ತಡೆಯುವಂತೆ ಹಲವು ಬಾರಿ ದೂರು ಕೊಟ್ಟಿದ್ದೆವು. ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆದರೆ ಈಗ ದೂರುಗಳು ಹೆಚ್ಚಾದ ಕಾರಣ, ಆಹಾರ ಸುರಕ್ಷತಾ ಅಧಿಕಾರಿಗಳು ಕಳಪೆ ಬೆಲ್ಲ ಜಪ್ತಿ ಮಾಡುತ್ತಿದ್ದಾರೆ’ ಎಂದರು.

‘ಶುದ್ಧ ಮಂಡ್ಯ ಬೆಲ್ಲಕ್ಕೆ ಈಗಲೂ ಕೇರಳದಲ್ಲಿ ಬೇಡಿಕೆ ಇದೆ. ಆದರೆ ಮಹಾರಾಷ್ಟ್ರ, ಮಧ್ಯಪ್ರದೇಶದಿಂದ ಕಳಪೆ ಬೆಲ್ಲ ತಂದು, ಪುನರ್ ತಯಾರಿಸಿ ಕಳುಹಿಸಿದ ಪರಿಣಾಮ ತಿರಸ್ಕೃತವಾಗಿದೆ’ ಎಂದರು.

‘ಬೆಲ್ಲದ ಗುಣಮಟ್ಟ ಕಳಪೆಯಾಗಲು ಸರ್ಕಾರದ ನೀತಿಗಳೂ ಕಾರಣವಾಗಿದೆ. ಸಕಾಲಕ್ಕೆ ನಾಲೆಗೆ ನೀರು ಹರಿಸದಿರುವುದು, ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದಿರುವುದು ಕಾರಣ. ಆತ್ಮನಿರ್ಭರ ಭಾರತ ಯೋಜನೆಯಡಿ ಆಲೆಮನೆಗಳಿಗೆ ಪುನಶ್ಚೇತನ ನೀಡಬೇಕು. ಸ್ಥಳೀಯವಾಗಿ ಬೆಲ್ಲದ ಗುಣಮಟ್ಟ ಪರೀಕ್ಷಿಸುವ ವ್ಯವಸ್ಥೆ ರೂಪಿಸಬೇಕು’ ಎಂದು ಒತ್ತಾಯಿಸಿದರು.

ಪರಿಷತ್‌ನಲ್ಲಿ ಪ್ರತಿಧ್ವನಿಸಿದ ‘ಮಂಡ್ಯ ಬೆಲ್ಲ’

ಬೆಂಗಳೂರು: ‘ಮಂಡ್ಯ ಬೆಲ್ಲ ತಿರಸ್ಕರಿಸಿದ ಕೇರಳ’ ಶೀರ್ಷಿಕೆಯಲ್ಲಿ ‘ಪ್ರಜಾವಾಣಿ’ಯಲ್ಲಿ ಇದೇ 16ರಂದು ಪ್ರಕಟವಾದ ವಿಶೇಷ ವರದಿ ವಿಧಾನ ಪರಿಷತ್‌ನಲ್ಲಿ ಗುರುವಾರ ಪ್ರತಿಧ್ವನಿಸಿತು.

‘ಮಂಡ್ಯ ಬೆಲ್ಲ’ ಮಾನವ ಬಳಕೆಗೆ ಯೋಗ್ಯವಲ್ಲ ಎಂಬ ಕಾರಣ ನೀಡಿ ಕೇರಳ ಸರ್ಕಾರ ತಿರಸ್ಕರಿಸಿರುವ ಬಗ್ಗೆ ಪ್ರಕಟವಾದ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, ‘ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು’ ಎಂದು ಆಗ್ರಹಿಸಿದರು.

‘ಗುಜರಾತ್ ಈಗಾಗಲೇ ಮಂಡ್ಯ ಬೆಲ್ಲ ಖರೀದಿ ನಿಷೇಧಿಸಿದ್ದು, ಕೇರಳ ಎರಡನೇ ರಾಜ್ಯವಾಗಿದೆ. ‘ಸಕ್ಕರೆ ನಾಡು’ ಎಂದು ಕರೆಸಿಕೊಳ್ಳುವ ಮಂಡ್ಯ ಜಿಲ್ಲೆ ಈಗ ಕಳಪೆ ಹಾಗೂ ರಾಸಾಯನಿಕಯುಕ್ತ ಬೆಲ್ಲ ಉತ್ಪಾದನೆಯಲ್ಲಿ ಕುಖ್ಯಾತಿ ಪಡೆಯುತ್ತಿದೆ. ಎಪಿಎಂಸಿ ಸರ್ಕಾರ ‘ಮಂಡ್ಯ ಬೆಲ್ಲ’ ಎಂಬ ಬ್ರ್ಯಾಂಡ್ ಹೆಸರಿನಲ್ಲೇ ಮಾರಾಟ ಮಾಡುತ್ತಿದ್ದಾರೆ. ಈ ಹೆಸರಿನಲ್ಲಿ ವರ್ತಕರು ಹಾಗೂ ಕೆಲವು ಆಲೆಮನೆ ಮಾಲೀಕರು ದೊಡ್ಡ ಮಟ್ಟದ ದಂಧೆ ನಡೆಸುತ್ತಿರುವುದು ಈಗ ಬಯಲಾಗಿದೆ. ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಿಂದ ಕಳಪೆ ಬೆಲ್ಲ ತರಿಸಿ, ಆಲೆಮನೆಗಳಲ್ಲಿ ಅದನ್ನು ಕರಗಿಸಿ ಮತ್ತೆ ತಯಾರಿಸಿ ‘ಮಂಡ್ಯ ಬೆಲ್ಲ’ ಬ್ರ್ಯಾಂಡ್ ಮೂಲಕ ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಸರ್ಕಾರ ತುರ್ತು ಗಮನಹರಿಸಬೇಕು’ ಎಂದರು.

ಆಗ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ‘ಆಹಾರ ಸಚಿವರಿಂದ ಈ ಬಗ್ಗೆ ಉತ್ತರ ಕೊಡಿಸಲಾಗುವುದು’ ಎಂದರು.



ಲಾರಿ ಚಾಲಕ ಸಜೀವ ದಹನ

ಹಾಸನ: ನಗರದ ಹೊರವಲಯದ ಬಿಟ್ಟಗೌಡನಹಳ್ಳಿ ಬಳಿ, ಗುರುವಾರ ಬೆಳಿಗ್ಗೆ ಚಲಿಸುತ್ತಿದ್ದ ಲಾರಿಯೊಂದರ ಎಂಜಿನ್‌ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಚಾಲಕ, ತಮಿಳುನಾಡಿನ ತಿರುಮಲೈನ ಅನ್ಬಳಗನ್ (32) ಸಜೀವವಾಗಿ ದಹನವಾಗಿದ್ದಾರೆ.

ತಾಂತ್ರಿಕ ದೋಷದಿಂದ ಎಂಜಿನ್‌ನಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಚಾಲಕ ಹೊರ ಬರಲು ಸಾಧ್ಯವಾಗದೇ ಸೀಟ್‌ನಲ್ಲಿ ಕುಳಿತ ಭಂಗಿಯಲ್ಲೇ ದಹನವಾಗಿದ್ದಾರೆ.

ಮಹದಾಯಿ: ಜಂಟಿ ಪರಿಶೀಲನಾ ಸಮಿತಿ ಭೇಟಿ ಇಂದು

ಬೆಳಗಾವಿ: ಕಳಸಾ ಬಂಡೂರಿ ಯೋಜನಾ ಪ್ರದೇಶವಾದ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿಗೆ ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರದ ಮೂವರು ಅಧಿಕಾರಿಗಳನ್ನು ಒಳಗೊಂಡ ಜಂಟಿ ಪರಿಶೀಲನಾ ಸಮಿತಿಯು ಶುಕ್ರವಾರ (ಮಾರ್ಚ್ 19) ಮಧ್ಯಾಹ್ನ ಭೇಟಿ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕವು ಈಗಾಗಲೇ ಕಳಸಾ ನೀರನ್ನು ತಿರುಗಿಸಿಕೊಂಡಿದೆ ಎಂಬ ಗೋವಾದ ಆರೋಪದ ಹಿನ್ನೆಲೆಯಲ್ಲಿ ಜಂಟಿ ಸಮಿತಿಯ ಪರಿಶೀಲನೆಗೆ ಹಾಗೂ ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಕಳೆದ ತಿಂಗಳು ಆದೇಶ ನೀಡಿತ್ತು. ಕರ್ನಾಟಕದ ನವಿಲುತೀರ್ಥ ಅಣೆಕಟ್ಟಿನ ಸೂಪರಿಂಟೆಂಡಿಂಗ್ ಎಂಜಿನಿಯರ್ ಕೃಷ್ಣೋಜಿರಾವ್, ಗೋವಾದಿಂದ ಸೂಪರಿಂಟೆಂಡಿಂಗ್ ಎಂಜಿನಿಯರ್ ಎಂ.ಕೆ. ಪ್ರಸಾದ್ ಮತ್ತು ಮಹಾರಾಷ್ಟ್ರದಿಂದ ಶ್ರೀಥೋರಟ್ ಸಮಿತಿಯಲ್ಲಿದ್ದಾರೆ.

ಪ್ರತಿಭೆಯನ್ನೇ ನೆಚ್ಚಿಕೊಂಡ ನವೋದ್ಯಮಿಗಳ ಉತ್ಸಾಹಕ್ಕೇ ತಣ್ಣೀರು

ಮೌಲ್ಯಮಾಪನದ ‘ನ್ಯಾಯ’

● ಪ್ರವೀಣ ಕುಮಾರ್ ಪಿ.ವಿ

ಬೆಂಗಳೂರು: ನವೋದ್ಯಮಗಳಿಗೆ ಉತ್ತೇಜನ ನೀಡಲು ಹಮ್ಮಿಕೊಳ್ಳುವ ‘ಐಡಿಯ2ಪಿಒಸಿ’ (ಎಲಿವೇಟ್) ಸ್ಪರ್ಧೆಯಲ್ಲಿ ಮೌಲ್ಯಮಾಪಕರನ್ನು ನೇಮಿಸುವಾಗ ಒಬ್ಬೊರಿಗೊಂದು ನ್ಯಾಯ ಅನುಸರಿಸಲಾಗುತ್ತಿದೆ. ಇದು ಪ್ರತಿಭೆಯನ್ನೇ ನೆಚ್ಚಿಕೊಂಡ ನವೋದ್ಯಮಿಗಳ ಉತ್ಸಾಹಕ್ಕೇ ತಣ್ಣೀರೆರಚುತ್ತಿದೆ ಎಂಬ ದೂರು ವ್ಯಾಪಕವಾಗಿದೆ.

ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಡೆಸಿದ್ದ ‘ಎಲಿವೇಟ್ 2019’ರಲ್ಲಿ ನವೋದ್ಯಮವನ್ನು ಮೂವರು ಮೌಲ್ಯಮಾಪನ ನಡೆಸಿದ್ದರು. ಪ್ರತಿಯೊಬ್ಬ ಮೌಲ್ಯಮಾಪಕ ಗರಿಷ್ಠ 100 ಅಂಕ ನೀಡಬಹುದು. ಅತಿ ಹೆಚ್ಚು ಅಂಕ ಪಡೆಯಲು ನವೋದ್ಯಮಿಗಳು ಈ ಮೂವರು ಮೌಲ್ಯಮಾಪಕರಿಗೆ ಸರಿಯಾದ ವಿವರಣೆ ನೀಡಿಬೇಕಾಗುತ್ತದೆ. ಮೂವರು ತೀರ್ಪುಗಾರರು ನೀಡಿದ ಅಂಕಗಳ ಮೊತ್ತದ ಆಧಾರದಲ್ಲಿ ನವೋದ್ಯಮಗಳಿಗೆ ಆರ್ಥಿಕ ನೆರವು ಒದಗಿಸಲಾಗುತ್ತದೆ.

‘ಕೆಲವು ನವೋದ್ಯಮಗಳು ಮೂವರು ಮೌಲ್ಯಮಾಪಕರಿಗೆ, ಇನ್ನು ಕೆಲವರು ಇಬ್ಬರು ಮೌಲ್ಯಮಾಪಕರಿಗೆ ತಮ್ಮ ಕಾರ್ಯ ಯೋಜನೆ ವಿವರಿಸಬೇಕಾದ ಸ್ಥಿತಿ ಇತ್ತು. ಇನ್ನು ಕೆಲವರು ಒಬ್ಬರಿಗೆ ಮಾತ್ರ ತಮ್ಮ ಕಾರ್ಯಯೋಜನೆ ಮನವರಿಕೆ ಮಾಡಿಕೊಟ್ಟರೂ ಸಾಕಿತ್ತು. ಇದು ಯಾವ ನ್ಯಾಯ. ಒಂದು ವೇಳೆ ಒಬ್ಬ ಮೌಲ್ಯಮಾಪಕ ಕೆಲವು ಸಮಯ ಲಭ್ಯವಿಲ್ಲವೆಂದಾದರೆ ಅವರ ಬದಲು ಬೇರೆಯವರನ್ನು ನೇಮಿಸಿ ಸಮಾನತೆ ಕಾಯ್ದುಕೊಳ್ಳಬೇಕಲ್ಲವೇ ಅಥವಾ ಅವರು ಹಿಂದಿರುಗುವವರೆಗೆ ಮೌಲ್ಯಮಾಪನ ಸ್ಥಗಿತಗೊಳಿಸಬೇಕಲ್ಲವೇ’ ಎಂದು ಪ್ರಶ್ನಿಸುತ್ತಾರೆ ಮೈಸೂರಿನ ಪ್ರವೀಣ್ ಕುಮಾರ್ ಎಂ.ಕೆ.

ಪ್ರತಿಯೊಬ್ಬ ಮೌಲ್ಯಮಾಪಕರು ನೀಡುವ ಅಂಕವೂ ಮುಖ್ಯ. ಒಬ್ಬರು ಅಥವಾ ಇಬ್ಬರು ತೀರ್ಪುಗಾರರ ಅನುಪಸ್ಥಿತಿಯಲ್ಲಿ ಮೌಲ್ಯಮಾಪನ ನಡೆಸಿದಾಗ ನವೋದ್ಯಮಗಳಿಗೆ ಆಗುವ ಹಾನಿ ಏನು ಎಂಬುದನ್ನು ಅವರು ವಿವರಿಸುವುದು ಹೀಗೆ.

‘ಸ್ಪರ್ಧೆಯಲ್ಲಿ ಗೆದ್ದ ನಾರ್ಮ್ ಹೆಲ್ದಿ ಫುಡ್ಸ್ ಆ್ಯಂಡ್ ಬಿವರೇಜಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಕಾರ್ಯಯೋಜನೆಗೆ ಒಬ್ಬರು ತೀರ್ಪುಗಾರರು 53 ಅಂಕಗಳನ್ನು ಹಾಗೂ ಇನ್ನೊಬ್ಬರು 71 ಅಂಕಗಳನ್ನು ನೀಡಿದ್ದರು. ಮೂರನೇ ತೀರ್ಪುಗಾರರು ಉಪಸ್ಥಿತರಿರಲಿಲ್ಲ ಎಂದು ಸರಾಸರಿ ಆಧಾರದಲ್ಲಿ ಅಂಕಗಳನ್ನು ನೀಡಿದ್ದೇ ಆದರೆ, ಆ ನವೋದ್ಯಮಕ್ಕೆ ಒಟ್ಟು 186 ಅಂಕಗಳು ಸಿಗುತ್ತಿದ್ದವು. ಆಗ ಆ ಕಂಪನಿಯು ಗೆಲುವಿನ ಹತ್ತಿರಕ್ಕೂ ಸುಳಿಯಲೂ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ 208ಕ್ಕಿಂತ ಕಡಿಮೆ ಅಂಕ ಪಡೆದ ಯಾವ ಕಂಪನಿಯೂ ಗೆದ್ದಿಲ್ಲ. ಆದರೆ ಅಲ್ಲಿ ಉಪಸ್ಥಿತರಿದ್ದ ಮೂರನೆಯ ತೀರ್ಪುಗಾರರು ಆ ಸಂಸ್ಥೆಗೆ 94 ಅಂಕ ನೀಡಿದ್ದರಿಂದಾಗಿ ಅದು ಆರ್ಥಿಕ ನೆರವು ಪಡೆಯಲು ಅರ್ಹತೆ ಗಿಟ್ಟಿಸಿತು’ ಎಂದರು.

‘ಒಂದೋ, ಎರಡೋ ನವೋದ್ಯಮಗಳ ವಿಷಯದಲ್ಲಿ ಮಾತ್ರ ಹೀಗೆ ಆಗಿಲ್ಲ. ಬಹಳಷ್ಟು ನವೋದ್ಯಮಗಳ ಭವಿಷ್ಯವನ್ನು ತೀರ್ಪುಗಾರರ ಅನುಪಸ್ಥಿತಿಯಲ್ಲೇ ನಿರ್ಧರಿಸಲಾಗಿದೆ. ಈ ಎಡವಟ್ಟಿನಿಂದ ಅನೇಕ ನವೋದ್ಯಮಗಳು ಭವಿಷ್ಯವನ್ನೇ ಕಳೆದುಕೊಂಡಿವೆ’ ಎಂದು ಅವರು ಆರೋಪಿಸಿದರು.

‘ಗೆಲ್ಲಬಲ್ಲ ಸ್ಟಾರ್ಟಪ್ ಗಳನ್ನು ಸೋಲಿಸುವ ಹಾಗೂ ಸೋಲ ಬೇಕಾದ ನವೋದ್ಯಮಗಳನ್ನು ಗೆಲ್ಲಿಸುವ ತಂತ್ರ ಆಯೋಜಕರಿಗೆ ಚೆನ್ನಾಗಿ ಗೊತ್ತು. ಮೂವರು ಮೌಲ್ಯಮಾಪಕರನ್ನು ನೇಮಿಸುವ ನಿಯಮ ಮಾಡಿದ ಬಳಿಕ ಅದಕ್ಕೆ ಬದ್ಧವಾಗಿರಬೇಕು’ ಎನ್ನುತ್ತಾರೆ ಧಾರವಾಡ ಪ್ರಭಂಜನ್ ಎಂ.

‘ತಂಡದ ಸಾಮರ್ಥ್ಯ ಅಳೆಯುವುದಕ್ಕೆ ಯಾವ ಮಾನದಂಡ ಬಳಸಲಾಗುತ್ತಿದೋ ತಿಳಿಯದು. ಉದಾಹರಣೆಗೆ ನಾವು ಪ್ರಸ್ತುತ ಪಡಿಸಿದ ನವೋದ್ಯಮದ ಬಗ್ಗೆ 10 ವರ್ಷ ಅನುಭವವಿದ್ದವರು, ಪಿಎಚ್‌ಡಿ ಮಾಡಿದ, ಉತ್ತಮ ತಾಂತ್ರಿಕ ಹಿನ್ನೆಲೆಯವರೆಲ್ಲ ನಮ್ಮ ತಂಡದಲ್ಲಿದ್ದರು. ಆದರೆ ನಮಗೆ 10ರಲ್ಲಿ ಐದೇ ಅಂಕ ಸಿಕ್ಕಿತು. ಅನುಭವ ಹಾಗೂ ಶೈಕ್ಷಣಿಕ ಅರ್ಹತೆ ಇಲ್ಲದ ಕೆಲವು ತಂಡಗಳು ನಮಗಿಂತ ಹೆಚ್ಚು ಅಂಕ ಪಡೆದಿವೆ. ಖಚಿತ ಮಾನದಂಡ ರೂಪಿಸಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದರೆ ಇಂತಹದ್ದಕ್ಕೆಲ್ಲ ಅವಕಾಶ ಇರುವುದಿಲ್ಲವಲ್ಲವೇ’ ಎಂದು ಪ್ರಶ್ನಿಸುತ್ತಾರೆ.

ಯಾವುದಕ್ಕೆ ಎಷ್ಟು ಅಂಕ?

30 ಅಂಕ — ತಂತ್ರಜ್ಞಾನದ ಹೊಸತನ, ಆವಿಷ್ಕಾರ, ಮತ್ತದರ ಉಪಯುಕ್ತತೆ

20 ಅಂಕ — ತಂತ್ರಜ್ಞಾನದಿಂದ ಆಗುವ ಸಾಮಾಜಿಕ-ಆರ್ಥಿಕ ಪರಿಣಾಮಗಳಿಗೆ

30 ಅಂಕ — ಉದ್ದಿಮೆಯ ಮಾದರಿಗೆ

10 ಅಂಕ — ನವೋದ್ಯಮ ತಂಡದ ಸಾಮರ್ಥ್ಯಕ್ಕೆ

10 ಅಂಕ — ಬಜೆಟ್ ಹಂಚಿಕೆಗೆ

‘ಮೌಲ್ಯಮಾಪಕ ಗೈರಿನಿಂದ ಸ್ಪರ್ಧಿಗೆ ಅನ್ಯಾಯವಾಗಿಲ್ಲ’

‘ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಕೆಲವು ಮೌಲ್ಯಮಾಪಕರ ಗೈರಾಗಿದ್ದುದು ನಿಜ. ಆದರೆ, ಅಂತಹ ಪ್ರಕರಣಗಳಲ್ಲಿ ಇಬ್ಬರು ತೀರ್ಪುಗಾರರ ಅಂಕಗಳ ಸರಾಸರಿಯ ಆಧಾರದಲ್ಲಿ ಫಲಿತಾಂಶವನ್ನು ಘೋಷಿಸಿದ್ದೇವೆ. ಹಾಗಾಗಿ ಸ್ಪರ್ಧಿಗಳಿಗೆ ಅನ್ಯಾಯವಾಗಲು ಸಾಧ್ಯವಿಲ್ಲ’ ಎಂದು ಸಮರ್ಥಿಸಿಕೊಳ್ಳುತ್ತಾರೆ ‘ಸ್ಟಾರ್ಟ್‌ಅಪ್ ಕರ್ನಾಟಕ’ ಮುಖ್ಯಸ್ಥೆ ಚಂಪಾ ಇ.

ನವೋದ್ಯಮ 2



ಜಿಲ್ಲಾಧಿಕಾರಿ ವಾಹನ ತಡೆದು ಪ್ರತಿಭಟಿಸಿದ ಬೆಳ್ಳೂರು ಗ್ರಾಮಸ್ಥರು

ಹುಲಿ ಸೆರೆಗೆ ಹೆಚ್ಚಿದ ಆಗ್ರಹ: ಜಿಲ್ಲಾಧಿಕಾರಿ ಕಾರು ಅಡ್ಡಗಟ್ಟಿ ಆಕ್ರೋಶ

ಪೊನ್ನಂಪೇಟೆ (ಕೊಡಗು): ಅಪಾಯಕಾರಿಯಾಗಿರುವ ಹುಲಿಯನ್ನು ಸೆರೆ ಹಿಡಿಯುವ ವಿಚಾರದಲ್ಲಿ, ಕೊಡಗು ಜಿಲ್ಲಾಧಿಕಾರಿ ಸಮರ್ಪಕವಾಗಿ ಸ್ಪಂದಿಸಿಲ್ಲ ಎಂದು ಆರೋಪಿಸಿ, ಬೆಳ್ಳೂರಿನ ಗ್ರಾಮಸ್ಥರು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರ ಕಾರನ್ನು ಅಡ್ಡಗಟ್ಟಿ ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

ರೈತರು ಹಾಗೂ ಗ್ರಾಮಸ್ಥರ ಪ್ರತಿಭಟನೆ ಎಂದಿನಂತೆ ಮುಂದುವರಿದಿತ್ತು. ಆಗ ಪ್ರತಿಭಟನೆ ನಸ್ಥಳದ ಸಮೀಪದಲ್ಲೇ ಜಿಲ್ಲಾಧಿಕಾರಿ ಕಾರು ತೆರಳುತ್ತಿತ್ತು. ಇದನ್ನು ಗಮನಿಸಿದ ಪ್ರತಿಭಟನಕಾರರು, ವಾಹನ ತಡೆದು ಹುಲಿ ಸೆರೆ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಪೊನ್ನಂಪೇಟೆ-ಕುಟ್ಟ ಹೆದ್ದಾರಿ ಬಂದ್ ಮಾಡಿಯೂ ಪ್ರತಿಭಟಿಸಿದರು.

ಪ್ರತಿಭಟನನಿರತರ ಒತ್ತಾಯದ ಮೇರೆಗೆ ಪ್ರಭಾರ ಅರಣ್ಯ ಸಂರಕ್ಷಣಾಧಿಕಾರಿ ತಾಕತ್ ಸಿಂಗ್ ರಣಾವತ್ ಸ್ಥಳಕ್ಕೆ ಭೇಟಿ ನೀಡಿದರು. ಆ ನಂತರವಷ್ಟೇ ಜಿಲ್ಲಾಧಿಕಾರಿ ವಾಹನ ತೆರಳಲು ಅವಕಾಶವಾಯಿತು.

ಇದಕ್ಕೂ ಮುನ್ನ, ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾತನಾಡಿ, ‘ಅರಣ್ಯ ಇಲಾಖೆಯಿಂದ ಕಾರ್ಯಾಚರಣೆ ನಡೆದಿದ್ದು, ಜನರು ಸಹಕರಿಸಬೇಕು. ಆದಷ್ಟು ಬೇಗ ಹುಲಿಯನ್ನು ಸೆರೆ ಹಿಡಿಯಲಾಗುವುದು’ ಎಂದರು. ಈ ಮಾತಿಗೆ ಸಿಟ್ಟಿಗೆದ್ದ ಗ್ರಾಮಸ್ಥರು, ‘ರೈತರು ಅರಣ್ಯ ಇಲಾಖೆಗೆ ಸಹಕರಿಸುತ್ತಿಲ್ಲ ಎಂಬರ್ಥದಲ್ಲಿ ಮಾತನಾಡಿದ್ದಾರೆ’ ಎಂದು ಕಿಡಿಕಾರಿದರು.

ಪ್ರಭಾರ ಅರಣ್ಯ ಸಂರಕ್ಷಣಾಧಿಕಾರಿ ತಾಕತ್ ಸಿಂಗ್ ರಣಾವತ್ ಮಾತನಾಡಿ, ‘ಶಾರ್ಪ್ ಶೂಟರ್‌ಗಳು ವೈಯಕ್ತಿಕ ಕಾರಣದಿಂದ ಕಾರ್ಯಾಚರಣೆಯಿಂದ ತೆರಳಿದ್ದಾರೆ. ಎರಡು ಬಾರಿ ಹುಲಿ ಕಾಣಿಸಿಕೊಂಡಿದ್ದು, ಸೆರೆಹಿಡಿಯಲು ಆಗಲಿಲ್ಲ. ಇನ್ನು, ಪರಿಹಾರದ ಚೆಕ್ ನೀಡಲು ಕುಟುಂಬದ ಸದಸ್ಯರಲ್ಲಿ ಬ್ಯಾಂಕ್ ಖಾತೆ ಇಲ್ಲದಿರುವುದು ತೊಂದರೆಯಾಗಿದೆ. ಆದಷ್ಟು ಬೇಗ ಪರಿಹಾರ ಧನ ವಿತರಿಸುವ ಕೆಲಸ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಸಿ.ಡಿ. ಪ್ರಕರಣ; ಆರೋಪಿಗಳಿಗಾಗಿ ಮುಂದುವರಿದ ಎಸ್‌ಐಟಿ ಹುಡುಕಾಟ

ಯುವತಿಯ ಹಾಸಿಗೆಯಡಿ ₹9 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ.ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು ಸಿ.ಡಿ.ಯಲ್ಲಿರುವ ಯುವತಿ ವಾಸವಿದ್ದ ಬೆಂಗಳೂರಿನ ಆರ್.ಟಿ.ನಗರದಲ್ಲಿರುವ ಕೊಠಡಿಯಲ್ಲಿ ಪರಿಶೀಲನೆ ನಡೆಸಿದ್ದು, ಕೊಠಡಿಯ ಹಾಸಿಗೆ ಕೆಳಗೆ ಮುಚ್ಚಿಟ್ಟಿದ್ದ ₹ 9 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ. ಪ್ರಕರಣ ಸಂಬಂಧ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು, ಪ್ರಮುಖ ಆರೋಪಿಗಳ ಪತ್ತೆಗಾಗಿ ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ. ಇದುವರೆಗೂ 40ಕ್ಕೂ ಹೆಚ್ಚು ಮಂದಿಯನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆ ಪಡೆದಿದ್ದಾರೆ.

ರಮೇಶ ದೂರಿನಡಿ ಸದಾಶಿವನಗರ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧರಿಸಿ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯುತ್ತಿರುವ ಅಧಿಕಾರಿಗಳು, ನಿತ್ಯವೂ ಹಲವೆಡೆ ದಾಳಿ ಮಾಡಿ ಪರಿಶೀಲನೆ ನಡೆಸುತ್ತಿದ್ದಾರೆ.

‘ಎಂಜಿನಿಯರಿಂಗ್ ವ್ಯಾಸಂಗ ಮುಗಿಸಿ ನಗರಕ್ಕೆ ಬಂದಿದ್ದ ಯುವತಿ, ಆರ್.ಟಿ.ನಗರದ ಮನೆಯೊಂದರ ಮಹಡಿಯಲ್ಲಿದ್ದ ಕೊಠಡಿಯಲ್ಲಿ ಒಂಟಿಯಾಗಿ ವಾಸವಿದ್ದರು. ಮಾ. 2ರಂದು ಸಿ.ಡಿ. ಪ್ರಕರಣ ಸಂಬಂಧ ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ದೂರು ನೀಡುವುದಕ್ಕೂ ಮುನ್ನವೇ ಯುವತಿ ಕೊಠಡಿ ಖಾಲಿ ಮಾಡಿಕೊಂಡು ಹೋಗಿದ್ದಾರೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ಆರಂಭದಲ್ಲಿ ಕೊಠಡಿ ಹೊರಭಾಗದಲ್ಲಿ ಮಾತ್ರ ಪರಿಶೀಲನೆ ನಡೆಸಲಾಗಿತ್ತು. ಇದೀಗ ನ್ಯಾಯಾಲಯದ ವಾರೆಂಟ್ ಪಡೆದು ಮಾಲೀಕರ ಸಮ್ಮುಖದಲ್ಲಿ ಕೊಠಡಿಯೊಳಗೆ ಪರಿಶೀಲನೆ ನಡೆಸಲಾಯಿತು. ಹಾಸಿಗೆಯಡಿ ಇಟ್ಟಿದ್ದ ಬ್ಯಾಗೊಂದರಲ್ಲಿ ₹9 ಲಕ್ಷ ನಗದು ಪತ್ತೆಯಾಗಿದೆ. ಅಷ್ಟು ಹಣ ಯುವತಿ ಕಡೆ ಹೇಗೆ ಬಂತು?’ ಎಂದೂ ಮೂಲಗಳು ತಿಳಿಸಿವೆ.

‘ಯುವತಿ ಇದುವರೆಗೂ ಪತ್ತೆಯಾಗಿಲ್ಲ. ಅವರ ವಿಚಾರಣೆ ನಡೆಸಿದ ನಂತರ, ಹಣದ ಬಗ್ಗೆ ಮಾಹಿತಿ ಕೇಳಲಾಗುವುದು. ಮುಂಜಾಗ್ರತಾ ಕ್ರಮವಾಗಿ ಹಣ ಸಿಕ್ಕ ದೃಶ್ಯಗಳನ್ನು ವಿಡಿಯೊ ಚಿತ್ರೀಕರಣ ಮಾಡಲಾಗಿದೆ’ ಎಂದೂ ಹೇಳಿವೆ.

₹18 ಲಕ್ಷ ಚಿನ್ನ ಖರೀದಿ ರಶೀದಿ: ‘ಸುದ್ದಿವಾಹಿನಿಯಲ್ಲಿ ವರದಿಗಾರನಾಗಿ ಕೆಲಸ ಮಾಡಿ, ನಂತರ ಕೆಲಸ ಬಿಟ್ಟಿದ್ದ ವ್ಯಕ್ತಿ ವಿಚಾರಣೆಗೆ ಹಾಜರಾಗುತ್ತಿಲ್ಲ. ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿರುವ ಆತನ ಮನೆ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಲಾಗಿದ್ದು, ₹ 18 ಲಕ್ಷ ಮೌಲ್ಯದ ಚಿನ್ನ ಖರೀದಿ ಮಾಡಿರುವ ರಶೀದಿ ಸಿಕ್ಕಿದೆ.’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ನೀಚ ಕೆಲಸ ಮಾಡಿದ್ದು ರಮೇಶ ಜಾರಕಿಹೊಳಿ’

ಸಿ.ಡಿ. ಪ್ರಕರಣದಲ್ಲಿ ವಿಚಾರಣೆಗಾಗಿ ಎಸ್‌ಐಟಿ ಅಧಿಕಾರಿಗಳು ಹುಡುಕುತ್ತಿರುವ ಇಬ್ಬರು ವ್ಯಕ್ತಿಗಳು ತಮ್ಮ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದ್ದು, ‘ಪ್ರಕರಣದಲ್ಲಿ ನಮ್ಮ ತಪ್ಪಿಲ್ಲ. ಸದ್ಯದಲ್ಲೇ ವಿಚಾರಣೆಗೆ ಹಾಜರಾಗಲಿದ್ದೇವೆ’ ಎಂದು ಹೇಳಿದ್ದಾರೆ.

ವರದಿಗಾರನಾಗಿ ಕೆಲಸ ಮಾಡಿದ್ದ ವ್ಯಕ್ತಿ, ‘ಸ್ನೇಹಿತರೊಬ್ಬರ ಮೂಲಕ ಮೊಬೈಲ್ ನಂಬರ್ ಪಡೆದು ಕರೆ ಮಾಡಿದ್ದ ಯುವತಿ, ರಮೇಶ ಜಾರಕಿಹೊಳಿಯಿಂದ ಅನ್ಯಾಯವಾಗಿರುವುದಾಗಿ ಹೇಳಿದ್ದರು. ಸೂಕ್ತ ಪುರಾವೆ ನೀಡಿದರೆ ಸುದ್ದಿ ಮಾಡುವುದಾಗಿ ಹೇಳಿದ್ದೆ. ಆ ಬಗ್ಗೆ 15ರಿಂದ 20 ಬಾರಿ ಮಾತನಾಡಿದ್ದೆ. ಅದಾದ ನಂತರ ತಾಯಿಗೆ ಹುಷಾರಿಲ್ಲದಿದ್ದರಿಂದ ಆರೈಕೆಯಲ್ಲಿ ತೊಡಗಿದ್ದೆ.’

‘ಸಿ.ಡಿ.ಯಲ್ಲಿದ್ದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದಾಗಲೇ ನನಗೆ ವಿಷಯ ಗೊತ್ತಾಯಿತು. ಯುವತಿ ಸಂಪರ್ಕಿಸಿದ್ದು ಇದೇ ವಿಷಯಕ್ಕಾ ಎಂಬುದು ತಿಳಿಯಿತು’ ಎಂದೂ ಹೇಳಿದ್ದಾರೆ.

‘ಸಂತ್ರಸ್ತ ಯುವತಿಯನ್ನೇ ಆರೋಪಿ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ಈತನ (ರಮೇಶ ಜಾರಕಿಹೊಳಿ) ಪ್ರಭಾವ ಯಾವ ರೀತಿ ಇರಬಹುದು ? ನೀಚ ಕೆಲಸ ಮಾಡಿರುವ ಈತನೇ (ರಮೇಶ) ಹಿಂಸೆ ಅನುಭವಿಸಬೇಕು. ಆದರೆ, ಇಲ್ಲಿ ಏನು ತಪ್ಪು ಮಾಡದ ನಾವು ಹಿಂಸೆ ಅನುಭವಿಸುವಂತಾಗಿದೆ. ಅವರು ಕನ್ನಡದ ಬಗ್ಗೆಯೂ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ’ ಎಂದೂ ವಿಡಿಯೊದಲ್ಲಿ ವ್ಯಕ್ತಿ ಹೇಳಿದ್ದಾರೆ.

ಸುದ್ದಿವಾಹಿನಿಯಲ್ಲಿ ಕೆಲಸ ಮಾಡಿದ್ದ ಇನ್ನೊಬ್ಬ ವ್ಯಕ್ತಿ, ‘ಪೊಲೀಸರು ವಿಚಾರಣೆಗೆ ಕರೆದಿದ್ದಾಗ ಹಾಜರಾಗಿದ್ದೇನೆ. ಮತ್ತೆ ಕರೆದರೆ ಹೋಗುವೆ. ನಾನು ನಾಪತ್ತೆಯಾಗಿಲ್ಲ. ಸತ್ಯಾಸತ್ಯತೆ ತಿಳಿಯದೇ ನನ್ನ ಬಗ್ಗೆ ಏನೇನು ಸುದ್ದಿ ಪ್ರಸಾರ ಮಾಡಬೇಡಿ. ತೇಜೋವಧೆಗೆ ಯತ್ನಿಸಬೇಡಿ. ಜೀವನ ಹಾಳು ಮಾಡಬೇಡಿ. ಇದು ನನ್ನ ಮನವಿ’ ಎಂದಿದ್ದಾರೆ.

ಬೆಂಗಳೂರಿಗೆ ವರ್ಗಾವಣೆ

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ. ಪ್ರಕರಣದಲ್ಲಿರುವ ಯುವತಿಯ ಅಪಹರಣ ಪ್ರಕರಣವನ್ನು ಇಲ್ಲಿನ ಎಪಿಎಂಸಿ ಪೊಲೀಸ್ ಠಾಣೆಯಿಂದ ಬೆಂಗಳೂರಿನ ಆರ್.ಟಿ. ನಗರ ಠಾಣೆಗೆ ಗುರುವಾರ ವರ್ಗಾಯಿಸಲಾಗಿದೆ.

ಯುವತಿಯ ತಂದೆ ಮಾರ್ಚ್ 16ರಂದು ಎಪಿಎಂಸಿ ಠಾಣೆಗೆ ದೂರು ನೀಡಿದ್ದರು. ‘ಬೆಂಗಳೂರಿನಲ್ಲಿ ಪುತ್ರಿಯನ್ನು ಯಾರೋ ಅಪಹರಿಸಿದ್ದಾರೆ. ಆಕೆಯನ್ನು ಬೆದರಿಸಿ ವಶದಲ್ಲಿಟ್ಟುಕೊಂಡು ಕಿರುಕುಳ ನೀಡಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದರು.

ಪ್ರಕರಣ ದಾಖಲಾಗುತ್ತಿದ್ದಂತೆ ಮಾರ್ಕೆಟ್ ವಿಭಾಗದ ಎಸಿಪಿ ನೇತೃತ್ವದಲ್ಲಿ ತಂಡ ರಚಿಸಿ ಪ್ರಾಥಮಿಕ ತನಿಖೆ ನಡೆಸಿ, ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಇದೇ ವರದಿಯನ್ನು ಪೊಲೀಸ್ ಮಹಾನಿರ್ದೇಶಕರಿಗೂ ಕಳುಹಿಸಲಾಗಿತ್ತು. ಅವರ ನಿರ್ದೇಶನದಂತೆ ಪ್ರಕರಣವನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಹೇಬಿಯಸ್ ಕಾರ್ಪಸ್ ಅರ್ಜಿ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ಆರೋಪಿ ಎನ್ನಲಾದ ಶ್ರವಣಕುಮಾರ್ ಅವರ ತಂದೆ ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ.

ಮತ್ತೊಬ್ಬ ಮಗ ಚೇತನ್ ಅವರನ್ನು ಎಸ್‌ಐಟಿ ಪೊಲೀಸರು ಅಕ್ರಮವಾಗಿ ಬಂಧನದಲ್ಲಿ ಇರಿಸಿಕೊಂಡಿದ್ದಾರೆ ಎಂದು ಅರ್ಜಿಯಲ್ಲಿ ಪಿ.ಸೂರ್ಯಕುಮಾರ್ ದೂರಿದ್ದಾರೆ.

ಗೃಹ ಇಲಾಖೆ ಕಾರ್ಯದರ್ಶಿ, ಎಸ್‌ಐಟಿ, ಕಬ್ಬನ್ ಪಾರ್ಕ್ ಹಾಗೂ ಸದಾಶಿವನಗರ ಪೊಲೀಸ್ ಠಾಣಾಧಿಕಾರಿಗಳನ್ನು ಪ್ರತಿವಾದಿ ಮಾಡಲಾಗಿದೆ. ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ‘ಮಾ.13ರಂದು ಮನೆಗೆ ದಾಳಿ ಮಾಡಿದ್ದ ಎಸ್‌ಐಟಿ ಅಧಿಕಾರಿಗಳು, ಶ್ರವಣ್ ಬಗ್ಗೆ ವಿಚಾರಿಸಿದ್ದರು. ಮಾಹಿತಿ ಇಲ್ಲ ಎಂದಾಗ ಮತ್ತೊಬ್ಬ ಮಗ ಚೇತನ್ ಅವರನ್ನು ಕರೆದೊಯ್ದರು. ಮನೆ ಖರೀದಿಗೆಂದು ಇಟ್ಟಿದ್ದ ₹25 ಲಕ್ಷ ಮೊತ್ತದ ಡಿ.ಡಿ, ಸಿಸಿ ಕ್ಯಾಮೆರಾದ ಡಿವಿಆರ್ ವಶಕ್ಕೆ ಪಡೆದಿದ್ದಾರೆ’ ಎಂದು ಆರೋಪಿಸಿದ್ದಾರೆ.



ವಿಶ್ವಾರಾಧ್ಯರ ಜಾತ್ರೆ

ಯಾದಗಿರಿ ತಾಲ್ಲೂಕಿನ ಅಬ್ಬೆತುಮಕೂರು ಗ್ರಾಮದಲ್ಲಿ ವಿಶ್ವಾರಾಧ್ಯರ ಜಾತ್ರಾ ಮಹೋತ್ಸವದ ಪ್ರಯುಕ್ತ ಗುರುವಾರ ಸಂಜೆ ನಡೆದ ರಥೋತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ

‘ಪರ್ವ’ ನಾಟಕ: ಸತ್ಯು, ಕಾರ್ಯಪ್ಪ ಏಟು–ಎದಿರೇಟು

ಪ್ರಜಾವಾಣಿ ವಾರ್ತೆ

ಮೈಸೂರು: ಸಾಹಿತಿ ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧಾರಿತ ‘ಪರ್ವ’ ನಾಟಕ ಪ್ರದರ್ಶನ ವಿಷಯ ರಂಗಕರ್ಮಿ,ಚಲನಚಿತ್ರ ನಿರ್ದೇಶಕ ಎಂ.ಎಸ್.ಸತ್ಯು ಮತ್ತು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ ನಡುವೆ ಗುರುವಾರ ವಾಗ್ವಾದಕ್ಕೆ ಕಾರಣವಾಯಿತು.

‘ಅಭಿಯಂತರರು’ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ರಂಗ ಉತ್ಸವ ಉದ್ಘಾಟಿಸಿ ಮಾತನಾಡಿದ ಸತ್ಯು, ‘ಮೈಸೂರಿನವರಿಗೆ ಎಂಟು ಗಂಟೆ ಕುಳಿತು ನೋಡಲು ಬಹಳ ಪುರುಸೊತ್ತಿದೆ ಎಂದು ಕೆಲವರು ಸುದೀರ್ಘ ನಾಟಕ ಮಾಡಿದ್ದಾರೆ. ನಾಟಕದ ನಡುವೆ ಊಟವನ್ನೂ ಹಾಕಿಸ್ತಾರೆ’ ಎಂದು ಟೀಕಿಸಿದರು.



ಆರ್‌ಎಸ್‌ಎಸ್ ಅಥವಾ ಬಿಜೆಪಿಯವರು ಅಷ್ಟೊಂದು ಹಣ ಹಾಕಿ ಪರ್ವ ನಾಟಕವನ್ನು ನಮ್ಮ ಮುಂದೆ ಪರ್ವತವಾಗಿ ನಿಲ್ಲಿಸಿದ್ದಾರೆ. ಇದೆಲ್ಲಾ ಬೇಕಿತ್ತೇ ಎಂಬುದು ನನ್ನ ಪ್ರಶ್ನೆ

ಎಂ.ಎಸ್.ಸತ್ಯು, ರಂಗ ನಿರ್ದೇಶಕ



ಪರ್ವ ನಾಟಕವನ್ನು ಆರ್‌ಎಸ್‌ಎಸ್, ಬಿಜೆಪಿಯವರು ಮಾಡಿದ್ದಾರೆ ಎಂಬ ಹೇಳಿಕೆಯನ್ನು ಖಂಡಿಸುತ್ತೇನೆ.

ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣದ ನಿರ್ದೇಶಕ

‘ನಾಟಕವು ಅಷ್ಟು ದೀರ್ಘವಾಗಿ ಇರಬೇಕಿಲ್ಲ. ನಾವು ಏನನ್ನು ಹೇಳಬೇಕು ಎಂಬುದನ್ನು ಸೂಕ್ಷ್ಮವಾಗಿ, ಒಂದು ಸೀಮಿತ ಚೌಕಟ್ಟಿನಲ್ಲಿ ಹೇಳಬೇಕು. ಆಗ ಅಷ್ಟೊಂದು ದೀರ್ಘವಾಗಿ ಬೆಳೆಯುವುದಿಲ್ಲ. ನಾಟಕ ಮಾಡಿದ್ದನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ಸಮಯದ ಮಿತಿ ಇಟ್ಟು ಕೆಲಸ ಮಾಡಿದರೆ ಅದರಿಂದ ಆಗುವಂತಹ ಪರಿಣಾಮ ಹೆಚ್ಚು. ಸಿಕ್ಕಾಪಟ್ಟೆ ಹಣ ಖರ್ಚು ಮಾಡಿ ನಾಟಕ ಆಡುವುದರಿಂದ ಜನರ ಸಮಯ ಹಾಗೂ ಹಣ ವ್ಯರ್ಥವಾಗುತ್ತದೆ’ ಎಂದು ಹೇಳಿದರು.

ಸತ್ಯು ಅವರ ಹೇಳಿಕೆಗೆ ತಮ್ಮ ಭಾಷಣದಲ್ಲಿ ತಿರುಗೇಟು ನೀಡಿದ ಅಡ್ಡಂಡ ಸಿ.ಕಾರ್ಯಪ್ಪ, ‘ಸತ್ಯು ಅವರು ಪರ್ವದ ಬಗ್ಗೆ ಮಾತನಾಡಿದ್ದಕ್ಕೆ ನನಗೆ ಹೆಮ್ಮೆ ಆಗುತ್ತದೆ. ಪರ್ವ ಅವರನ್ನು ಕಾಡಿದೆ. ಅದು ಕಾಡುತ್ತಲೇ ಇರಬೇಕು’ ಎಂದರು.

‘ಪರ್ವ ನಾಟಕವನ್ನು ಬಿಜೆಪಿಯವರು ಮಾಡಿಲ್ಲ. ಎಸ್.ಎಲ್.ಭೈರಪ್ಪ ಅವರು 48 ವರ್ಷಗಳ ಹಿಂದೆ ಬರೆದ ಬಹುಚರ್ಚಿತ, ಪ್ರಗತಿಪರ ಕಾದಂಬರಿ ಅದು. ಸತ್ಯು ಅವರು ಅದನ್ನು ಓದಿದ್ದಾರೋ ಗೊತ್ತಿಲ್ಲ’ ಎಂದು ಕುಟುಕಿದರು.

ನಿಧನ ವಾರ್ತೆ

ಸಾಹಿತಿ ಮಳಲಿ ವಸಂತ ಕುಮಾರ್



ಮೈಸೂರು: ಸಾಹಿತಿ, ನಿವೃತ್ತ ಪ್ರಾಧ್ಯಾಪಕ ಮಳಲಿ ವಸಂತಕುಮಾರ್ (76) ಅವರು ಅನಾರೋಗ್ಯದಿಂದ ಬೆಂಗಳೂರಿನ ತಮ್ಮ ಪುತ್ರ ರನ್ನ ಮಳಲಿ ಅವರ ನಿವಾಸದಲ್ಲಿ ಗುರುವಾರ ನಿಧನರಾದರು. ಅವರಿಗೆ ಪತ್ನಿ ಶಾಂತಾ, ಪುತ್ರಿ ಎಂ.ವಿ.ರೂಪಾ, ಪುತ್ರ ರನ್ನ ಇದ್ದಾರೆ. ಮತ್ತೊಬ್ಬ ಪುತ್ರಿ ವಸು ಮಳಲಿ ಕೆಲ ವರ್ಷಗಳ ಹಿಂದೆಯೇ ನಿಧನರಾಗಿದ್ದಾರೆ. ಮೈಸೂರಿನ ಹೊರವಲಯದ ಕಳಲವಾಡಿಯಲ್ಲಿರುವ ತೋಟದಲ್ಲಿ ಶುಕ್ರವಾರ (ಮಾರ್ಚ್ 19) ಅಂತ್ಯಕ್ರಿಯೆ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ಕಿಟಕಿಯಲ್ಲಿ ಕೈಹಾಕಿ ಕಳವು: ಬಂಧನ

ಬೆಂಗಳೂರು: ಮನೆಯ ಕಿಟಕಿಯಲ್ಲಿ ಕೈ ಹಾಕಿ ಮಹಿಳೆಯರ ಸರ ಹಾಗೂ ಮನೆಯಲ್ಲಿರುವ ಬೆಲೆಬಾಳುವ ವಸ್ತುಗಳನ್ನು ಕಳವು ಮಾಡುತ್ತಿದ್ದ ಆರೋಪಿ ನಾರಾಯಣಸ್ವಾಮಿ ಅಲಿಯಾಸ್ ಗೂದೇರಾಮ್ (34) ಎಂಬಾತನನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆನೇಕಲ್ ನಿವಾಸಿ ನಾರಾಯಣಸ್ವಾಮಿಯಿಂದ ₹ 3 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ವಸ್ತು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಜಿಮ್ ತರಬೇತುದಾರ ಬಂಧನ

ಬೆಂಗಳೂರು: ಲ್ಯಾಪ್‌ಟಾಪ್‌ಗಳನ್ನು ಬಾಡಿಗೆ ಪಡೆದು ಮಾರಾಟ ಮಾಡುತ್ತಿದ್ದ ಆರೋಪದಡಿ ಮುನಿ ಲೋಕೇಶ್ ಕುಮಾರ್ (30) ಎಂಬಾತನನ್ನು ವಿ.ವಿ. ಪುರ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಮುನಿ, ನಗರದಲ್ಲಿ ಜಿಮ್ ತರಬೇತುದಾರರಾಗಿ ಕೆಲಸ ಮಾಡುತ್ತಿದ್ದ. ಆತನಿಂದ 22 ಆ್ಯಪಲ್ ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪಘಾತ: ಹೆಚ್ಚು ಯುವಕರ ಸಾವು'

ಬೆಂಗಳೂರು: 'ರಸ್ತೆ ಅಪಘಾತಗಳಲ್ಲಿ ಸಾಯುತ್ತಿರುವವರ ಪೈಕಿ 20 ರಿಂದ 30 ವರ್ಷ ವಯಸ್ಸಿನೊಳಗಿನ ಯುವಕರೇ ಹೆಚ್ಚಿದ್ದಾರೆ' ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ನಾರಾಯಣ ಗುರುವಾರ ಹೇಳಿದರು.

ಫೋರ್ಟಿಸ್ ಆಸ್ಪತ್ರೆಯು ಗಾಡಿ ಲೈಸೆನ್ಸ್ ಡಾಟ್ ಕಾಂ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ತಲೆ ಗಾಯ ಅರಿವು ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೆಲವರು ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳನ್ನು ಧರಿಸುತ್ತಾರೆ. ಹೀಗಾಗಿ ಅಪಘಾತದ ವೇಳೆ ಹೆಚ್ಚಿನವರಿಗೆ ತಲೆಗೆ ಬಲವಾದ ಪೆಟ್ಟು ಬೀಳುತ್ತದೆ' ಎಂದರು.

ಫೋರ್ಟಿಸ್ ಆಸ್ಪತ್ರೆಯ ನ್ಯೂರೊ ಸರ್ಜರಿ ವಿಭಾಗದ ಹೆಚ್ಚುವರಿ ನಿರ್ದೇಶಕ ಡಾ.ಸತೀಶ್ 'ಅತಿವೇಗದ ಚಾಲನೆಯಿಂದಾಗಿ ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು ಇದರಿಂದ ಅನೇಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ' ಎಂದರು.

ವ್ಯಾಪಾರಿಯನ್ನು ಹತ್ಯೆ ಮಾಡಿ ಅಪಘಾತವೆಂದು ಬಿಂಬಿಸಿದ್ದ ಪ್ರಕರಣ

ಹತ್ಯೆಗೆ ಸುಪಾರಿ ಕೊಟ್ಟ ಪತ್ನಿ, ಮಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಪಾರಿ ಸುಬ್ಬರಾಯಪ್ಪ (58) ಎಂಬುವವರನ್ನು ಹತ್ಯೆ ಮಾಡಿ ಅಪಘಾತವೆಂದು ಬಿಂಬಿಸಿದ್ದ ಪ್ರಕರಣವನ್ನು ಭೇದಿಸಿರುವ ವೈಟ್‌ಫೀಲ್ಡ್ ಸಂಚಾರ ಪೊಲೀಸರು, ಈ ಹತ್ಯೆಗೆ ಪತ್ನಿ ಹಾಗೂ ಮಗನೇ ₹ 6 ಲಕ್ಷ ಸುಪಾರಿ ನೀಡಿದ್ದ ಸಂಗತಿಯನ್ನೂ ಪತ್ತೆ ಹಚ್ಚಿದ್ದಾರೆ.



ಬಂಧಿತ ಆರೋಪಿ ಹಾಗೂ ಜಪ್ತಿ ಮಾಡಲಾದ ಸ್ಕಾರ್ಪಿಯೊ ಕಾರಿನ ಜೊತೆ ಪೊಲೀಸರು

'ಅಪಘಾತವೆಂದು ಬಿಂಬಿಸುವ ರೀತಿಯಲ್ಲಿ ಗುಂಜೂರು ನಿವಾಸಿ ಸುಬ್ಬರಾಯಪ್ಪ ಅವರನ್ನು ಕೊಲೆ ಮಾಡಿದ್ದ ಆರೋಪದಡಿ ಅನಿಲ್‌ಕುಮಾರ್ ಎಂಬಾತನನ್ನು ಬಂಧಿಸಲಾಗಿದ್ದು, ಆತ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ. ನ್ಯಾಯಾಲಯದ ನಿರ್ದೇಶನದಂತೆ ಪ್ರಕರಣವನ್ನು ವರ್ತೂರು ಠಾಣೆಗೆ ವರ್ಗಾಯಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಇದೇ ಜ. 21ರಂದು ಠಾಣೆಗೆ ಬಂದಿದ್ದ ಗುಂಜೂರು ನಿವಾಸಿ ಜಿ.ಎಸ್. ದೇವರಾಜ್, ತಮ್ಮ ತಂದೆ ಸುಬ್ಬರಾಯಪ್ಪ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವುದಾಗಿ ದೂರು ನೀಡಿದ್ದರು. ಅಪಘಾತ ಸ್ಥಳಕ್ಕೆ ಹೋಗಿ ಪರಿಶೀಲಿಸಲಾಗಿತ್ತು. ಸುಬ್ಬರಾಯಪ್ಪ ಅವರ ದ್ವಿಚಕ್ರ ವಾಹನಕ್ಕೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದಿರುವುದು ಹಾಗೂ ತೀವ್ರಗಾಯಗೊಂಡು ಸುಬ್ಬರಾಯಪ್ಪ ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗಿತ್ತು' ಎಂದೂ ತಿಳಿಸಿದರು.

ಮೊಬೈಲ್ ಕರೆ ನೀಡಿದ ಸುಳಿವು: 'ಅಪಘಾತಕ್ಕೂ ಮುನ್ನ ಸುಬ್ಬರಾಯಪ್ಪ ಅವರಿಗೆ ಆರೋಪಿ ಅನಿಲ್‌ಕುಮಾರ್ ಕರೆ ಮಾಡಿದ್ದ. ವ್ಯಾಪಾರ ಸಂಬಂಧ ಮಾತುಕತೆ ನಡೆಸಿದ್ದ. ಅದೇ ಸುಳಿವು ಮೇರೆಗೆ ಅನಿಲ್‌ಕುಮಾರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಬಾಯ್ಬಿಟ್ಟ' ಎಂದೂ ಪೊಲೀಸರು ಹೇಳಿದರು.

'ಸುಬ್ಬರಾಯಪ್ಪ ಅವರ ಪತ್ನಿ ಯಶೋಧಮ್ಮ ಹಾಗೂ ಮಗ ಧನರಾಜ್ ಅವರು ಹತ್ಯೆಗೆ ₹ 6 ಲಕ್ಷ ಸುಪಾರಿ ನೀಡಿದ್ದರು. ಬಾಡಿಗೆಗೆ ಸ್ಕಾರ್ಪಿಯೊ ವಾಹನ ಪಡೆದಿದ್ದ ಅನಿಲ್‌ಕುಮಾರ್ ಹಾಗೂ ಇತರೆ ಆರೋಪಿಗಳು, ಸುಬ್ಬರಾಯಪ್ಪ ದ್ವಿಚಕ್ರ ವಾಹನಕ್ಕೆ ಗುದ್ದಿಸಿ ಕೊಲೆ ಮಾಡಿ ಪರಾರಿಯಾಗಿದ್ದರು. ಮಾತಿನಂತೆ ಪತ್ನಿ ಹಾಗೂ ಮಗ, ಅನಿಲ್‌ಕುಮಾರ್‌ಗೆ ₹ 4.40 ಲಕ್ಷ ನೀಡಿದ್ದರು. ಅಪಘಾತದಿಂದ ಜಖಂಗೊಂಡಿದ್ದ ಕಾರನ್ನು ಮುಳಬಾಗಿಲು ತಾಲ್ಲೂಕಿನ ತಂಬಳ್ಳಿ ಬಳಿ ದುರಸ್ತಿ ಮಾಡಿಸಲಾಗಿತ್ತು. ಈ ಬಗ್ಗೆ ಆರೋಪಿ ಹೇಳಿಕೆ ನೀಡಿದ್ದ' ಎಂದೂ ತಿಳಿಸಿದರು.

'ಹತ್ಯೆಯಲ್ಲಿ ಸುಬ್ಬರಾಯಪ್ಪ ಅವರ ಎರಡನೇ ಮಗ ಭರತ್ ಸಹ ಭಾಗಿಯಾಗಿದ್ದಾನೆ. ಪ್ರಕರಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ವರ್ತೂರು ಪೊಲೀಸರಿಗೆ ನೀಡಲಾಗಿದೆ. ಅವರೇ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ' ಎಂದೂ ಹೇಳಿದರು.

ಆಸ್ತಿಗಾಗಿ ಹತ್ಯೆಗೆ ಸಂಚು

'ಸುಬ್ಬರಾಯಪ್ಪ ಅವರ ಹೆಸರಿನಲ್ಲಿ ವರ್ತೂರು ಬಳಿ ಒಂದು ಎಕರೆ ಜಮೀನು ಇದೆ. ಆಸ್ತಿಯನ್ನು ಮಕ್ಕಳಿಗೆ ಹಂಚಿಕೆ ಮಾಡಿರಲಿಲ್ಲ. ಈ ವಿಚಾರವಾಗಿ ಮನೆಯಲ್ಲಿ ಜಗಳವಾಗುತ್ತಿತ್ತು. ಸುಬ್ಬರಾಯಪ್ಪ ಅವರಿಗೆ ಗೊತ್ತಾಗದಂತೆ ಪತ್ನಿ ಯಶೋಧಮ್ಮ ಹಾಗೂ ಮಕ್ಕಳಾದ ಭರತ್, ದೇವರಾಜ್ ಗಿಫ್ಟ್ ಡೀಡ್ ಮಾಡಿಕೊಂಡಿದ್ದರು. ಅದು ಗೊತ್ತಾಗುತ್ತಿದ್ದಂತೆ ಸುಬ್ಬರಾಯಪ್ಪ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಅದರಿಂದ ಸಿಟ್ಟಾದ ಪತ್ನಿ ಹಾಗೂ ಮಕ್ಕಳು, ಹತ್ಯೆಗೆ ಸಂಚು ರೂಪಿಸಿದರು' ಎಂದು ಪೊಲೀಸರು ಹೇಳಿದ್ದಾರೆ.



ದಾಬಸ್‌ಪೇಟೆ ಬಳಿ ಗುರುವಾರ ಬೆಳಗಿನ ಜಾವ ಲಾರಿಗಳು ಮುಖಾಮುಖಿಯಾದ ಪರಿಣಾಮ ಬೆಂಗಳೂರು ಮುಂಬೈ ಹೆದ್ದಾರಿಯಲ್ಲಿ ಕಿ.ಮೀ.ಗಟ್ಟಲೇ ಸಂಚಾರ ದಟ್ಟಣೆ ಉಂಟಾಯಿತು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ ಎಸ್

ಅಪಘಾತ: ಸಂಚಾರ ದಟ್ಟಣೆ

ದಾಬಸ್ ಪೇಟೆ: ರಾಷ್ಟ್ರೀಯ ಹೆದ್ದಾರಿ ನಾಲ್ಕರ ದೊಡ್ಡೇರಿ ಗ್ರಾಮದ ಹತ್ತಿರ ಗುರುವಾರ ಬೆಳಿಗ್ಗೆ ಎರಡು ಲಾರಿ ಮತ್ತು ಕಾರೊಂದರ ಮಧ್ಯೆ ನಡೆದ ಅಪಘಾತದಿಂದಾಗಿ ಹೆದ್ದಾರಿಯಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಯಿತು.

ಕಾರು ಮತ್ತು ಲಾರಿಗಳ ಮಧ್ಯೆ ನಡೆದ ಅಪಘಾತದಿಂದ ಚಾಲಕನ ನಿಯಂತ್ರಣ ತಪ್ಪಿದ ಲಾರಿ ರಸ್ತೆಯಲ್ಲೇ ಉರುಳಿ ಬಿದ್ದುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿತು. ನೆಲಮಂಗಲ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸರಿಂದ ಹಲ್ಲೆ ಆರೋಪ; ರಸ್ತೆಯಲ್ಲಿ ಶಾಸಕಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿನಿಗೆ ಆದ ಅನ್ಯಾಯ ಖಂಡಿಸಿ ಕಾಲೇಜಿನಲ್ಲಿ ಪ್ರತಿಭಟನೆ ನಡೆಸಿದ ಯುವಕರ ಮೇಲೆ ತಿಲಕನಗರ ಠಾಣೆ ಪೊಲೀಸರು ವಿನಾಕಾರಣ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಜಯನಗರ ಶಾಸಕಿ ಸೌಮ್ಯಾ ರೆಡ್ಡಿ ಅವರು ಬುಧವಾರ ರಾತ್ರಿ ಠಾಣೆ ಎದುರಿನ ರಸ್ತೆಯಲ್ಲೇ ಪ್ರತಿಭಟನೆ ನಡೆಸಿದರು.

ಜಯನಗರ ಬಳಿಯ ಕಾಲೇಜೊಂದರ ವಿದ್ಯಾರ್ಥಿನಿಗೆ ಇತ್ತೀಚೆಗೆ ಕೊರೊನಾ ಸೋಂಕು ತಗುಲಿತ್ತು. ಅದೇ ಕಾರಣ ನೀಡಿ ಆಕೆಗೆ ಕಾಲೇಜಿನಲ್ಲಿ ಮಾನಸಿಕವಾಗಿ ಕಿರಿಕಿರಿ ನೀಡಲಾಗಿತ್ತು. ನೊಂದ ಯುವತಿ, ತನಗಾದ ನೋವನ್ನು ಎನ್‌ಎಸ್‌ಯುಐ ಕಾರ್ಯಕರ್ತರ ಬಳಿ ಹೇಳಿಕೊಂಡಿದ್ದರು ಎನ್ನಲಾಗಿದೆ.

ಕಾಲೇಜು ವಿದ್ಯಾರ್ಥಿಗಳ ಜೊತೆ ಪ್ರಾಂಶುಪಾಲರ ಬಳಿ ಹೋಗಿದ್ದ ಎನ್‌ಎಸ್‌ಯುಐ ಕಾರ್ಯಕರ್ತರು, ಯುವತಿಗಾಗುತ್ತಿರುವ ತೊಂದರೆ ಹಾಗೂ ಅನ್ಯಾಯದ ಬಗ್ಗೆ ಪ್ರಶ್ನಿಸಿದ್ದರು. ಅದಕ್ಕೆ ಪ್ರಾಂಶುಪಾಲರು ಪ್ರತಿಕ್ರಿಯಿಸಿರಲಿಲ್ಲ. ಅವಾಗಲೇ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಥಳದಲ್ಲೇ ಪ್ರತಿಭಟನೆ ಆರಂಭಿಸಿದ್ದರು.

ಸ್ಥಳಕ್ಕೆ ಬಂದಿದ್ದ ತಿಲಕನಗರ ಪೊಲೀಸರು, ಯುವಕರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದಿದ್ದರು. ಅದೇ ಸಂದರ್ಭದಲ್ಲೇ ಪೊಲೀಸರು ಯುವಕರ ಮೇಲೆ ಹಲ್ಲೆ ಮಾಡಿ ಬೂಟುಗಾಲಿನಿಂದ ಒದ್ದಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಸುದ್ದಿ ತಿಳಿದ ಶಾಸಕಿ ಸೌಮ್ಯಾ ರೆಡ್ಡಿ, ತಿಲಕನಗರ ಠಾಣೆ ಎದುರು ಬಂದು ಘೋಷಣಾ ಫಲಕ ಹಿಡಿದು ರಸ್ತೆಯಲ್ಲಿ ಪ್ರತಿಭಟನೆ ಆರಂಭಿಸಿದರು. 'ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಶಾಸಕಿ ಪಟ್ಟು ಹಿಡಿದು ರಸ್ತೆಯಲ್ಲೇ ಪ್ರತಿಭಟನೆ ಮುಂದುವರಿಸಿದರು.

'ತಪ್ಪಿತಸ್ಥ ಸಿಬ್ಬಂದಿಗೆ ನೋಟಿಸ್ ನೀಡಲಾಗಿದೆ. ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ಪ್ರತಿಭಟನೆ ಕೈಬಿಡಿ' ಎಂದು ಎಸಿಪಿ ಕೋರಿದರು. ಬಳಿಕವೇ ಶಾಸಕಿ ಪ್ರತಿಭಟನೆ ಅಂತ್ಯಗೊಳಿಸಿದರು.

ದೂರು ನೀಡಿದ ವಿದ್ಯಾರ್ಥಿಗಳು: 'ವಿನಾಕಾರಣ ನಮ್ಮ ಮೇಲೆ ಹಲ್ಲೆ ಮಾಡಿ ಬೂಟುಗಾಲಿನಿಂದ ಒದ್ದಿರುವ ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಎಸಿಪಿ ಅವರಿಗೆ ವಿದ್ಯಾರ್ಥಿಗಳು ದೂರು ನೀಡಿದ್ದಾರೆ.

ಸುದ್ದಿ 2 ನಿಮಿಷ

10 ಕೆ.ಜಿ ಗಾಂಜಾ ಜಪ್ತಿ; ಬಂಧನ

ಬೆಂಗಳೂರು: ಮುಂಬೈನಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ನಾಲ್ವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಅಂಜನಾಪುರದ ರಿಜ್ವಾನ್ ಪಾಷಾ (29), ಕೆಂಗೇರಿ ಕೋಣನಕುಂಟೆ ಶಬ್ಬೀರ್ ಪಾಷಾ (31), ತುಮಕೂರು ಗುಬ್ಬಿ ಗೇಟ್‌ನ ವಾಸೀಂ ಅಕ್ರಮ್ (31) ಹಾಗೂ ಪಿ.ಎಚ್. ಕಾಲೋನಿಯ ಮೊಹಮ್ಮದ್ ಕುತ್‌ಬುದ್ದೀನ್ ಪಾಷಾ (38) ಬಂಧಿತರು. ಅವರಿಂದ ₹ 5 ಲಕ್ಷ ಮೌಲ್ಯದ 10 ಕೆ.ಜಿ ಗಾಂಜಾ, 4 ಮೊಬೈಲ್ ಹಾಗೂ ಗೂಡ್ಸ್ ವಾಹನ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಗೂಡ್ಸ್ ವಾಹನ ಚಾಲಕನಾಗಿದ್ದ ರಿಜ್ವಾನ್ ಪಾಷಾ, ಮುಂಬೈನಲ್ಲಿರುವ ಡ್ರಗ್ಸ್ ಪೆಡ್ಲರ್ ಜೊತೆ ಸಂಪರ್ಕವಿಟ್ಟುಕೊಂಡಿದ್ದ. ಅವರ ಮೂಲಕ ಗಾಂಜಾ ಖರೀದಿಸಿ ತನ್ನದೇ ಗೂಡ್ಸ್ ವಾಹನದಲ್ಲಿ ನಗರಕ್ಕೆ ತರುತ್ತಿದ್ದ. ಇತರೆ ಆರೋಪಿಗಳ ಜೊತೆ ಸೇರಿಕೊಂಡು ಗಾಂಜಾ ಮಾರಾಟ ಮಾಡುತ್ತಿದ್ದ' ಎಂದೂ ತಿಳಿಸಿದರು.

ಲಾಟರಿ ಹೆಸರಲ್ಲಿ ವಂಚನೆ: ಬಂಧನ



ಬೆಂಗಳೂರು: ಲಾಟರಿ ಹಾಗೂ ಲಕ್ಕಿ ಡ್ರಾ ಹೆಸರಿನಲ್ಲಿ ಸಾರ್ವಜನಿಕರನ್ನು ನಂಬಿಸಿ ಶುಲ್ಕದ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿದ್ದ ಆರೋಪದಡಿ ಮೂವರನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಅಪ್ಪಾಜಿ ಗಂಗಾರಾಂ ಹಲ್ಕೇಕರ್ (30), ಸುರೇಶ್ ಮಲ್ಲಪ್ಪ ಅಗಸರ (35) ಹಾಗೂ ಗದಗದ ಲಕ್ಷ್ಮೇಶ್ವರ ತಾಲ್ಲೂಕಿನ ಮಹಾಂತೇಶ್ (30) ಬಂಧಿತರು. ಪ್ರಕರಣ ಪ್ರಮುಖ ಆರೋಪಿ ಎನ್ನಲಾದ ಮುಂಬೈನ ಹರ್ಷಿದ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿಗಳಿಂದ ವಂಚನೆಗೀಡಾಗಿದ್ದ ಹನುಮಂತರಾಯಪ್ಪ ಎಂಬುವವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಎಲ್.ವೈ ರಾಜೇಶ್ ಹಾಗೂ ಪಿಎಸ್‌ಐ ಲಕ್ಷ್ಮಿ ಮಂಡಿಗೇರಿ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ' ಎಂದೂ ತಿಳಿಸಿದರು.

'ಆನ್‌ಲೈನ್ ಮೂಲಕ ವಂಚನೆ ಮಾಡುವುದರಲ್ಲಿ ಪರಿಣಿತಿ ಹೊಂದಿದ್ದ ಹರ್ಷಿದ್, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೋಟೆಲೊಂದರಲ್ಲಿ ಬಾಣಸಿಗನಾಗಿದ್ದ ಅಪ್ಪಾಜಿಯನ್ನು ಪರಿಚಯ ಮಾಡಿಕೊಂಡಿದ್ದ. ನಂತರ ಇಬ್ಬರೂ ಸೇರಿ ಇತರ ಸಹಚರರ ಜೊತೆ ಕೃತ್ಯ ಎಸಗಲಾರಂಭಿಸಿದ್ದರು. ಪರಿಚಯಸ್ಥರ ಬ್ಯಾಂಕ್ ಖಾತೆ ವಿವರ ಪಡೆದು ಕೃತ್ಯಕ್ಕೆ ಬಳಸುತ್ತಿದ್ದರು. ಖಾತೆಯೊಂದರ ಮಾಹಿತಿಯಿಂದಲೇ ಆರೋಪಿಗಳು ಸಿಕ್ಕಿಬಿದ್ದರು' ಎಂದು ಹೇಳಿದರು.

ಕೋವಿಡ್ ಎರಡನೇ ಅಲೆ: ಬಿಬಿಎಂಪಿ ಸಿದ್ಧತೆ – ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು

ಆಸ್ಪತ್ರೆಗಳಲ್ಲಿ 1,000 ಹಾಸಿಗೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಳ್ಳುತ್ತಿರುವ ವರದಿಯ ಕಾರಣ ಬಿಬಿಎಂಪಿ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಕೋವಿಡ್‌ಗಾಗಿ ನಗರದ ಆಸ್ಪತ್ರೆಗಳಲ್ಲಿ ಸಾವಿರ ಹಾಸಿಗೆಗಳನ್ನು ವ್ಯವಸ್ಥೆ ಮಾಡಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಘೋಷಿಸಿದರು.

ವಿಕ್ಟೋರಿಯಾ ಆಸ್ಪತ್ರೆ, ರಾಜೀವ್‌ಗಾಂಧಿ ಹೃದ್ರೋಗ ಆಸ್ಪತ್ರೆ, ಬೌರಿಂಗ್, ಜಯನಗರ, ಸಿ.ವಿ. ರಾಮನ್ ಹಾಗೂ ಕೆ.ಸಿ. ಜನರಲ್ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗಾಗಿ ಮೀಸಲಿಡಲಾಗುತ್ತಿದೆ.

ಹಿರಿಯ ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ ಸುಧಾಕರ್, ಈ ಕುರಿತು ಸೂಚನೆಗಳನ್ನು ನೀಡಿದರು.


ಶೀಘ್ರ ಸಭೆ: ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳ ಸಭೆಯನ್ನು ಶೀಘ್ರ ಕರೆಯಲಾಗುತ್ತಿದ್ದು, ಇವುಗಳಲ್ಲಿ ಕೋವಿಡ್‌ಗಾಗಿ ಮೀಸಲಿಡಬೇಕಾದ ಹಾಸಿಗೆಗಳ ಪ್ರಮಾಣದ ಬಗ್ಗೆ ಚರ್ಚೆ ನಡೆಯಲಿದೆ. ಮೂರು ಕೋವಿಡ್ ಆರೈಕೆ ಕೇಂದ್ರಗಳು ಇದ್ದೂ, ಇವುಗಳಲ್ಲಿ ಸಾವಿರ ಹಾಸಿಗೆಗಳನ್ನು ಕಾಯ್ದಿರಿಸಲಾಗುತ್ತದೆ. ಎರಡು ಆಯುಷ್ ಆಸ್ಪತ್ರೆಗಳನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಮಾರ್ಪಡಿಸಲಾಗುತ್ತಿದೆ.

ವಾರ್ಡ್‌ಗೊಂದು ಆಂಬುಲೆನ್ಸ್: ಕೋವಿಡ್ ರೋಗಿಗಳಿಗಾಗಿ ವಾರ್ಡ್‌ಗೊಂದು ಆಂಬುಲೆನ್ಸ್ ಮೀಸಲಿಡಲು ತೀರ್ಮಾನಿಸಲಾಗಿದೆ. 198 ವಾರ್ಡ್‌ಗಳಲ್ಲಿ 200 ಆಂಬುಲೆನ್ಸ್‌ಗಳು ಸೇವೆಗೆ ಲಭ್ಯ ಆಗಲಿವೆ.

'ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ 300 ಹಾಸಿಗೆಗಳನ್ನು ಮೀಸಲಿಟ್ಟಿದ್ದೇವೆ. ಉಳಿದ 600 ಹಾಸಿಗೆಗಳಲ್ಲಿ ಇತರೆ ರೋಗಿಗಳ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ವಿಕ್ಟೋರಿಯಾ ಆಸ್ಪತ್ರೆಗೆ ಕೋವಿಡ್ ನೋಡಲ್ ಅಧಿಕಾರಿಯಾಗಿರುವ ಡಾ. ಸ್ಮಿತಾ ತಿಳಿಸಿದರು.

ಕೋವಿಡ್: ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ವ್ಯವಸ್ಥೆ

ಆಸ್ಪತ್ರೆ	ಒದಗಿಸಲಿರುವ ಹಾಸಿಗೆ ಸಂಖ್ಯೆ	ಈಗಿರುವ ಹಾಸಿಗೆಗಳು
ವಿಕ್ಟೋರಿಯಾ	300	160
ಬೌರಿಂಗ್	110	ಇಲ್ಲ
ರಾಜೀವ್‌ಗಾಂಧಿ ಹೃದ್ರೋಗ ವಿಜ್ಞಾನ ಸಂಸ್ಥೆ	50	ಇಲ್ಲ
ಕೆ.ಸಿ. ಜನರಲ್	130	106
ಜಯನಗರ ಜನರಲ್ ಆಸ್ಪತ್ರೆ	56	56
ಸಿ.ವಿ. ರಾಮನ್	115	115



1,488 ಮಂದಿಗೆ ಸೋಂಕು

ಬೆಂಗಳೂರು: ರಾಜ್ಯದಲ್ಲಿ ಸತತ ಮೂರನೇ ದಿನ ಹೊಸ ಪ್ರಕರಣಗಳ ಸಂಖ್ಯೆ ಸಾವಿರದ ಗಡಿ ದಾಟಿದೆ. ಗುರುವಾರ 1,488 ಪ್ರಕರಣಗಳು ದೃಢಪಟ್ಟಿವೆ. ಮೂರುವರೆ ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 9.65 ಲಕ್ಷ ದಾಟಿದೆ.

ಹೊಸ ಪ್ರಕರಣಗಳು ಏರುಗತಿ ಪಡೆದ ಕಾರಣ ಸಕ್ರಿಯ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, 11,359 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 131 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಕೇವಲ ಮೂರು ದಿನಗಳಲ್ಲಿ 3,898 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ತಿಂಗಳು 18 ದಿನಗಳಲ್ಲಿ 13,977 ಮಂದಿ ಕೊರೊನಾ ಸೋಂಕಿತರಾಗಿರುವುದು ಪರೀಕ್ಷಾ ವರದಿಯಿಂದ ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 776 ಪ್ರಕರಣಗಳು ದೃಢಪಟ್ಟಿವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 7 ಮಂದಿ ಹಾಗೂ ಬೀದರ್‌ನಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,415ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 341 ಮಂದಿ ಚೇತರಿಸಿಕೊಂಡಿದ್ದಾರೆ. ಒಂದು ದಿನದ ಅವಧಿಯಲ್ಲಿ 93,370 ಮಂದಿಗೆ ಪರೀಕ್ಷೆ ಮಾಡಲಾಗಿದೆ. ಈವರೆಗೆ ನಡೆಸಲಾದ ಪರೀಕ್ಷೆಗಳ ಸಂಖ್ಯೆ 2.01 ಕೋಟಿ ಗಡಿ ದಾಟಿದೆ. ಹಾವೇರಿ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ ಮತ್ತೆ 49 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,633ಕ್ಕೆ ತಲುಪಿದೆ. ದಕ್ಷಿಣ ಕನ್ನಡದಲ್ಲಿ 64, ಕಲಬುರ್ಗಿಯಲ್ಲಿ 59, ಬೀದರ್‌ನಲ್ಲಿ 53, ವಿಜಯಪುರದಲ್ಲಿ 46, ತುಮಕೂರಿನಲ್ಲಿ 41 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.Beffrehe

ಬಿಬಿಎಂಪಿ: ಏರುಗತಿಯಲ್ಲಿ ಕೋವಿಡ್ ಪ್ರಕರಣಗಳು

ಒಂದೇ ದಿನ 925 ಜನರಲ್ಲಿ ಕೊರೊನಾ ಸೋಂಕು ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿ ಸಾಗಿದೆ. ಗುರುವಾರ ಒಂದೇ ದಿನ 925 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದೆ.

ಅಪಾರ್ಟ್‌ಮೆಂಟ್‌ಗಳಲ್ಲಿ ಸೋಂಕಿನ ಪ್ರಮಾಣ ಹೆಚ್ಚಾಗುತ್ತಿದ್ದು, ಯಲಹಂಕ ವಲಯದಲ್ಲಿ ಒಂದೇ ದಿನ ಮೂರು ಹೊಸ ಕ್ಲಸ್ಟರ್‌ಗಳನ್ನು ಗುರುತಿಸಲಾಗಿದೆ. ವಾರ್ಡ್ ಸಂಖ್ಯೆ 4, 9 ಮತ್ತು 10ರಲ್ಲಿನ ಅಪಾರ್ಟ್‌ಮೆಂಟ್‌ಗಳಲ್ಲಿ ಐದಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, ಇವುಗಳನ್ನು ಕ್ಲಸ್ಟರ್ ಎಂದು ಗುರುತಿಸಲಾಗಿದೆ.


ವಾರ್ಡ್ ಸಂಖ್ಯೆ 9ರ ಗೋವರ್ಧನ್ ರೆಸಿಡೆನ್ಸಿಯಲ್ಲಿ ಮಾ.1ರಂದು ಕೇರಳದಿಂದ ಬಂದ ವ್ಯಕ್ತಿಯೊಬ್ಬರಲ್ಲಿ ಕ್ಲಸ್ಟರ್ ಮಟ್ಟದಲ್ಲಿ ಕೋವಿಡ್ ದೃಢಪಟ್ಟಿದೆ. 8ರಂದು ಕೋವಿಡ್ ಆರೈಕೆ ಕೇಂದ್ರದಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದು ಕೋವಿಡ್ ಇರುವುದು ದೃಢಪಟ್ಟಿದೆ. ಅವರು ವಾಸವಿದ್ದ ಇಡೀ ಅಪಾರ್ಟ್‌ಮೆಂಟ್ ಅನ್ನು ಕಟ್ಟುನಿಟ್ಟಾಗಿ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಅದೇ ರೀತಿ, ವಾರ್ಡ್ ಸಂಖ್ಯೆ 10ರಲ್ಲಿನ ಬಿಇಎಲ್ ಬಡಾವಣೆಯಲ್ಲಿ ಬಿಇಎಲ್ ಬಡಾವಣೆಯಲ್ಲಿ ಒಂದೇ ಕುಟುಂಬದ ಐವರಲ್ಲಿ ಕೋವಿಡ್ ದೃಢಪಟ್ಟಿದೆ. ಮಾ.2ರಂದು ಈ ಕುಟುಂಬ ಆರ್.ಟಿ. ನಗರದಲ್ಲಿ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿತ್ತು.

ವಾರ್ಡ್ ಸಂಖ್ಯೆ4ರ ಚಿಕ್ಕಸಂದ್ರದಲ್ಲಿ ಇಬ್ಬರಿಗೆ ಕೋವಿಡ್ ದೃಢಪಟ್ಟಿದೆ. ಎರಡು ಮಹಡಿಯ ಮನೆಯಲ್ಲಿ 9 ಜನ ವಾಸವಿದ್ದಾರೆ. ಈ ಇಬ್ಬರು ಅಲ್ಲದೆ, ಉಳಿದ ನಾಲ್ವರಿಗೂ ಕೋವಿಡ್ ದೃಢಪಟ್ಟಿದ್ದು, ಇದನ್ನು ಕ್ಲಸ್ಟರ್ ಎಂದು ಘೋಷಿಸಲಾಗಿದೆ.

ನಗರದಲ್ಲಿ ಗುರುವಾರ ಏಳು ಜನ ಕೋವಿಡ್‌ನಿಂದ ಮೃತಪಡುವುದರೊಂದಿಗೆ ಈವರೆಗೆ ಒಟ್ಟಾರೆ 4,537 ಜನ ರಾಜಧಾನಿಯಲ್ಲಿ ಸಾವಿಗೀಡಾಗಿದ್ದಾರೆ. ಒಟ್ಟಾರೆ, 4.14 ಲಕ್ಷ ಕೋವಿಡ್ ಪೀಡಿತರಾಗಿದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



4,14,410 ಒಟ್ಟು ಸೋಂಕಿತರು

4,01,750 ಗುಣಮುಖರಾದವರು

8,122 ಸಕ್ರಿಯ ಪ್ರಕರಣ

4,537 ಸಾವು

ಗುರುವಾರದ ಏರಿಕೆ

925 ದೃಢಪಟ್ಟ ಪ್ರಕರಣ

140 ಗುಣಮುಖ

07 ಸಾವು

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	12.20 ಕೋಟಿ ▲	1.151 ಕೋಟಿ ▲	9,65,102 ▲
ಸಕ್ರಿಯ ಪ್ರಕರಣ	2.07 ಕೋಟಿ	2.66 ಲಕ್ಷ ▲	11,359 ▲
ಗುಣಮುಖ	9.83 ಕೋಟಿ ▲	1.10 ಕೋಟಿ	9,41,309 ▲
ಸಾವು	26.95 ಲಕ್ಷ ▲	1.59 ಲಕ್ಷ	12,415 ▲

ದಿನದ ಏರಿಕೆ

	ವಿಶ್ವ	ಭಾರತ	ರಾಜ್ಯ
ಹೊಸ ಪ್ರಕರಣ	4.56 ಲಕ್ಷ ▲	35,838 ▲	1,488 ▲
ಗುಣಮುಖ	3.98 ಲಕ್ಷ ▼	17,793 ▼	341 ▼
ಸಾವು	9,904 ▲	171 ▼	08 ▲

131 ಐಸಿಯುನಲ್ಲಿ ಇರುವವರು ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
90,830 ▲	62,794 ▲	38,501 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರೆಜಿಲ್
72.96 ▲	37.79 ▲	11.28 ▲

ಎಲ್ಲಿ ಹೆಚ್ಚು ಸಾವು

ರಾಜ್ಯ	ಸಾವು
ಮಹಾರಾಷ್ಟ್ರ	53,138 ▲
ತಮಿಳುನಾಡು	12,573 ▲
ದೆಹಲಿ	10,949 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ರಾಜ್ಯ	ಪ್ರಕರಣ
ಮಹಾರಾಷ್ಟ್ರ	23.96 ▲
ಕೇರಳ	10.98 ▲
ಆಂಧ್ರಪ್ರದೇಶ	8.92

ಪ್ರಜಾವಾಣಿ ಗ್ರಾಫಿಕ್ಸ್



ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ನಟ ಸುದೀಪ್ ಅಭಿನಂದಿಸಿದರು. ಬಿ.ವೈ.ವಿಜಯೇಂದ್ರ ಇದ್ದರು

ಬಿಎಸ್‌ವೈ– ಸುದೀಪ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಟ ಸುದೀಪ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಗುರುವಾರ ಭೇಟಿ ಮಾಡಿ ಅಭಿನಂದಿಸಿದರು.

ಮುಖ್ಯಮಂತ್ರಿಯವರ ನಿವಾಸದಲ್ಲಿ ಭೇಟಿ ಮಾಡಿ ಸುದೀಪ್ ಮಾತುಕತೆ ನಡೆಸಿದರು. ಈ ವೇಳೆ ಬಿ.ವೈ. ವಿಜಯೇಂದ್ರ ಅವರೂ ಇದ್ದರು. ಇದು ರಾಜಕೀಯೇತರ ಭೇಟಿ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.


ವಿಧಾನಸಭೆಯಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ

ಶಾಸಕರ ಅವಹೇಳನ: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರನ್ನು ಅವಹೇಳನ ಮಾಡಿರುವುದು ಮತ್ತು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸದಸ್ಯರಿಗೆ ಬೆದರಿಕೆ ಒಡ್ಡಿರುವ ಆರೋಪ ಎದುರಿಸುತ್ತಿರುವ ಸಹಕಾರ ಇಲಾಖೆಯ ಇಬ್ಬರು ಅಧಿಕಾರಿಗಳ ವಿರುದ್ಧ ತನಿಖೆಗೆ ಆದೇಶಿಸಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿಧಾನಸಭೆಗೆ ಗುರುವಾರ ತಿಳಿಸಿದರು.

ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ ನಾರಾಯಣ್ ಮತ್ತು ಸಹಾಯಕ ಸಹಕಾರ ಅಭಿವೃದ್ಧಿ ಅಧಿಕಾರಿ ವಿ. ಸುನೀಲ್ ವಿರುದ್ಧ ಜೆಡಿಎಸ್ ಸದಸ್ಯರು ಸದನದಲ್ಲಿ ಆರೋಪ ಮಾಡಿದ್ದರು. ನಾರಾಯಣ್ ಅವರು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದರು ಎನ್ನಲಾದ ರೆಕಾರ್ಡಿಂಗ್ ಇರುವ ಸಿ.ಡಿಯನ್ನೂ ಸಲ್ಲಿಸಿದ್ದರು.



ಬಸವರಾಜ ಬೊಮ್ಮಾಯಿ

ಈ ಕುರಿತು ಗುರುವಾರ ಉತ್ತರ ನೀಡಿದ ಗೃಹ ಸಚಿವರು, 'ಶಾಸಕರು ನೀಡಿರುವ ಎಲ್ಲ ದಾಖಲೆಗಳನ್ನೂ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಕಳುಹಿಸಿ, ಸೂಕ್ತ ಕ್ರಮಕ್ಕೆ ಸೂಚಿಸಲಾಗಿದೆ. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸದಸ್ಯರಿಗೆ ಬೆದರಿಕೆ ಒಡ್ಡಿದ ಪ್ರಕರಣದಲ್ಲಿ ಕಠಿಣ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದರು.

ಸಿ.ಡಿಯಲ್ಲಿರುವ ರೆಕಾರ್ಡಿಂಗ್‌ನಲ್ಲಿನ ಧ್ವನಿ ಮಾದರಿ ಪರೀಕ್ಷೆಗೆ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಇಬ್ಬರೂ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಹಾಗೂ ಹೆಚ್ಚುವರಿಯಾಗಿ ನೀಡಿರುವ ಪ್ರಭಾರಗಳನ್ನು ರದ್ದುಪಡಿಸುವಂತೆ ಜೆಡಿಎಸ್ ಸದಸ್ಯರು ಒತ್ತಾಯಿಸಿದರು. ಈ ಕುರಿತು ಸಹಕಾರ ಸಚಿವರಿಂದ ಉತ್ತರ ಕೊಡಿಸುವುದಾಗಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರದ್ದು ಮಸೂದೆಗೆ ಒಪ್ಪಿಗೆ

ಬೆಂಗಳೂರು: ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ರದ್ದುಗೊಳಿಸುವ ಮಸೂದೆಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ಕೃಷ್ಣಾ ಜಲಾನಯನ ಪ್ರದೇಶದ ಕಾಮಗಾರಿಗಳ ನಿರ್ವಹಣೆಗಾಗಿ 1992ರಲ್ಲಿ ಈ ಪ್ರಾಧಿಕಾರವನ್ನು ರಚಿಸಲಾಗಿತ್ತು. ಈಗ ಎಲ್ಲ ಕಾಮಗಾರಿಗಳನ್ನೂ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಮಾಡಲಾಗುತ್ತಿದೆ. ಆದ್ದರಿಂದ ಪ್ರಾಧಿಕಾರವನ್ನು ರದ್ದುಗೊಳಿಸುವ 'ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ಮಸೂದೆ–2021'ಕ್ಕೆ ವಿಧಾನಸಭೆಯ ಒಪ್ಪಿಗೆ ಪಡೆಯಲಾಗಿದೆ.

ಸಂಕ್ಷಿಪ್ತ ಸುದ್ದಿ

ವಾಜೆ ಬಳಸಿದ್ದ ಮತ್ತೆ ಎರಡು ಕಾರು ವಶ

ಮುಂಬೈ (ಪಿಟಿಐ): ಅಮಾನುತಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಬಳಸಿದ್ದ ಎರಡು ಐಷಾರಾಮಿ ಕಾರುಗಳನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಗುರುವಾರ ವಶಪಡಿಸಿಕೊಂಡಿದೆ.

ಠಾಣೆಯ ಸಾಕೇತ್ ಪ್ರದೇಶದಲ್ಲಿನ ವಾಜೆ ನಿವಾಸದ ಹೊರಗೆ ಇದ್ದ ಟೊಯೊಟೊ ಲ್ಯಾಂಡ್ ಕ್ರ್ಯೂಸರ್ ಪ್ರಾಡೊ ವಾಹನವನ್ನು ವಶಪಡಿಕೊಳ್ಳಲಾಗಿದೆ. ಇನ್ನೊಂದು ಮರ್ಸಿಡಿಸ್ ಕಾರು ವಶಪಡಿಸಿಕೊಳ್ಳಲಾಗಿದೆ. ಆದರೆ, ಈ ಕಾರನ್ನು ಯಾವ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎನ್ನುವ ಮಾಹಿತಿ ಲಭ್ಯವಾಗಿಲ್ಲ.

ಇದರಿಂದಾಗಿ, ಉದ್ಯಮಿ ಮುಕೇಶ್ ಅಂಬಾನಿ ಅವರ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಒಟ್ಟು ಐದು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಗುರುವಾರ ಇಬ್ಬರು ಪೊಲೀಸರನ್ನು ಸಹ ವಿಚಾರಣೆಗೆ ಒಳಪಡಿಸಿದೆ. ಇವರಲ್ಲಿ ಒಬ್ಬರು ವಾಜೆ ಅವರ ಆಪ್ತ ಮತ್ತೊಬ್ಬರು ಹಿರಿಯ ಪೊಲೀಸ್ ಇನ್‌ಸ್ಪೆಕ್ಟರ್ ಎಂದು ಮೂಲಗಳು ತಿಳಿಸಿವೆ.

ಚಿನ್ನದ ವ್ಯಾಪಾರಿಯ ₹ 1 ಕೋಟಿ ನಗದು ದರೋಡೆ

ಹುಣಸೂರು: ಬೆಂಗಳೂರಿನಿಂದ ಕೇರಳಕ್ಕೆ ತೆರಳುತ್ತಿದ್ದ ಚಿನ್ನದ ವ್ಯಾಪಾರಿ ಸುರಾಜ್ ಎಂಬುವವರನ್ನು ತಾಲ್ಲೂಕಿನ ಚಿಲ್ಕುಂದ ಗ್ರಾಮದ ಬಳಿ ಅಡ್ಡಗಟ್ಟಿದ ಐವರು ದರೋಡೆಕೋರರು, ₹ 1 ಕೋಟಿ ನಗದನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಕೇರಳದ ಸಪ್ನಾ ಆಭರಣ ಅಂಗಡಿ ಮಾಲೀಕ ಆಗಿರುವ ಸುರಾಜ್ ಹಾಗೂ ಇವರ ಸ್ನೇಹಿತರು, ಬೆಂಗಳೂರಿನಿಂದ ₹ 1 ಕೋಟಿ ನಗದನ್ನು ತೆಗೆದುಕೊಂಡು ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಬುಧವಾರ ನಸುಕಿನಲ್ಲಿ ಚಿಲ್ಕುಂದ ಗ್ರಾಮದ ಬಳಿ ಎರಡು ಕಾರಿನಲ್ಲಿ ಬಂದ ದರೋಡೆಕೋರರು ಅವರನ್ನು ಅಡ್ಡಗಟ್ಟಿದ್ದಾರೆ. ಕಾರಿನಿಂದ ಹೊರದಬ್ಬಿ, ಹಲ್ಲೆ ನಡೆಸಿ, ಹಣದೊಂದಿಗೆ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

'₹ 1 ಕೋಟಿ ಹಣದ ಮೂಲದ ಕುರಿತು ಇನ್ನೂ ಖಚಿತತೆ ಸಿಕ್ಕಿಲ್ಲ' ಎಂದು ಮೂಲಗಳು ತಿಳಿಸಿವೆ.

'ದೇವರ ಅವತಾರ ಪ್ರಧಾನಿ ಮೋದಿ'

ನವದೆಹಲಿ (ಪಿಟಿಐ): 'ದೇಶವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ದೇವರ ಅವತಾರ' ಎಂದು ಅರುಣಾಚಲ ಪ್ರದೇಶದ ಬಿಜೆಪಿ ಸಂಸದ ತಪೀರ್ ಗಾಓ ಬಣ್ಣಿಸಿದ್ದಾರೆ.

'ಪಶ್ಚಿಮ ಬಂಗಾಳ ಮತ್ತು ಅಸ್ಸಾಂನ ಚಹಾ ತೋಟದ ಕಾರ್ಮಿಕರಿಗಾಗಿ ಮೋದಿಯವರು ಕೈಗೊಂಡ ಕ್ರಮವು 'ಭಗವಾನ್, ಅಲ್ಲಾ' ಅವತಾರದಂತಿದೆ' ಎಂದು ಅವರು ಗುರುವಾರ ಲೋಕಸಭೆಯಲ್ಲಿ ಹೇಳಿದರು.

2020-21ರ ಪೂರಕ ಅನುದಾನಕ್ಕೆ ಬೇಡಿಕೆ ಕುರಿತು ನಡೆದ ಚರ್ಚೆ ವೇಳೆ ಮಾತನಾಡಿದ ಗಾಓ, 'ದೇಶವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುತ್ತಿರುವ ಮೋದಿ ಬಗ್ಗೆ ದೇಶದ ಪ್ರತಿಯೊಬ್ಬರೂ ಹೆಮ್ಮೆ ಪಡಬೇಕು' ಎಂದರು.

ಸದನಕ್ಕೆ ತಪ್ಪು ಮಾಹಿತಿ: ಪಾಲಿಕೆ ಎಂಜಿನಿಯರ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ



ಬಿಬಿಎಂಪಿ ಸುದ್ದಿ

ಬೆಂಗಳೂರು: ವಿಧಾನ ಪರಿಷತ್ತಿನ ಸದಸ್ಯ ಯು.ಬಿ.ವೆಂಕಟೇಶ್ ಕೇಳಿದ ಚುಕ್ಕಿ ಗುರುತಿನ ಪ್ರಶ್ನೆಗೆ ತಪ್ಪು ಮಾಹಿತಿಗಳಿಂದ ಕೂಡಿದ ಉತ್ತರ ನೀಡಿದ್ದ ಕಾರ್ಯಪಾಲಕ ಎಂಜಿನಿಯರ್‌ಗೆ ಕಾರಣ ಕೇಳಿ ಬಿಬಿಎಂಪಿ ನೋಟಿಸ್ ನೀಡಿದೆ.

'ವರ್ತೂಲ ರಸ್ತೆಯ ಹೊಸಕೆರೆಹಳ್ಳಿ ಪಿಇಎಸ್ ಕಾಲೇಜು ಜಂಕ್ಷನ್‌ನಿಂದ ನಾಯಂಡಹಳ್ಳಿ ಜಂಕ್ಷನ್ ತನಕ ಸರ್ವೀಸ್ ರಸ್ತೆಗಳು ಸಾರ್ವಜನಿಕ ಬಳಕೆಗೆ ಲಭ್ಯವಾಗಿಲ್ಲ. ಖಾಸಗಿಯವರು ಅನ್ಯ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ, ಗಮನಕ್ಕೆ ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು' ಎಂದು ಪ್ರಶ್ನೆ ಕೇಳಿದ್ದರು.

ಇದಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೇ ಉತ್ತರ ನೀಡಬೇಕಿದ್ದು, ಬಿಬಿಎಂಪಿ ಅಧಿಕಾರಿಗಳಿಂದ ಪಡೆದ ಉತ್ತರವನ್ನು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಸಿದ್ಧಪಡಿಸಿ ಮುಖ್ಯಮಂತ್ರಿ ಕಚೇರಿಗೆ ನೀಡಿದ್ದರು.

'ಸರ್ವೀಸ್ ರಸ್ತೆಗೆ ಕಟ್ಟಡ ತ್ಯಾಜ್ಯ ಸುರಿಯುವುದು, ವಾಹನಗಳ ರಿಪೇರಿ ಕಾರ್ಯ, ಮರಳು ಲಾರಿಗಳ ನಿಲುಗಡೆ ತಾಣವಾಗಿತ್ತು. ರಸ್ತೆ ದುರಸ್ತಿಪಡಿಸಿ ಅಂತಹ ಚಟುವಟಿಕೆಗಳಿಗೆ ಅವಕಾಶ ನೀಡಿಲ್ಲ. ಸಾರ್ವಜನಿಕ ಉಪಯೋಗಕ್ಕೆ ಅನುವು ಮಾಡಲಾಗಿದೆ' ಎಂದು ಎಂಜಿನಿಯರ್ ಅವರು ಉತ್ತರ ನೀಡಿದ್ದರು.

'ಮುಖ್ಯಮಂತ್ರಿ ಅವರ ಪರವಾಗಿ ಗೃಹ ಸಚಿವರು ವಿಧಾನ ಪರಿಷತ್ತಿನಲ್ಲಿ ಉತ್ತರ ನೀಡಿದ್ದು, ಈ ಉತ್ತರ ಸುಳ್ಳು ಮಾಹಿತಿಗಳಿಂದ ಕೂಡಿದೆ ಎಂದು ಚಿತ್ರಗಳ ಸಹಿತ ಯು.ಬಿ. ವೆಂಕಟೇಶ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸದನಕ್ಕೆ ತಪ್ಪು ಮಾಹಿತಿ ನೀಡಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಸರಿಯಾದ ಮಾಹಿತಿಯನ್ನು ನೀಡಬೇಕು ಮತ್ತು ತಪ್ಪು ಮಾಹಿತಿ ನೀಡಿದ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಕೈಗೊಂಡು ಗುರುವಾರವೇ ವರದಿ ಸಲ್ಲಿಸಬೇಕು' ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿದ್ದರು.

ಅದಕ್ಕೂ ಮುನ್ನ ಮುಖ್ಯಮಂತ್ರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಅವರು ನಗರಾಭಿವೃದ್ಧಿ ಇಲಾಖೆಗೆ ಗುರುವಾರ ಬೆಳಿಗ್ಗೆ ಪತ್ರ ಬರೆದಿದ್ದರು.

ತಪ್ಪು ಮಾಹಿತಿ ನೀಡಿದ ಕಾರಣಕ್ಕೆ ಕಾರ್ಯಪಾಲಕ ಎಂಜಿನಿಯರ್(ರಸ್ತೆ, ಮೂಲಸೌಕರ್ಯ) ಸಾವಿತ್ರಿ ಹಕ್ಕಿ ಅವರಿಗೆ ಅದೇ ವಿಭಾಗದ ಮುಖ್ಯ ಎಂಜಿನಿಯರ್ ನೋಟಿಸ್ ನೀಡಿದ್ದಾರೆ. 'ಯಾವ ಕಾರಣಕ್ಕೆ ತಪ್ಪು ಮಾಹಿತಿ ನೀಡಲಾಗಿದೆ ಎಂಬುದಕ್ಕೆ 24 ಗಂಟೆಗಳಲ್ಲಿ ಉತ್ತರ ನೀಡಬೇಕು. ಇಲ್ಲದಿದ್ದರೆ, ನಿಮ್ಮ ಮತ್ತು ನಿಮ್ಮ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

'ಸಿ.ಡಿ ವಿಚಾರ ಪ್ರಸ್ತಾಪಿಸಿದರೆ ಹಿಂಸೆಯಾಗುತ್ತದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ನರ್ಸಿಂಗ್ ಕಾಲೇಜುಗಳಿಗೆ ಸರ್ಕಾರ ಅನುಮತಿ ನೀಡಿರುವ ಕುರಿತು ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿಧಾನ ಪರಿಷತ್ತಿನಲ್ಲಿ ಗುರುವಾರ ಸಿ.ಡಿ. ವಿಚಾರವೂ ಪ್ರತಿಧ್ವನಿಸಿತು.

ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡಿರುವುದರ ಹಿಂದೆ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದ ಆಡಳಿತ ಪಕ್ಷದ ಸದಸ್ಯ ಎನ್.ರವಿಕುಮಾರ್ ಈ ಬಗ್ಗೆ ತನಿಖೆಗೆ ಒತ್ತಾಯಿಸಿದ್ದರು. ರವಿ ಕುಮಾರ್ ಹೆಸರನ್ನು ಉಲ್ಲೇಖಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ, 'ಅವರ ಪರಿಸ್ಥಿತಿ ಸಿ.ಡಿ.ಯಂತಾಗಿದೆ' ಎಂದು ಛೇಡಿಸಿದರು.

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಬಿಜೆಪಿಯ ತೇಜಸ್ವಿನಿ ಗೌಡ, 'ಸಿ.ಡಿ. ವಿಚಾರ ಪದೇ ಪದೇ ಪ್ರಸ್ತಾಪಿಸಿದರೆ ನಮಗೆ ಹಿಂಸೆಯಾಗುತ್ತದೆ. ಮಹಿಳೆಯರು ಈ ಸದನದಲ್ಲಿ ಕುಳಿತುಕೊಳ್ಳಬೇಕೇ ಬೇಡವೇ' ಎಂದು ಖಾರವಾಗಿ ಪ್ರಶ್ನಿಸಿದರು.

'ಹಾಗಾದರೆ ದಿನವೂ ಸಿ.ಡಿ ಸುದ್ದಿ ನೋಡಬೇಕಾದ ಸ್ಥಿತಿ ಎದುರಿಸುತ್ತಿರುವ ಜನರ ಪಾಡೇನು' ಎಂದು ವಿರೋಧ ಪಕ್ಷದ ಮುಖ್ಯ ಸಚೇತಕ ಎಂ.ನಾರಾಯಣಸ್ವಾಮಿ ಚುಚ್ಚಿದರು.

ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, 'ಸದನದಲ್ಲಿ ಸಿ.ಡಿ ವಿಚಾರ ಪದೇ ಪದೇ ಪ್ರಸ್ತಾಪವಾದಾಗ ಇಲ್ಲಿರುವ 10 ಮಹಿಳೆಯರಿಗೇ ಇಷ್ಟೊಂದು ಮುಜುಗರವಾಗುತ್ತದೆ. ಹಾಗಾದರೆ ರಾಜ್ಯದ ಮಹಿಳೆಯರ ಪರಿಸ್ಥಿತಿ ಹೇಗೆ' ಎಂದು ಅವರು ಪ್ರಶ್ನಿಸಿದರು.

ಡಾಕ್ಟರ್ ಆ್ಯಕ್ಟರ್ ಆದಾಗ...

• ರೇಷ್ಮಾ

ಫಿಸಿಯೊಥೆರಪಿಸ್ಟ್ ಆಗಿ ರೋಗಿಗಳ ಶುಶ್ರೂಷೆ ಮಾಡುತ್ತಿದ್ದ ಆಕೆಗೆ ನಟಿಯಾಗಬೇಕು ಎಂಬ ಹಂಬಲವಿತ್ತು. ಮಾಡೆಲ್ ಆಗಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕುವಾಗಲೂ ನಟನೆಯ ಕನಸು ಮನದಲ್ಲಿತ್ತು. ಹೀಗಿದ್ದಾಗ ಕಿರುತೆರೆಯ ಲೋಕ ಅವರನ್ನು ಕೈಬೀಸಿ ಕರೆದಿತ್ತು. ಸಿಕ್ಕ ಅವಕಾಶವನ್ನು ಒಲ್ಲೆ ಎನ್ನದ ಅವರು ಅಕ್ಕನ ಪಾತ್ರವನ್ನೂ ಒಪ್ಪಿಕೊಂಡರು. ಹೀಗೆ ವೈದ್ಯೆಯಾಗಿ ನಟಿಯಾದವರು ಕಲರ್ಸ್ ಕನ್ನಡ ವಾಹಿನಿಯ 'ಹೂಮಳೆ' ಧಾರಾವಾಹಿಯ ಅಂಬಿಕಾ ಪಾತ್ರಧಾರಿ ಆರತಿ ಪಡುಬಿದ್ರಿ. ಹೂಮಳೆ ಇವರ ಮೊದಲ ಧಾರಾವಾಹಿ. ಇವರು ತಮ್ಮ ನಟನಾ ಪಯಣದ ಕುರಿತು 'ಸಿನಿಮಾ ಪುರವಣಿ' ಜೊತೆ ಮಾತನಾಡಿದ್ದಾರೆ.

ನಟನಾ ಹಾದಿ..

'ಮಾಡೆಲ್ ಆಗಿದ್ದ ನನಗೆ ನಟಿಯಾಗಬೇಕು ಎಂಬ ಆಸೆ ಮೂಡಿದ್ದು ಸಹಜ. ಆದರೆ ನಟನೆ ಹಾಗೂ ವೃತ್ತಿ ಎರಡನ್ನೂ ನಿರ್ವಹಣೆ ಮಾಡುವುದು ಕಷ್ಟವಾಗಿತ್ತು. ಆ ಕಾರಣಕ್ಕೆ ವೃತ್ತಿಯ ಮೇಲೆ ಗಮನ ಹರಿಸಿದ್ದೆ. ಆದರೆ ನಟನೆಯ ಸೆಳೆತ ನನ್ನನ್ನು ಬಿಡದ ಕಾರಣ ಆಡಿಷನ್ ನೀಡಿ ಹೂಮಳೆ ಧಾರಾವಾಹಿಗೆ ಆಯ್ಕೆ ಆದೆ. ಆಡಿಷನ್ ನೀಡಿದ್ದಾಗ ಯಾವ ಧಾರಾವಾಹಿ, ಏನು ಪಾತ್ರ ಎಂಬುದು ತಿಳಿದಿರಲಿಲ್ಲ. 2 ತಿಂಗಳ ನಂತರ ವಾಹಿನಿಯವರು ಕರೆ ಮಾಡಿ ಧಾರಾವಾಹಿ ಹಾಗೂ ಪಾತ್ರ ಬಗ್ಗೆ ತಿಳಿಸಿದ್ದರು. ಹೀಗೆ ನನ್ನ ನಟನಾ ಪಯಣ ಆರಂಭವಾಗಿತ್ತು.

ಅಂಬಿಕಾ ಪಾತ್ರದ ಬಗ್ಗೆ

ಹೂಮಳೆಯ ಅಂಬಿಕಾ ಪಾಸಿಟಿವ್ ಪಾತ್ರ. ಅವಳು ತಮ್ಮನಿಗೋಸ್ಕರ ಪ್ರೀತಿ ತೋರಿಸುವ ಅಕ್ಕ, ತಮ್ಮನ ಮಗನನ್ನು ತನ್ನ ಮಗನಂತೆ ನೋಡಿಕೊಳ್ಳುವ ಹೃದಯ ವೈಶಾಲ್ಯ ಉಳ್ಳವಳು. ಮೊದಲಿನಿಂದಲೂ ಪಾಸಿಟಿವ್ ಪಾತ್ರವನ್ನೇ ಮಾಡಬೇಕು ಎಂಬ ಆಸೆ ಹೊಂದಿದ್ದ ನನಗೆ ಈ ಪಾತ್ರದ ಬಗ್ಗೆ ಕೇಳಿದಾಗ ಖುಷಿಯಾಗಿತ್ತು. ಆ ಕಾರಣಕ್ಕೆ ತುಂಬಾ ಖುಷಿಯಿಂದ ಮಾಡುತ್ತಿದ್ದೇನೆ.



ಮೊದಲ ಬಾರಿ ಕ್ಯಾಮೆರಾ ಎದುರಿಸಿದ್ದು

ಮಾಡೆಲಿಂಗ್‌ಗೂ ನಟನೆಗೂ ತುಂಬಾನೇ ವ್ಯತ್ಯಾಸವಿದೆ. ಮೊದಲ ಬಾರಿ ಆಡಿಷನ್‌ಗೆ ಹೋದಾಗ ಕ್ಯಾಮೆರಾ ಎದುರಿಸಿದ ಅನುಭವ ಇದ್ದ ಕಾರಣ ನಟಿಸುವುದು ಸುಲಭ ಎಂದುಕೊಂಡಿದ್ದೆ. ಆದರೆ ಹಾಗೆ ಆಗಲಿಲ್ಲ. ಮೊದಲು ತುಂಬಾನೇ ಭಯ ಪಟ್ಟಿದ್ದೆ. ಸಂಭಾಷಣೆ ನೆನಪಿದ್ದರೆ ಭಾವ ಅಭಿವ್ಯಕ್ತಿ ಮರೆತು ಹೋಗುತ್ತಿತ್ತು, ಭಾವ ಅಭಿವ್ಯಕ್ತಿ ನೆನಪಿದ್ದರೆ ಸಂಭಾಷಣೆ ಮರೆತು ಹೋಗುತ್ತಿತ್ತು. ಆದರೆ ಧಾರಾವಾಹಿ ತಂಡದವರು ನೀಡಿದ ಸಹಕಾರದ ಕಾರಣ ನಾನು ಇಂದು ನಟಿಯಾಗಿದ್ದೇನೆ. ಆದರೆ ಈಗಲೂ ಕಲಿಯುತ್ತಿದ್ದೇನೆ.

ಧಾರಾವಾಹಿ ತಂಡದ ಬಗ್ಗೆ

ಕಲರ್ಸ್ ಕನ್ನಡದಲ್ಲಿ ಕೆಲಸ ಮಾಡುತ್ತಿದ್ದೇನೆ ಎನ್ನುವುದೇ ನನಗೆ ಸಂತೋಷದ ವಿಷಯ. ಅದರೊಂದಿಗೆ ಧಾರಾವಾಹಿ ತಂಡವೂ ತುಂಬಾನೇ ಚೆನ್ನಾಗಿದೆ. ಎಲ್ಲರೂ ಸಹಕಾರ ನೀಡುತ್ತಾರೆ. ನಟನೆಯ ಬಗ್ಗೆ ತಿಳಿಸುತ್ತಾರೆ. ನಮ್ಮಲ್ಲಿನ ಕೊರತೆಗಳನ್ನು ಕಂಡು ಹಿಡಿದು ಹಾಗಲ್ಲ, ಹೀಗೆ ಎಂದು ತಿದ್ದುತ್ತಾರೆ. ಧಾರಾವಾಹಿ ತಂಡದ ಸಹಕಾರದಿಂದಲೇ ಧಾರಾವಾಹಿ ಹಾಗೂ ನಟರು ಇಷ್ಟು ಚೆನ್ನಾಗಿ ತೆರೆ ಮೇಲೆ ಕಾಣಿಸಲು ಸಾಧ್ಯ ಎಂಬುದು ನನ್ನ ಅನಿಸಿಕೆ.

ನಟಿಯಾಗಬೇಕು

ನನಗೆ ನಾಯಕಿಯೇ ಆಗಬೇಕು, ಇಂತಹದ್ದೇ ಪಾತ್ರ ಬೇಕು ಎಂಬುದೆಲ್ಲಾ ಇರಲಿಲ್ಲ. ಯಾವುದೇ ಪಾತ್ರ ಸಿಗಲಿ ನಾನು ಮಾಡುತ್ತೇನೆ. ಒಟ್ಟು ನಾನು ನಟಿ ಎನ್ನಿಸಿಕೊಳ್ಳಬೇಕು ಎಂಬುದಷ್ಟೇ ಮನಸ್ಸಿನಲ್ಲಿತ್ತು. ಒಂದು ಪಾತ್ರ ಮಾಡಬೇಕು, ಮಾಡಿದ ಪಾತ್ರಕ್ಕೆ ನ್ಯಾಯ ಸಲ್ಲಿಸಬೇಕು ಎಂಬ ಉದ್ದೇಶವಿತ್ತು ಎಂದು ಮಾತು ಮುಗಿಸಿದರು ಆರತಿ.

ಇದು ಆದಿತ್ಯನ 'ಮುಂದುವರಿದ ಅಧ್ಯಾಯ'



• ಶರತ್ ಹೆಗ್ಡೆ

> ಭೂಗತಲೋಕದ ವ್ಯಕ್ತಿಗಳ ಪಾತ್ರಗಳನ್ನೇ ತಮ್ಮ ಸಿನಿ ಬದುಕಿನುದ್ದಕ್ಕೂ ಮಾಡುತ್ತಲೇ ಬಂದ ನಟ ಆದಿತ್ಯ ಅವರು 'ಮುಂದುವರಿದ ಅಧ್ಯಾಯ'ದಲ್ಲಿ ತನಿಖಾಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಭಿನ್ನ ಪಾತ್ರದ ಪರಕಾಯ ಪ್ರವೇಶ ಮತ್ತು ಸಿನಿಬದುಕಿನ ಅನುಭವಗಳನ್ನು ಸಿನಿಮಾ ಪುರವಣಿ ಜೊತೆ ತೆರೆದಿಟ್ಟಿದ್ದಾರೆ.

● 'ಮುಂದುವರಿದ ಅಧ್ಯಾಯ' ನಿಮ್ಮ ಪ್ರಕಾರ ಏನು?

– ನನ್ನ ಸಿನಿಮಾ ಬದುಕಿನ ಮುಂದುವರಿದ ಅಧ್ಯಾಯವೇ ಈ ಚಿತ್ರ. ಚಿತ್ರದಲ್ಲಿ ನನ್ನದು ತನಿಖಾಧಿಕಾರಿಯ ಪಾತ್ರ. ಶಿವರಾತ್ರಿಯ ರಾತ್ರಿ ನಡೆಯುವ ಘಟನೆಯೊಂದರ ತನಿಖೆಗೆ ಬರುವ ಅಧಿಕಾರಿ ನಾನು. ಪ್ರಕರಣ ನಿಗೂಢವಾಗುತ್ತಾ ಹೋಗುತ್ತದೆ. ಅದೇನಾಗುತ್ತದೆ ಅನ್ನುವುದನ್ನು ಸಿನಿಮಾದಲ್ಲೇ ನೋಡಬೇಕು.

● ಟ್ರೇಲರ್‌ನಲ್ಲಿ ಒಂದು ಸಣ್ಣ ಸುಳಿವು ಇದ್ದಂತಿದೆ?

ಸಾಮಾನ್ಯವಾಗಿ ನೋಡಿದಾಗ ಹಾಗನ್ನಿಸುತ್ತದೆ. ನೋಡಿ ಒಬ್ಬ ವ್ಯಕ್ತಿ ಸತ್ತ ಮೇಲೆ ಅವನು ಮಾಡಿದ ಒಳ್ಳೆಯ ಕೆಲಸಗಳ ಬಗ್ಗೆ ಮಾತನಾಡುತ್ತಾರೆ. ಮಾತ್ರ ಅಲ್ಲ. ಅದೇ ವ್ಯಕ್ತಿ ಕೆಟ್ಟ ಕೆಲಸ ಮಾಡಿ ಸತ್ತರೆ ಸತ್ತ ಮೇಲೂ ಜನ ಛೀಮಾರಿ ಹಾಕ್ತಾರೆ.

● ತನಿಖಾಧಿಕಾರಿಯ ಪರಕಾಯ ಪ್ರವೇಶ ಹೇಗಿತ್ತು?

ಇದರಲ್ಲಿ ವಾಸ್ತವವಾಗಿ ನಾನು ನಟಿಸಲೇ ಇಲ್ಲ. ತುಂಬಾ ಮೌನ ವಹಿಸುವ ಪಾತ್ರ. ಮಾತು ತುಂಬಾ ಕಡಿಮೆ. ನಾಯಕನ ವೈಭವೀಕರಣದ ಮಾತು ಇಲ್ಲ. ನಿರ್ದೇಶಕರು ಈ ಪಾತ್ರವನ್ನು ತುಂಬಾ ಚೆನ್ನಾಗಿ ಬಳಸಿಕೊಂಡಿದ್ದಾರೆ. ಸಾಮಾನ್ಯ ಪಾತ್ರ ಇದು. ತುಂಬಾ ಹೋಂ ವರ್ಕ್ ಮಾಡಬೇಕಾಗಿ ಬರಲಿಲ್ಲ.

● ಇದುವರೆಗೆ ಭೂಗತ ಲೋಕದ ಕಥೆಗಳಲ್ಲೇ ಕಾಣಿಸಿಕೊಂಡಿದ್ದಿರಿ. ತನಿಖಾಧಿಕಾರಿಯ ಪಾತ್ರಕ್ಕೆ ಹೇಗೆ ಒಗ್ಗಿಕೊಂಡಿರಿ?

ಈ ಕಾರಣಕ್ಕೇ ಈ ಪಾತ್ರ ಹಾಗೂ ಚಿತ್ರ ಒಪ್ಪಿಕೊಂಡದ್ದು. ಭೂಗತ ಜನರ ಕಥಾ ವಸ್ತುಗಳನ್ನು ಮಾಡಿ ಮಾಡಿ ಬೇಜಾರಾಗಿತ್ತು. ಅದಕ್ಕೆ ಸ್ವಲ್ಪ ಭಿನ್ನವಾದ ಪಾತ್ರ ಮಾಡಬೇಕು ಅನಿಸಿತು. ಹಾಗಾಗಿ ಮಾಡಿದ್ದೇನೆ.

ಈ ಚಿತ್ರ ನಾಯಕ ಪ್ರಧಾನ ಅಂದಿದ್ದೀರಲ್ಲಾ...?

ಹೌದು, ಈ ಚಿತ್ರದಲ್ಲಿ ನಾಯಕಿಯೇ ಇಲ್ಲ. ಏಕೆಂದರೆ ಹೀರೋಯಿನ್ ಟ್ರ್ಯಾಕ್ ಬೇಕು ಅನಿಸಲೇ ಇಲ್ಲ. ಇದೊಂದು ಮರ್ಡರ್ ಮಿಸ್ಟರಿಯ ಕಥೆ. ನಾಯಕಿ ಬಂದಳು ಅಂದರೆ ಲವ್, ರೊಮ್ಯಾನ್ಸ್ ತರಬೇಕಾಗುತ್ತದೆ. ಅದು ಈ ಕಥೆಗೆ ಅಗತ್ಯ ಅನಿಸಲಿಲ್ಲ. ಹಾಗಾಗಿ ಚಿತ್ರದಲ್ಲಿ ನಾಯಕಿ ಇಲ್ಲ. ಇದರಲ್ಲಿ ನಾನೇ ಒಂಟಿ ಸಲಗ.

● 17 ವರ್ಷಗಳ ಸಿನಿಪಯಣವನ್ನು ನೆನಪಿಸಿದರೆ ಏನನ್ನಿಸುತ್ತದೆ?

ನಾನು ಮಾಡಿರುವ ಸಿನಿಮಾಗಳೇ ಕಡಿಮೆ. ಆದರೂ ಪ್ರತಿಯೊಂದು ಸಿನಿಮಾದಿಂದಲೂ ಕಲಿತಿದ್ದೇನೆ. ನನಗೆ ಹಿರಿಯರೇ ನಿರ್ದೇಶಕರಾಗಿ ಸಿಕ್ಕಿದ್ದಾರೆ. ಸುಮನಾ ಕಿತ್ತೂರು, ಎಂ.ಎಸ್.ರಮೇಶ್, ರವಿ ಶ್ರೀವತ್ಸ ಮೂರೂ ಜನ ನನ್ನ ಸಿನಿಬದುಕಿನಲ್ಲಿ ಒಳ್ಳೊಳ್ಳೆಯ ಸಿನಿಮಾ ಕೊಟ್ಟಿದ್ದಾರೆ. ಉಳಿದವರು ಕೊಟ್ಟಿಲ್ಲ ಅಂತ ಅಲ್ಲ. ಈ ಮೂವರು ಕೊಟ್ಟ ಚಿತ್ರಗಳು ನನಗೆ ಒಳ್ಳೆಯ ಅವಕಾಶ, ಗುರುತು ಕೊಟ್ಟಿವೆ.

● ಸಿನಿಬದುಕಿನಲ್ಲಿ ತಂದೆ ರಾಜೇಂದ್ರ ಸಿಂಗ್ ಬಾಬು ಅವರ ಪ್ರಭಾವ ಎಷ್ಟು

ಅವರ ಅನುಭವ ದೊಡ್ಡದು. ಮಾರ್ಗದರ್ಶನ ಮಾಡುತ್ತಿರುತ್ತಾರೆ. ನಿರಂತರ ಮಾರ್ಗದರ್ಶನ ಬೇಕೇ ಬೇಕು ಅಲ್ವಾ.

● ಆತಂಕಕಾರಿ ಕಾಲಘಟ್ಟದಲ್ಲಿ ಸಿನಿಮಾ ಬಿಡುಗಡೆ ಆಗುತ್ತಿದೆ. ನಿಮ್ಮ ನಿರೀಕ್ಷೆ ಏನು?

ಸಿನಿಮಾ ಜನರಿಗೆ ಇಷ್ಟವಾಗುತ್ತದೆ. ಅನ್ನುವ ಭರವಸೆ ಖಂಡಿತ ಇದೆ. ಜನ ಸಿನಿಮಾ ಹಾಲ್‌ಗೆ ಬರುತ್ತಿದ್ದಾರೆ. ರಾಬರ್ಟ್ ಚಿತ್ರವೇ ಉದಾಹರಣೆಯಾಗಿ ನಿಂತಿದೆ. ಸಾಕಷ್ಟು ದಾಖಲೆಗಳನ್ನೂ ಮುರಿದಿದೆ. ಈ ಚಿತ್ರಕ್ಕೂ ಪ್ರೋತ್ಸಾಹ ಸಿಗಲಿದೆ ಎಂಬ ನಿರೀಕ್ಷೆ ಇದೆ.

● ಆದಿತ್ಯ ಅವರ ಇನ್ನು ಮುಂದುವರಿದ ಅಧ್ಯಾಯಗಳು ಯಾವುವು?

– ಇದಾದ ಬಳಿಕ ಎಸ್. ನಾರಾಯಣ್ ಅವರ ಜೊತೆ ಬಹು ನಿರೀಕ್ಷೆಯ ಸಿನಿಮಾ ಮಾಡುತ್ತಿದ್ದೇನೆ. ಸಾಕಷ್ಟು ಹಿಂದೆಯೇ ಅವರ ಜೊತೆ ಚಿತ್ರಗಳಲ್ಲಿ ಮಾಡಬೇಕಿತ್ತು. ಈಗ ಕಾಲ ಕೂಡಿ ಬಂದಿದೆ. ಓಂ ಪ್ರಕಾಶ್ ರಾವ್ ನಿರ್ದೇಶನದಲ್ಲಿ ಒಂದು ಚಿತ್ರ ಮಾಡುತ್ತಿದ್ದೇನೆ. ಅಲ್ಲಿಯೂ ಪೊಲೀಸ್ ಅಧಿಕಾರಿಯ ಪಾತ್ರ.

ವಿಧಾನಪರಿಷತ್‌ನಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಹೇಳಿಕೆ

‘ಅಕ್ರಮ ತಡೆಗೆ ಕೆಪಿಎಸ್‌ಸಿ ಪರೀಕ್ಷಾ ಪದ್ಧತಿ ಬದಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮ ತಡೆಗಟ್ಟಲು ಪರೀಕ್ಷಾ ಪದ್ಧತಿಯಲ್ಲಿಯೇ ಬದಲಾವಣೆ ತರಲು ಚಿಂತನೆ ನಡೆಯುತ್ತಿದೆ’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆಪಿಎಸ್‌ಸಿ ನಡೆಸುವ ನೇಮಕಾತಿಯಲ್ಲಿನ ಅಕ್ರಮಗಳು ಮತ್ತು ಇತ್ತೀಚೆಗೆ ನಡೆದ ಪ್ರಶ್ನೆಪತ್ರಿಕೆ ಸೋರಿಕೆ ಬಗ್ಗೆ ವಿಧಾನಪರಿಷತ್‌ನಲ್ಲಿ ಪ್ರಶ್ನೆ ಕೇಳಿದ ಬಿಜೆಪಿಯ ಪ್ರದೀಪ್ ಶೆಟ್ಟರ್, ‘ಅರ್ಹತೆ ಬಿಟ್ಟು, ಹಣ ಕೊಟ್ಟವರ ನೇಮಕಾತಿ ನಡೆಯುತ್ತಿದೆ. ಈ ಸಂಸ್ಥೆಯನ್ನು ಮುಚ್ಚುವುದೇ ಸೂಕ್ತ’ ಎಂದು ಅಭಿಪ್ರಾಯಪಟ್ಟರು.

ಬೊಮ್ಮಾಯಿ ಮಾತನಾಡಿ, ‘ಇತ್ತೀಚೆಗೆ ನಡೆದ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭದ್ರತೆಯ ಲೋಪ ಇಲ್ಲ. ಕೆಪಿಎಸ್‌ಸಿ ಸಿಬ್ಬಂದಿಯಿಂದಲೇ ಈ ಸೋರಿಕೆ ಆಗಿದೆ. ಗೋಪ್ಯತೆ ಕಾಪಾಡಿಕೊಳ್ಳಲು ಕೋಡ್ ನೀಡಲಾಗುತ್ತದೆ. ಈ ಕೋಡ್ ಕೆಪಿಎಸ್‌ಸಿಯ ಅಧ್ಯಕ್ಷರಿಗಾಗಲಿ, ಕಾರ್ಯದರ್ಶಿಗಾಗಲಿ ಗೊತ್ತಿರುವುದಿಲ್ಲ. ಪ್ರಶ್ನೆ ಪತ್ರಿಕೆ ರಹಸ್ಯ ಕಾಪಾಡಿಕೊಳ್ಳಲು ನಿರ್ದೇಶಿತವಾಗಿರುವ ಸಿಬ್ಬಂದಿಗೆ ನೀಡಲಾಗುತ್ತದೆ. ಈ ಕೋಡ್‌ಗಳು ಬೇರೆಯವರಿಗೆ ಹೇಗೆ ತಿಳಿಯಿತು ಎಂದು ಗೊತ್ತಿಲ್ಲವೆಂದು ಸಿಬ್ಬಂದಿ ಹೇಳುತ್ತಿದ್ದಾರೆ. ಪ್ರಶ್ನೆ ಪತ್ರಿಕೆ ಬಹಿರಂಗಪಡಿಸಿದ ಆರೋಪಿಗಳಿಗೆ ಕೋಡ್‌ನ ಪೆನ್‌ಡ್ರೈವ್ ಸಿಕ್ಕಿದ್ದು ಹೇಗೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ತಪ್ಪಿತಸ್ಥರನ್ನು ಅಮಾನತುಗೊಳಿಸಿ ವಿಚಾರಣೆಗೆ ಒಳಪಡಿಸಲಾಗಿದೆ’ ಎಂದರು.

ಮುಖ್ಯಾಂಶಗಳು

- ಪ್ರಶ್ನೆಪತ್ರಿಕೆ ಸೋರಿಕೆಗೆ ಕೆಪಿಎಸ್‌ಸಿ ಸಿಬ್ಬಂದಿಯೇ ಕಾರಣ
- ಆರೋಪಿಗಳಿಗೆ ಕೋಡ್‌ನ ಪೆನ್‌ಡ್ರೈವ್ ಸಿಕ್ಕಿದ್ದರ ಬಗ್ಗೆ ತನಿಖೆ
- ಯುಪಿಎಸ್‌ಸಿ ಪರೀಕ್ಷಾ ಮಾದರಿ ಅಳವಡಿಕೆಗೆ ಚಿಂತನೆ

‘ಮಾಹಿತಿ ತಂತ್ರಜ್ಞಾನ ಅಳವಡಿಸಿಕೊಂಡು ಆನ್‌ಲೈನ್ ಮೂಲಕ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಕೇಂದ್ರ ಲೋಕಸೇವಾ ಆಯೋಗದೊಂದಿಗೆ ಚರ್ಚಿಸಿ, ಅಲ್ಲಿನ ವಿಧಾನ ಅಳವಡಿಸಿಕೊಳ್ಳುವ ಬಗ್ಗೆ ಚಿಂತಿಸಲಾಗುತ್ತಿದೆ. ಪರೀಕ್ಷೆ ದಿನ ನಡೆಯುವ ಅಕ್ರಮಗಳನ್ನು ತಡೆಗಟ್ಟಲು ಹಾಲಿ ನಿಯಮಗಳಂತೆ ಕೇವಲ ಓ.ಎಂ.ಆರ್ ಮೂಲಕ ಉತ್ತರಿಸುವ ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ ಪರೀಕ್ಷೆಗಳನ್ನು ನಡೆಸದೆ, ಕೇಂದ್ರ ಲೋಕಸೇವಾ ಆಯೋಗ ಮತ್ತು ಸಿಬ್ಬಂದಿ ಆಯ್ಕೆ ಆಯೋಗದ ಮಾದರಿಯಲ್ಲಿ ಎರಡು ಹಂತದಲ್ಲಿ ಒಂದು ವಸ್ತುನಿಷ್ಠ ಬಹು ಆಯ್ಕೆ ಮಾದರಿ, ಮತ್ತೊಂದು ವಿವರಣಾತ್ಮಕ ಮಾದರಿಯಲ್ಲಿ ನಡೆಸಲು ನಿಯಮ ತಿದ್ದುಪಡಿಗೂ ಪರಿಶೀಲಿಸಲಾಗುತ್ತಿದೆ’ ಎಂದು ಬೊಮ್ಮಾಯಿ ವಿವರಿಸಿದರು.



ವಿಧಾನಪರಿಷತ್‌ನಲ್ಲಿ ಗುರುವಾರ ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿದರು

‘ಕಾನ್‌ಸ್ಟೆಬಲ್ ಹುದ್ದೆ ಭರ್ತಿ ಬಳಿಕ ಪಾಳಿ ವ್ಯವಸ್ಥೆ’

‘ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳನ್ನು ಸಂಪೂರ್ಣ ಭರ್ತಿ ಮಾಡಿದ ಬಳಿಕ ಪಾಳಿ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಎಸ್. ರವಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಪಿಎಸ್‌ಐನಿಂದ ಕಾನ್‌ಸ್ಟೆಬಲ್ ವರೆಗೆ 16 ಸಾವಿರಕ್ಕಿಂತಲೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನೂ 23 ಸಾವಿರ ಹುದ್ದೆಗಳು ಖಾಲಿ ಇವೆ. ಶೀಘ್ರದಲ್ಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು’ ಎಂದರು.

ಸುದ್ದಿ 2 ನಿಮಿಷ

ಕ್ವಾರಿಯಲ್ಲಿ ಸ್ಫೋಟ: ಸರ್ಕಾರದ ನಿರ್ಲಕ್ಷ್ಯವೇ ಕಾರಣ– ಸಿದ್ದರಾಮಯ್ಯ

ಬೆಂಗಳೂರು: ಶಿವಮೊಗ್ಗದ ಹುಣಸೋಡು ಹಾಗೂ ಚಿಕ್ಕಬಳ್ಳಾಪುರದ ಗುಡಿಬಂಡೆಯಲ್ಲಿ ಸಂಭವಿಸಿದ ಸ್ಫೋಟಗಳಿಗೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.


ವಿಧಾನಸಭೆಯಲ್ಲಿ ಗುರುವಾರ ನಿಯಮ 60ರಡಿ ನಿಲುವಳಿ ಸೂಚನೆ ಮಂಡಿಸಿ ಮಾತನಾಡಿದ ಅವರು, ’ರಾಜ್ಯದ ಬಹುತೇಕ ಅಕ್ರಮ ಕಲ್ಲು ಕ್ವಾರಿಗಳಲ್ಲಿ ರಾಜಕೀಯ ನಾಯಕರ ಪಾಲುದಾರಿಕೆ ಇದೆ‘ ಎಂದರು.

’ಹುಣಸೋಡು ಸ್ಫೋಟದ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದೆ. ಆದರೆ, ಸರ್ಕಾರ ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ತನಿಖೆ ನಡೆಸಿ ಕೈತೊಳೆದುಕೊಂಡಿತು. ತಿಂಗಳು ಕಳೆಯುವ ಮುನ್ನವೇ ಚಿಕ್ಕಬಳ್ಳಾಪುರದಲ್ಲಿ ಸ್ಫೋಟ ಸಂಭವಿಸಿತು. ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದರೆ ಈ ದುರ್ಘಟನೆ ನಡೆಯುತ್ತಿರಲಿಲ್ಲ‘ ಎಂದು ಅವರು ಪ್ರತಿಪಾದಿಸಿದರು.

ಎರಡು ಘಟನೆಗಳಲ್ಲಿ ಮೃತಪಟ್ಟ 12 ಕಾರ್ಮಿಕರ ಸಾವಿಗೆ ಯಾರು ಹೊಣೆ? ಇದನ್ನು ಸರ್ಕಾರದ ಬೇಜವಾಬ್ದಾರಿತನ ಅನ್ನದೆ ಇನ್ನೇನು ಹೇಳಬೇಕು ಎಂದೂ ಪ್ರಶ್ನಿಸಿದರು.

’ಹುಣಸೋಡಿನ ಅಕ್ರಮ ಗಣಿಗಾರಿಕೆ ಹಿಂದೆ ರಾಜಕೀಯ ನಾಯಕರ ಅಭಯಹಸ್ತವಿದೆ ಎಂದು ಬಿಜೆಪಿಯ ಆಯನೂರು ಮಂಜುನಾಥ್ ಅವರೇ ಹೇಳಿದ್ದರು. ಅದೇ ರೀತಿ ಹಿರೇನಾಗವಲ್ಲಿಯ ಅಕ್ರಮ ಗಣಿಗಾರಿಕೆಯಲ್ಲೂ ನಾಗರಾಜ ಎಂಬ ಪ್ರಭಾವಿ ರಾಜಕಾರಣಿ ಶಾಮೀಲಾಗಿದ್ದರು. ಆತನನ್ನು ಸ್ಥಳೀಯ ಜನರು ಗುಡಿಬಂಡೆ ಬಿಜೆಪಿ ನಾಗರಾಜ್ ಎಂದೇ ಕರೆಯುತ್ತಾರೆ‘ ಎಂದರು.

’ಹಿರೇನಾಗವಲ್ಲಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ 13 ಜನರನ್ನು ಆರೋಪಿಗಳಾಗಿ ಗುರುತಿಸಿ, ಕೆಲವರನ್ನು ಬಂಧಿಸಲಾಗಿದೆ. ಇದರಲ್ಲಿ ಸ್ಫೋಟದಲ್ಲಿ ಸತ್ತ 6 ಕಾರ್ಮಿಕರು ಹಾಗೂ ಒಬ್ಬ ಗಾಯಾಳುವಿನ ಹೆಸರನ್ನೂ ಸೇರಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಈವರೆಗೆ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಮಾತ್ರ ಅಮಾನತು ಮಾಡಲಾಗಿದೆ. ಇನ್ನುಳಿದ ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾಗುವುದು ಯಾವಾಗ‘ ಎಂದು ಪ್ರಶ್ನಿಸಿದರು.



ಜಲಸಾರಿಗೆ ಮಂಡಳಿ (ತಿದ್ದುಪಡಿ) ಮಸೂದೆ ಮಂಡನೆ

ಬೆಂಗಳೂರು: ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ಮಸೂದೆ–2021 ಅನ್ನು ಮೀನುಗಾರಿಕೆ ಹಾಗೂ ಬಂದರು ಸಚಿವ ಎಸ್.ಅಂಗಾರ ವಿಧಾನಸಭೆಯಲ್ಲಿ ಗುರುವಾರ ಮಂಡಿಸಿದರು.

ಮಂಡಳಿ ಅಧ್ಯಕ್ಷರನ್ನಾಗಿ ಮುಖ್ಯಮಂತ್ರಿ ಹಾಗೂ ಉಪಾಧ್ಯಕ್ಷರನ್ನಾಗಿ ಬಂದರು ಸಚಿವರನ್ನು ನೇಮಿಸಲು ಪ್ರಸ್ತಾಪಿಸಲಾಗಿದೆ. ಮಂಡಳಿಯು ಗುತ್ತಿಗೆ ಕರಾರು ಮಾಡಿಕೊಳ್ಳುವ ಅವಧಿಯನ್ನು ಐದು ವರ್ಷಗಳಿಂದ ಮೂವತ್ತು ವರ್ಷಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ.

ಮಂಗಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆನಾಡಿನಲ್ಲಿ ಮಂಗಗಳ ಹಾವಳಿ ತಡೆಗಟ್ಟಲು ಗಂಡು ಮಂಗಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನು ನಡೆಸಲು ಅರಣ್ಯ ಇಲಾಖೆ ತೀರ್ಮಾನಿಸಿದೆ.

ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಪರವಾಗಿ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಈ ಉತ್ತರ ನೀಡಿದರು. ಹಿಮಾಚಲಪ್ರದೇಶದಲ್ಲಿ ಇಂತಹ ಪ್ರಯೋಗ ಮಾಡಿ ಯಶಸ್ಸು ಸಾಧಿಸಲಾಗಿದೆ ಎಂದೂ ಸಚಿವರು ಹೇಳಿದರು.

ಅವುಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸಲು ಪಶು ವೈದ್ಯಾಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಲಾಗಿದೆ. ಸೆರೆ ಹಿಡಿದ ಮಂಗಗಳನ್ನು ಪಶು ವೈದ್ಯಕೀಯ ಕಾಲೇಜಿಗೆ ಕೊಂಡೊಯ್ದು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಚಿಕಿತ್ಸೆಯ ನಂತರ ಅವುಗಳಿಗೆ ಆಹಾರ ಹಾಗೂ ಔಷಧೋಪಚಾರ ಮಾಡಿ 2–3 ದಿನಗಳ ಕಾಲ ಸೂಕ್ತ ನಿಗಾದಲ್ಲಿಡಲಾಗುತ್ತದೆ. ಗುಣಮುಖವಾದ ಬಳಿಕ ಮರಳಿ ಕಾಡಿಗೆ ಬಿಡಲಾಗುತ್ತದೆ. ಆರಂಭಿಕ ಹಂತದಲ್ಲಿ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಈ ಕಾರ್ಯ ಮಾಡಲಾಗುತ್ತದೆ ಎಂದು ಹೇಳಿದರು.

’₹6 ಕೋಟಿ ವೆಚ್ಚದಲ್ಲಿ ಮಂಕಿ ಪಾರ್ಕ್ ಸ್ಥಾಪಿಸುವುದಾಗಿ ಒಂದೂವರೆ ವರ್ಷದ ಹಿಂದೆ ಸರ್ಕಾರ ಪ್ರಕಟಿಸಿತ್ತು. ಈಗ ಆ ಯೋಜನೆ ಅಪೂರ್ಣವಾಗಿದೆ. ಇದೀಗ ಸಾಗರದಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಇದಕ್ಕೆ ಬಜೆಟ್‌ನಲ್ಲಿ ₹25 ಲಕ್ಷ ಮೀಸಲಿಡಲಾಗಿದೆ. ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನು ಗಂಡು ಮಂಗಗಳಿಗೆ ಮಾಡುತ್ತೀರಾ ಅಥವಾ ಹೆಣ್ಣು ಮಂಗಗಳಿಗೆ ಮಾಡುತ್ತೀರಾ‘ ಎಂದು ಆರಗ ಜ್ಞಾನೇಂದ್ರ ಪ್ರಶ್ನಿಸಿದರು. ಗಂಡು ಕೋತಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ ಎಂದು ಜಗದೀಶ ಶೆಟ್ಟರ್ ಉತ್ತರಿಸಿದರು.

‘ಕೋಲಾರದಲ್ಲಿ ಮನೆಯೊಳಗೆ ಕೋತಿಗಳು ನುಗ್ಗುತ್ತವೆ ಎಂದು ಜೆಡಿಎಸ್‌ನ ಶ್ರೀನಿವಾಸ ಗೌಡ ಗಮನ ಸೆಳೆದರು. ನನ್ನ ಕ್ಷೇತ್ರದಲ್ಲಿ ಹಂದಿ ಹಾಗೂ ಜಿಂಕೆಗಳ ಹಾವಳಿ ಅತಿಯಾಗಿದೆ’ ಎಂದು ಬಿಜೆಪಿಯ ಕಳಕಪ್ಪ ಬಂಡಿ ಹೇಳಿದರು. ಈ ಮಾತಿಗೆ ಅಮರೇಗೌಡ ಬಯ್ಯಾಪುರ, ಹಾಲಪ್ಪ ಆಚಾರ್ ಧ್ವನಿಗೂಡಿಸಿದರು.

‘ಕಾಡು ಪ್ರಾಣಿಗಳು ತೋಟಕ್ಕೆ ನುಗ್ಗಿ ಹಾನಿ ಮಾಡದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ. ಇಲ್ಲದಿದ್ದರೆ ಅವುಗಳನ್ನು ಗುಂಡಿಕ್ಕಿ ಕೊಲ್ಲಲು ಅನುಮತಿ ಕೊಡಿ’ ಎಂದು ಆರಗ ಜ್ಞಾನೇಂದ್ರ ಒತ್ತಾಯಿಸಿದರು. ‘ಅರಣ್ಯ ಇಲಾಖೆಯನ್ನು ನೋಡಿಯೇ ಅರಣ್ಯ ರೋದನ ಪದ ಬಂದಿರಬೇಕು’ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ವನ್ಯಪ್ರಾಣಿಗಳಿಂದ ಉಂಟಾದ ಹಾನಿಗಳಿಗೆ ನೀಡುವ ಪರಿಹಾರ ಅವೈಜ್ಞಾನಿಕ ಎಂದು ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ ದೂರಿದರು.

‘ಯುಕೆಪಿ ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರಕ್ಕೆ ಪತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಮೂರನೇ ಹಂತದ ಕಾಮಗಾರಿಯನ್ನು ಐದು ವರ್ಷಗಳಲ್ಲಿ ಪೂರ್ಣಗೊಳಿಸಲು ಯತ್ನಿಸುತ್ತಿದ್ದು, ಇದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರದ ಮೇಲೆ ಒತ್ತಡ ಹೇರಲಾಗುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪ್ರಕಾಶ್ ರಾಥೋಡ್ ಪ್ರಶ್ನೆಗೆ ಉತ್ತರಿಸಿದ ಕಾರಜೋಳ, ‘ಯುಕೆಪಿ ಮೂರನೇ ಹಂತದ ಕಾಮಗಾರಿಗೆ ಸಂಬಂಧಿಸಿದಂತೆ ನ್ಯಾಯಮಂಡಳಿಯಿಂದ ತೀರ್ಪು ಬಂದ ಬಳಿಕ ಯೋಜನೆ ಕೈಗೆತ್ತಿಕೊಳ್ಳಲು 2012-13ರಲ್ಲಿ ₹ 17,207 ಕೋಟಿ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ನಂತರ ಸರ್ಕಾರ ಬದಲಾಯಿತು. ಆರಂಭದಲ್ಲಿ ₹ 735 ಕೋಟಿಯನ್ನು ಬಿಜೆಪಿ ಸರ್ಕಾರ ವೆಚ್ಚ ಮಾಡಿತ್ತು. ಸಿದ್ದರಾಮಯ್ಯ ಸರ್ಕಾರ ₹ 7,600 ಕೋಟಿ, ಕುಮಾರಸ್ವಾಮಿ ಸರ್ಕಾರ ₹ 1,346 ಕೋಟಿ ಖರ್ಚು ಮಾಡಿತ್ತು’ ಎಂದು ವಿವರಿಸಿದರು.

‘ಯಡಿಯೂರಪ್ಪ ಸರ್ಕಾರ ಮತ್ತೆ ₹ 3,000 ಕೋಟಿ ಖರ್ಚು ಮಾಡಿದೆ. ಪ್ರಸಕ್ತ ಬಜೆಟ್‌ನಲ್ಲಿ ₹ 5,600 ಕೋಟಿ ಒದಗಿಸಲಾಗಿದೆ. ಇನ್ನೂ ಹೆಚ್ಚಿನ ಅನುದಾನ ನೀಡಲು ಉದ್ದೇಶಿಸಲಾಗಿದೆ’ ಎಂದರು.

ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ‘₹ 5,600 ಕೋಟಿ ಸಾಕಾಗುವುದಿಲ್ಲ. ₹ 1 ಲಕ್ಷ ಕೋಟಿಯ ಯೋಜನೆಯಿದು. ಕಳೆದ ವರ್ಷವೂ ಸರಿಯಾದ ಅನುದಾನ ಒದಗಿಸಲಿಲ್ಲ. ಆದ್ಯತೆ ಮೇಲೆ ಪರಿಗಣಿಸಿ, ಹೆಚ್ಚಿನ ಅನುದಾನ ನೀಡಬೇಕು’ ಎಂದು ಆಗ್ರಹಿಸಿದರು.

ಆಗ ಕಾರಜೋಳ, ‘ಆರಂಭದಲ್ಲಿ ₹ 17,207 ಕೋಟಿ ಇದ್ದ ಈ ಯೋಜನೆ, ಬಳಿಕ ₹ 51,148 ಕೋಟಿಗೆ ಏರಿಕೆ ಆಗಿತ್ತು. ₹ 35 ಸಾವಿರ ಕೋಟಿ (ಆರ್ ಆ್ಯಂಡ್ ಆರ್) ಮುಳುಗಡೆ ಪ್ರದೇಶದ ಜನರಿಗೆ ಪರಿಹಾರ ನೀಡಲು ಬೇಕಿದೆ. ಸಿವಿಲ್ ಕಾಮಗಾರಿಗೆ ₹ 16 ಸಾವಿರ ಕೋಟಿ ಅಗತ್ಯವಿದೆ. ವಾರ್ಷಿಕ ಶೇ 10ರಷ್ಟು ಯೋಜನಾ ವೆಚ್ಚದಲ್ಲಿ ಹೆಚ್ಚಾಗುತ್ತಿದೆ. ಯಾವುದೇ ಪರಿಸ್ಥಿತಿಯಲ್ಲಿ ಯೋಜನೆ ಮುಗಿಸಲು ಯತ್ನಿಸಲಾಗುವುದು. ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರಕ್ಕೆ ಪತ್ರ ವ್ಯವಹಾರ ಕೂಡಾ ನಡೆಯುತ್ತಿದೆ. ರಾಜ್ಯದ ಪಾಲಿನ ನೀರು ಸಂಪೂರ್ಣ ಬಳಸಲು ಯತ್ನಿಸಲಾಗುತ್ತದೆ’ ಎಂದೂ ಮಾಹಿತಿ ನೀಡಿದರು.

ವಿಧಾನಸಭೆ: ಶ್ವೇತಪತ್ರ ಪ್ರಕಟಿಸುವಂತೆ ಶಾಸಕ ಎಚ್‌.ಕೆ. ಪಾಟೀಲ್ ಆಗ್ರಹ

ಖಜಾನೆಯಿಂದ ಹೊರಗುಳಿದ ₹ 17,000 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗಳು ಹಾಗೂ ವಿವಿಧ ಬ್ಯಾಂಕ್‌ಗಳಲ್ಲಿ ಇರಿಸಿರುವ ಪ್ರತ್ಯೇಕ ಠೇವಣಿಗಳು ಸೇರಿದಂತೆ ₹17,000 ಕೋಟಿ ಮೊತ್ತ ರಾಜ್ಯ ಸರ್ಕಾರದ ಖಜಾನೆಯಿಂದ ಹೊರಗಿದೆ. ಈ ಕುರಿತು ತಕ್ಷಣವೇ ಸರ್ಕಾರ ಶ್ವೇತಪತ್ರ ಪ್ರಕಟಿಸಬೇಕು ಎಂದು ಕಾಂಗ್ರೆಸ್‌ನ ಎಚ್.ಕೆ. ಪಾಟೀಲ ಗುರುವಾರ ವಿಧಾನಸಭೆಯಲ್ಲಿ ಆಗ್ರಹಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಈ ಕುರಿತು ಕೆಲವು ಮಾಹಿತಿ ಲಭಿಸಿತ್ತು. ಪರಿಶೀಲನೆ ನಡೆಸುವಂತೆ ಸಮಿತಿಯಿಂದ ಪ್ರಧಾನ ಲೆಕ್ಕ ನಿಯಂತ್ರಕರಿಗೆ ಪತ್ರ ಬರೆಯಲಾಗಿತ್ತು. ಈಗ ಪ್ರಧಾನ ಲೆಕ್ಕ ನಿಯಂತ್ರಕರಿಂದ ಬಂದಿರುವ ವರದಿ ಅದನ್ನು ಸಾಬೀತುಪಡಿಸಿದೆ’ ಎಂದರು.

76 ಪಿ.ಡಿ ಖಾತೆಗಳಲ್ಲಿ ₹ 4,421.26 ಕೋಟಿ ಠೇವಣಿ ಇದೆ. ಕೆಲವು ಇಲಾಖೆಗಳ ಅಧಿಕಾರಿಗಳು ಪ್ರತ್ಯೇಕ ಪಿ.ಡಿ ಖಾತೆಗಳಲ್ಲಿ ಇರಿಸಿರುವ ₹ 2,741 ಕೋಟಿ ಮುರು ವರ್ಷಗಳಿಂದ ಬಳಕೆಯಾಗದೆ ಉಳಿದಿದೆ. ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಬಿಡುಗಡೆಯಾಗಿದ್ದ ₹ 10,000 ಕೋಟಿಯನ್ನು ಅಧಿಕಾರಿಗಳು ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದ್ದಾರೆ. ಈ ಹಣ ಖಜಾನೆ ಇಲಾಖೆಯಿಂದ ಹೊರಗೆ ಉಳಿದುಕೊಂಡಿದೆ ಎಂದು ಪ್ರಧಾನ ಲೆಕ್ಕ ನಿಯಂತ್ರಕರು ಹಣಕಾಸು ಇಲಾಖೆಗೆ ಬರೆದಿರುವ ಪತ್ರವನ್ನು ಪ್ರದರ್ಶಿಸಿದರು.

‘ಇಷ್ಟೊಂದು ದೊಡ್ಡ ಮೊತ್ತದ ಅನುದಾನ ಖಜಾನೆಯಿಂದ ಹೊರಕ್ಕೆ ಇರುವುದರಿಂದ ದುರ್ಬಳಕೆ ಆಗುವ ಸಾಧ್ಯತೆ ಇದೆ ಎಂದು ಲೆಕ್ಕ ನಿಯಂತ್ರಕರು ಸಂಶಯ ವ್ಯಕ್ತಪಡಿಸಿದ್ದಾರೆ. ಇಂತಹ ಲೋಪಗಳಿಗೆ ಆರ್ಥಿಕ ಇಲಾಖೆಯ ಕೋಡ್‌ಗಳೇ ಕಾರಣ. ತಕ್ಷಣವೇ ಕೋಡ್‌ಗಳ ಪರಿಷ್ಕರಣೆ ಆಗಬೇಕು. ₹ 17,000 ಕೋಟಿ ಮೊತ್ತ ಎಲ್ಲೆಲ್ಲಿ ಇದೆ ಎಂಬುದರ ಸಮಗ್ರ ಮಾಹಿತಿಯನ್ನು ಸರ್ಕಾರ ಬಹಿರಂಗಪಡಿಸಬೇಕು’ ಎಂದು ಒತ್ತಾಯಿಸಿದರು.

ಹುದ್ದೆ ತುಂಬದೆ ವಂಚನೆ: ಈಗ ಎಲ್ಲರೂ ಮೀಸಲಾತಿಯ ಕುರಿತು ತೋಳೇರಿಸಿ ಮಾತನಾಡುತ್ತಿದ್ದಾರೆ. ಆದರೆ, 15 ವರ್ಷಗಳಿಂದ ರಾಜ್ಯ ಸರ್ಕಾರದ 2.5 ಲಕ್ಷ ಹುದ್ದೆಗಳನ್ನು ಖಾಲಿ ಇಡಲಾಗಿದೆ. ಎಲ್ಲ ಹುದ್ದೆಗಳನ್ನೂ ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲಾಗುತ್ತಿದೆ. ಮೀಸಲಾತಿಗೆ ಅರ್ಹರಾದವರಿಗೆ ಆರ್ಥಿಕ ಮುಗ್ಗಟ್ಟಿನ ಕಾರಣ ನೀಡಿ ವಂಚಿಸಲಾಗಿದೆ ಎಂದು ಪಾಟೀಲ ದೂರಿದರು.

‘ಐಎಎಸ್, ಐಪಿಎಸ್ ಖಾಸಗೀಕರಣವಾಗಲಿ’

ಎಚ್.ಕೆ. ಪಾಟೀಲ ಮೀಸಲಾತಿ ಕುರಿತು ಮಾತನಾಡುತ್ತಿದ್ದಾಗ ಮಧ್ಯ ಪ್ರವೇಶಿಸಿದ ಬಿಜೆಪಿ ಶಾಸಕ ಎಂ.ಪಿ. ಕುಮಾರಸ್ವಾಮಿ, ‘ರೈಲ್ವೆ, ಎಲ್‌ಐಸಿ ಎಲ್ಲವೂ ಖಾಸಗೀಕರಣ. ಐಎಎಸ್, ಐಪಿಎಸ್ ಕೂಡ ಖಾಸಗೀಕರಣವಾಗಲಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಶಾಸಕ ತಮ್ಮ ಸರ್ಕಾರದ ವಿರುದ್ಧದ ಅಸಮಾಧಾನವನ್ನು ಸ್ಫೋಟಗೊಳಿಸಿದ್ದಾರೆ ಎಂದು ಪಾಟೀಲ ಪ್ರತಿಕ್ರಿಯಿಸಿದರು.

ವಿಶೇಷ ಕಾರ್ಯಕ್ರಮ ರೂಪಿಸಲು ಸಲಹೆ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪಿಸದೇ ಇರುವುದಕ್ಕೆ ಎಚ್.ಕೆ. ಪಾಟೀಲ ಆಕ್ಷೇಪ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ಮಾದರಿಯಲ್ಲಿ ವಿಶೇಷ ಕಾರ್ಯಕ್ರಮ ರೂಪಿಸುವಂತೆ ಆಗ್ರಹಿಸಿದ ಅವರು, 750 ಗ್ರಾಮೀಣ ಶಾಲೆಗಳ ಅಭಿವೃದ್ಧಿ ಮಾಡುವಂತೆ ಸಲಹೆ ನೀಡಿದರು.



ವಿಧಾನಪರಿಷತ್‌ನಲ್ಲಿ ಗುರುವಾರ ಪರಿಷತ್ ಸದಸ್ಯ ಆಯನೂರು ಮಂಜುನಾಥ್, ಸಚಿವ ಎಸ್. ಸುರೇಶ್ ಕುಮಾರ್ ಹಾಗೂ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಪರಸ್ಪರ ಚರ್ಚೆಯಲ್ಲಿ ತೊಡಗಿದ್ದರು

ಧರಣಿ ಕೈಬಿಟ್ಟ ಜೆಡಿಎಸ್

ಒಂದನೇ ಪುಟದಿಂದ

ಅನುದಾನದ ಲಭ್ಯತೆ ಇಲ್ಲದೆ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿತ್ತು. ಕೋವಿಡ್ ಕಾರಣದಿಂದ ರಾಜ್ಯ ಸರ್ಕಾರ ಹೆಚ್ಚಿನ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಅನುದಾನದ ಕೊರತೆ ಕಾರಣದಿಂದ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ ಎಂದು ತಿಳಿಸಿದರು.

ಸಚಿವರ ಉತ್ತರವನ್ನು ವಿರೋಧಿಸಿದ ಜೆಡಿಎಸ್ ಶಾಸಕರು ಸಭಾಧ್ಯಕ್ಷರ ಪೀಠದ ಎದುರು ಧಾವಿಸಿ ಧರಣಿ ಆರಂಭಿಸಿದರು. ಧರಣಿ ಕೈಬಿಡುವಂತೆ ಸಭಾಧ್ಯಕ್ಷರು ಮಾಡಿದ ಮನವಿಗೆ ಜೆಡಿಎಸ್ ಸದಸ್ಯರು ಸಹಮತ ವ್ಯಕ್ತಪಡಿಸಲಿಲ್ಲ. ಬಳಿಕ ಸಭಾಧ್ಯಕ್ಷರು ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಿದರು.

ಕಲಾಪ ಮುಗಿದರೂ ಜೆಡಿಎಸ್ ಸದಸ್ಯರು ಧರಣಿ ಮುಂದುವರಿಸಿದರು. ಧರಣಿನಿರತರು ರಾತ್ರಿ ಉಳಿದರೆ ಊಟ, ಹಾಸಿಗೆ ವ್ಯವಸ್ಥೆ ಮಾಡುವಂತೆ ವಿಧಾನಸಭಾ ಸಚಿವಾಲಯದ ಅಧಿಕಾರಿಗಳಿಗೆ ಸಭಾಧ್ಯಕ್ಷರು ಸೂಚಿಸಿದರು. 8.15ರ ಸುಮಾರಿಗೆ ಬಸವರಾಜ ಬೊಮ್ಮಾಯಿ ಅವರೊಂದಿಗೆ ವಿಧಾನಸಭೆಗೆ ಬಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಜೆಡಿಎಸ್ ಸದಸ್ಯರ ಜತೆ ಮಾತುಕತೆ ನಡೆಸಿದರು. ಬಳಿಕ ಧರಣಿ ಅಂತ್ಯಗೊಂಡಿತು.

‘ತಡೆ ಹಿಡಿದಿರುವ ಕಾಮಗಾರಿಗಳಿಗೆ ಹಂತ ಹಂತವಾಗಿ ಒಪ್ಪಿಗೆ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಅವರ ಮೇಲೆ ವಿಶ್ವಾಸ ಇರಿಸಿ ಧರಣಿ ಅಂತ್ಯಗೊಳಿಸಲಾಗಿದೆ’ ಎಂದು ಜೆಡಿಎಸ್ ಸದಸ್ಯರು ತಿಳಿಸಿದರು.

‘ಹುಕ್ಕಾ ಪಾರ್ಲರ್ ಶೀಘ್ರ ಬಂದ್’

ಬೆಂಗಳೂರು: ‘ಹುಕ್ಕಾ ಪಾರ್ಲರ್‌ಗಳನ್ನು ಶೀಘ್ರದಲ್ಲೇ ಬಂದ್ ಮಾಡಲಾಗುವುದು. ಅಲ್ಲದೆ, ಡ್ರಗ್ಸ್ (ಮಾದಕವಸ್ತು) ಪಿಡುಗು ನಿಯಂತ್ರಿಸಲು ‘ಆ್ಯಂಟಿ ಡ್ರಗ್ ನೀತಿ’ ರೂಪಿಸಲಾಗುತ್ತಿದೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಮಹಾಂತೇಶ ಕವಟಗಿಮಠ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕೇಂದ್ರ ಸರ್ಕಾರದ ಎನ್‌ಡಿಪಿಎಸ್ (ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ) ಕಾಯ್ದೆಯಲ್ಲಿರುವ ನಿಯಮಗಳಿಗೆ ಬದಲಾವಣೆ ತಂದು ಜಾರಿಗೊಳಿಸಲು ಉದ್ದೇಶಿಸಲಾಗಿದೆ’ ಎಂದೂ ತಿಳಿಸಿದರು.

‘ಹುಕ್ಕಾ ಪಾರ್ಲರ್‌ಗಳಿಗೆ ಬಿಬಿಎಂಪಿ ಅನುಮತಿ ನೀಡುತ್ತಿದೆ. ಆದರೆ, ಹುಕ್ಕಾ ಪಾರ್ಲರ್ ನಿಷೇಧಿಸಲು ನಾವು ತೀರ್ಮಾನಿಸಿದ್ದೇವೆ. ಈ ಬಗ್ಗೆ ಬಿಬಿಎಂಪಿ ಆಯುಕ್ತರ ಜೊತೆ ಪೊಲೀಸ್ ಆಯುಕ್ತರು ಮಾತುಕತೆ ನಡೆಸಲಿದ್ದಾರೆ. ಪ್ರಭಾವಿಗಳು ಎಷ್ಟೇ ಒತ್ತಡ ಹಾಕಿದರೂ ಮಣಿಯುವುದಿಲ್ಲ’ ಎಂದರು.

‘ಡ್ರಗ್ಸ್ ಸಂಬಂಧಿಸಿದಂತೆ 2018ರಲ್ಲಿ 1,031, 2019ರಲ್ಲಿ 1,661, 2020ರಲ್ಲಿ 4,066, 2021ರ ಮಾರ್ಚ್ 10ರವರೆಗೆ 1,185 ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಿಗೆ ಸಂಬಂಧಿಸಿದಂತೆ 2018ರಲ್ಲಿ 1,452, 2019ರಲ್ಲಿ 2,295, 2020ರಲ್ಲಿ 5,479, 2021 ಮಾರ್ಚ್ 10ರವರೆಗೆ 1,340 ಆರೋಪಿಗಳನ್ನು ಬಂಧಿಸಲಾಗಿದೆ.

47 ನರ್ಸಿಂಗ್ ಕಾಲೇಜುಗಳಿಗೆ ಅನುಮತಿ; ಭ್ರಷ್ಟಾಚಾರ ಆರೋಪ

ಸದನ ಸಮಿತಿ ರಚನೆಗೆ ಜೆಡಿಎಸ್ ಪಟ್ಟು: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು 2020–21ನೇ ಸಾಲಿನಲ್ಲಿ 47 ನರ್ಸಿಂಗ್ ಕಾಲೇಜುಗಳು ಹಾಗೂ 45 ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಅನುಮತಿ ನೀಡಿದ್ದು, ಇದರಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಜೆಡಿಎಸ್ ಆರೋಪಿಸಿದೆ. ಈ ಕುರಿತ ತನಿಖೆಗೆ ಸದನ ಸಮಿತಿ ರಚಿಸಬೇಕು ಎಂದು ಪಕ್ಷದ ಸದಸ್ಯರು ವಿಧಾನ ಪರಿಷತ್ತಿನಲ್ಲಿ ಗುರುವಾರ ಪಟ್ಟು ಹಿಡಿದರು.

ಸದನ ಸಮಿತಿ ರಚನೆಗೆ ಸರ್ಕಾರ ಒಪ್ಪದ ಕಾರಣ ಜೆಡಿಎಸ್ ಸದಸ್ಯರು ಸಭಾಪತಿಯವರ ಪೀಠದ ಎದುರು ಧರಣಿ ನಡೆಸಿದರು. ಮನವೊಲಿಕೆ ಬಳಿಕವೂ ಸದಸ್ಯರು ಧರಣಿ ಹಿಂಪಡೆಯದ ಕಾರಣ ಸಭಾಪತಿ ಬಸವರಾಜ ಹೊರಟ್ಟಿ ಅವರು ಸದನವನ್ನು ಎರಡು ಬಾರಿ ಮುಂದೂಡಬೇಕಾಯಿತು.

’ಈ ಹೊಸ ಕಾಲೇಜುಗಳೂ ಸೇರಿ, ರಾಜ್ಯದಲ್ಲಿರುವ 650 ನರ್ಸಿಂಗ್ ಕಾಲೇಜುಗಳ ಹಾಗೂ 65 ವೈದ್ಯಕೀಯ ಕಾಲೇಜುಗಳ ಮೂಲಸೌಕರ್ಯ ಪರಿಶೀಲನೆಗೆ ನಾಲ್ಕು ಕಾರ್ಯಪಡೆಗಳನ್ನು ರಚಿಸಲಾಗುವುದು. ಈ ಉನ್ನತ ಮಟ್ಟದ ಸಮಿತಿಗಳು 3 ತಿಂಗಳ ಒಳಗೆ ವರದಿಯನ್ನು ನೀಡಲಿವೆ. ಸದನದಲ್ಲಿ ಮಂಡಿಸುವ ವರದಿ ಸದಸ್ಯರಿಗೆ ತೃಪ್ತಿ ತರದಿದ್ದರೆ ಮುಖ್ಯಮಂತ್ರಿ ಜೊತೆ ಸಮಾಲೋಚಿಸಿ ಸದನ ಸಮಿತಿ ರಚಿಸಲು ಸಿದ್ಧ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಭರವಸೆ ನೀಡಿದರು.

ಇದರಿಂದ ತೃಪ್ತರಾಗದ ಜೆಡಿಎಸ್‌ನ ಕೆ.ಟಿ.ಶ್ರೀಕಂಠೇಗೌಡ, ‘ಅಧಿಕಾರಿಗಳು ನಡೆಸುವ ತನಿಖೆಯಲ್ಲಿ ಭರವಸೆ ಇಲ್ಲ. ಭೌತಿಕವಾಗಿ ಕಾಲೇಜುಗಳೇ ಇಲ್ಲ. ಆದರೂ ವಿದ್ಯಾರ್ಥಿಗಳು ನರ್ಸಿಂಗ್ ಪ್ರಮಾಣಪತ್ರ ಪಡೆಯುವ ಸ್ಥಿತಿ ಇದೆ. ಇದು ರಾಜ್ಯದ ಜನರ ಜೀವದ ಪ್ರಶ್ನೆ. ಸದನ ಸಮಿತಿಯನ್ನೇ ರಚಿಸಬೇಕು’ ಎಂದು ಒತ್ತಾಯಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಗದ್ದಲ ನಿಲ್ಲದ ಕಾರಣ ಸಭಾಪತಿಯವರು ಸದನವನ್ನು ಶುಕ್ರವಾರಕ್ಕೆ ಮುಂದೂಡಿದರು.

ಮುಖ್ಯಾಂಶಗಳು

- ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ ಬಿಜೆಪಿ ಸದಸ್ಯ ರವಿಕುಮಾರ್
- 3 ತಿಂಗಳಲ್ಲಿ ತನಿಖಾ ವರದಿ ನೀಡುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಭರವಸೆ

ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ ಆಡಳಿತ ಪಕ್ಷದ ಸದಸ್ಯ: ಸರ್ಕಾರ ಇಕ್ಕಟ್ಟಿಗೆ ಸಿಲುಕುವಂತೆ ಮಾಡಿದ್ದು ಆಡಳಿತ ಪಕ್ಷದ ಸದಸ್ಯ ಎನ್. ರವಿಕುಮಾರ್. ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡುವಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ ಅವರು ಈ ಕುರಿತ ಸಮಗ್ರ ತನಿಖೆಗೆ ಒತ್ತಾಯಿಸಿ ನಿಯಮ 72ರ ಅಡಿ ಸಚಿವ ಸುಧಾಕರ್ ಗಮನ ಸೆಳೆದರು.

ಇದಕ್ಕುತ್ತರಿಸಿದ ಸುಧಾಕರ್, ‘ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು 2019ರ ನ. 21ರಂದು ಅರ್ಜಿ ಆಹ್ವಾನಿಸಿದಾಗ ಬಿಎಸ್ಸಿ (ನರ್ಸಿಂಗ್) ಕಾಲೇಜು ಸ್ಥಾಪನೆಗೆ 101 ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜು ಸ್ಥಾಪನೆಗೆ 70 ಸಂಸ್ಥೆಗಳು ಅರ್ಜಿ ಸಲ್ಲಿಸಿದ್ದವು. ಭಾರತೀಯ ಶುಶ್ರೂಷಾ ಪರಿಷತ್ತಿನ ಮಾರ್ಗಸೂಚಿಗಳ ಅನ್ವಯ ಈ ಅರ್ಜಿಗಳನ್ನು ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರ ಉಪ ಸಮಿತಿ ಪರಿಶೀಲಿಸಿದೆ. ಸೆನೆಟ್, ಅಕಾಡೆಮಿಕ್ ಕೌನ್ಸಿಲ್ ಹಾಗೂ ವಿಷಯ ತಜ್ಞರ ತಂಡ ಈ ಸಂಸ್ಥೆಗಳಿಗೆ ಖುದ್ದಾಗಿ ತಪಾಸಣೆ ನಡೆಸಿದೆ. 60 ನರ್ಸಿಂಗ್ ಕಾಲೇಜು ಹಾಗೂ 52 ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳ ಅರ್ಜಿಗಳನ್ನು ಶಿಫಾರಸು ಮಾಡಿದೆ’ ಎಂದು ಮಾಹಿತಿ ನೀಡಿದರು.

‘ಈ ಶಿಫಾರಸುಗಳನ್ನು ವಿಶ್ವವಿದ್ಯಾಲಯದ ಡೀನ್ ಪರಿಶೀಲಿಸಿದ್ದು, ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲೂ ಇವುಗಳನ್ನು ಮಂಡಿಸಲಾಗಿದೆ. ಮೂವರು ಸಿಂಡಿಕೇಟ್ ಸದಸ್ಯರ ತಂಡ ದಾಖಲಾತಿಗಳನ್ನು ಪರಿಶೀಲಿಸಿ ಅನುಮೋದನೆಗೆ ಶಿಫಾರಸು ಮಾಡಿದೆ. ಸಿಂಡಿಕೇಟ್ ಸದಸ್ಯರೂ ಕಾಲೇಜುಗಳನ್ನು ಖುದ್ದಾಗಿ ತಪಾಸಣೆ ನಡೆಸಿದ್ದಾರೆ. ಸಿಂಡಿಕೇಟ್ ಸಭೆಯ ಅನುಮೋದನೆಯ ಬಳಿಕವೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇಲಾಖೆಯ ಪ್ರಧಾನ ಕಾರ್ಯದರ್ಶಿ ನೇತೃತ್ವದ ಉನ್ನತಾಧಿಕಾರ ಸಮಿತಿ ಎಲ್ಲ ದಾಖಲೆಗಳನ್ನು ಪರಿಶೀಲಿಸಿಯೇ ಈ ಕಾಲೇಜುಗಳಿಗೆ ಅನುಮತಿ ನೀಡಲು ಶಿಫಾರಸು ಮಾಡಿದೆ’ ಎಂದು ಸಮರ್ಥಿಸಿಕೊಂಡರು.

ಈ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ರವಿಕುಮಾರ್, ‘ಕೇರಳದಿಂದ ಬರುವ ವಿದ್ಯಾರ್ಥಿಗಳು ಮನೆಯಲ್ಲೇ ಕುಳಿತು ಪರೀಕ್ಷೆ ಬರೆಯುವಷ್ಟರ ಮಟ್ಟಿಗೆ ಪರಿಸ್ಥಿತಿ ಹದಗೆಟ್ಟಿದೆ. ಕುಂದಾಪುರದಲ್ಲಿ ಒಂದೇ ಕಟ್ಟಡದಲ್ಲಿ ಎರಡು ಕಾಲೇಜುಗಳನ್ನು ನಡೆಸಲು ಅನುಮತಿ ನೀಡಲಾಗಿದೆ. ಈ ರೀತಿ ನರ್ಸಿಂಗ್ ಕಾಲೇಜುಗಳನ್ನು ನಡೆಸಿದರೆ ಭವಿಷ್ಯದಲ್ಲಿ ರೋಗಿಗಳು ಭಾರಿ ತೊಂದರೆ ಎದುರಿಸಬೇಕಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದರು. ಅಕ್ರಮದ ತನಿಖೆಗೆ ಆಡಳಿತ ಪಕ್ಷದ ತೇಜಸ್ವಿನಿ ಗೌಡ ಅವರೂ ಒತ್ತಾಯಿಸಿದರು.

ಇದಕ್ಕೆ ದನಿಗೂಡಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ, ಶ್ರೀಕಂಠೇಗೌಡ, ಅಪ್ಪಾಜಿ ಗೌಡ ನರ್ಸಿಂಗ್ ಕಾಲೇಜುಗಳ ವಸ್ತುಸ್ಥಿತಿ ಬಿಚ್ಚಿಟ್ಟರು.

ಚರ್ಚೆ ಬಹಿಷ್ಕರಿಸಿದ ಕಾಂಗ್ರೆಸ್

ಸಚಿವ ಸುಧಾಕರ್ ಅವರು ಉತ್ತರ ನೀಡಿದ್ದರಿಂದ ಕಾಂಗ್ರೆಸ್ ಸದಸ್ಯರು ನರ್ಸಿಂಗ್ ಕಾಲೇಜುಗಳ ಕುರಿತ ಚರ್ಚೆಯಿಂದ ದೂರ ಉಳಿದರು. ‘ನೈತಿಕ ಕಾರಣಕ್ಕೆ ನಾವು ಈ ಕುರಿತ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ. ಆದರೆ ಜೆಡಿಎಸ್ ಹೋರಾಟಕ್ಕೆ ನಮ್ಮ ಬೆಂಬಲ ಇದೆ’ ಎಂದು ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ ಹಾಗೂ ಸದಸ್ಯ ಬಿ.ಕೆ.ಹರಿಪ್ರಸಾದ್ ತಿಳಿಸಿದರು.


‘ಅಣುಬಾಂಬ್‌ಗಿಂತ ಮನುಸ್ಮೃತಿ ಅಪಾಯಕಾರಿ’

‘ಹಸು ಬಿಡಿ, ಹಸಿವಿನತ್ತ ನೋಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ಜಾನುವಾರು ಹತ್ಯೆ ನಿಷೇಧ ಕಾಯ್ದೆ ತಂದ ಮೇಲೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಗೋವನ್ನು ಪೂಜಿಸುವುದು ತಪ್ಪಲ್ಲ. ಆದರೆ, ಹಸುವಿನ ಹೆಸರಿನಲ್ಲಿ ರಾಜಕಾರಣ ಮಾಡುವುದಕ್ಕಿಂತ ಹಸಿವು ಮುಕ್ತ ಮಾಡುವುದಕ್ಕೆ ಪೂರಕವಾದ ರಾಜಕೀಯ ಮಾಡೋಣ’ ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಸಲಹೆ ನೀಡಿದರು.

ವಿಧಾನಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ‘ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣೆ ಕಾಯ್ದೆ ಜಾರಿಗೆ ಬಂದ ಬಳಿಕ ಹೈನುಗಾರಿಕೆ ವೃತ್ತಿಯಲ್ಲಿರುವವರ ಕಷ್ಟ ಹೆಚ್ಚಾಗಿದೆ. ಗಂಡು ಕರುಗಳನ್ನು ಸಾಕುವವರು ಯಾರು? ನೀವು ಬೇಕಾದರೆ ಪೂಜೆ ಮಾಡ್ಕೊಳ್ಳಿ? ಪ್ರದರ್ಶನಕ್ಕಾಗಿ ಸಾಕುವುದಕ್ಕೆ ಆಗುತ್ತಾ? ರೈತರು ಎಲ್ಲಿಂದ ಹಣ ತರಬೇಕು’ ಎಂದು ಪ್ರಶ್ನಿಸಿದರು.



ರಮೇಶ್ ಕುಮಾರ್

‘ಎಲ್ಲರೂ ಸುಮ್ಮನೆ ಗೋವಿನ ಬಗ್ಗೆ ಮಾತನಾಡುತ್ತಾರೆ. ದನ ಸತ್ತರೆ ಎತ್ತುವುದಕ್ಕೆ ವೆಂಕಟರಾಯರು, ಶ್ರೀಪಾದಯ್ಯ ಬರ್ತಾರಾ? ದಲಿತರ ಕೇರಿಯವರೇ ಬರೋದಲ್ಲವೆ’ ಎಂದು ಕೇಳಿದರು.

ಉತ್ತಮ ತಳಿಯ ಹಸುಗಳು ಮಾತ್ರವಲ್ಲ, ಹಂದಿ, ಕುರಿಗಳನ್ನೂ ಸಾಕುವುದನ್ನು ಉತ್ತೇಜಿಸಬೇಕು. ತಳಿ ಅಭಿವೃದ್ಧಿಗಾಗಿ ಡಾರ್ಪರ್ ತಳಿಯ ಗಂಡು ಕುರಿಮರಿಗಳನ್ನು ವಿತರಿಸುವ ಯೋಜನೆಯನ್ನು ಸರ್ಕಾರ ಆರಂಭಿಸಬೇಕು. ಯಾಂತ್ರೀಕೃತ ಕಸಾಯಿಖಾನೆಗಳನ್ನು ಆರಂಭಿಸಿ ಎಲ್ಲ ಬಗೆಯ ಮಾಂಸದ ಉತ್ಪಾದನೆ, ಮಾರಾಟ, ರಫ್ತು ಉತ್ತೇಜಿಸಬೇಕು ಎಂದು ಸಲಹೆ ಮಾಡಿದರು.

ಎಲ್ಲರಿಗೂ ಸಮಾನ ಶಿಕ್ಷಣ ನೀಡುವ ವಿಚಾರ ಇನ್ನೂ ಜಾರಿಗೆ ಬಂದಿಲ್ಲ. ಮನುಸಂಸ್ಕೃತಿಯನ್ನಲ್ಲ, ಜನ ಸಂಸ್ಕೃತಿಯನ್ನು ಆರಾಧಿಸಬೇಕು. ಹಿರೋಶಿಮಾ, ನಾಗಸಾಕಿ ನಗರಗಳ ಮೇಲೆ ಹಾಕಿದ್ದ ಅಣು ಬಾಂಬ್‌ಗಳಿಗಿಂತಲೂ ಮನುಸ್ಮೃತಿ ಅಪಾಯಕಾರಿಯಾದದ್ದು ಎಂದರು.

ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿಗೆ ಆಗ್ರಹ

ಸರ್ಕಾರಿ ಉದ್ಯೋಗಗಳ ಸಂಖ್ಯೆ ಕುಸಿಯುತ್ತಿದೆ. ಆದ್ದರಿಂದ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೊಳಿಸಬೇಕು ಎಂದು ಕೊಳ್ಳೇಗಾಲ ಕ್ಷೇತ್ರದ ಶಾಸಕ ಎನ್. ಮಹೇಶ್ ಆಗ್ರಹಿಸಿದರು.

ಜೆಡಿಎಸ್‌ನ ಎಚ್.ಕೆ. ಕುಮಾರಸ್ವಾಮಿ ಮಾತನಾಡಿ, ‘ಎಲ್ಲ ಜಾತಿಗಳಲ್ಲೂ ಕೆಳ ಸ್ತರದಲ್ಲಿರುವ ಜನರಿಗೆ ಮೀಸಲಾತಿಯ ಲಾಭ ದೊರೆಯಬೇಕು. ಶೋಷಣೆ ಮತ್ತು ಆರ್ಥಿಕ ಅಸಮಾನತೆಯನ್ನು ಆಧರಿಸಿ ಮೀಸಲಾತಿ ನೀಡಬೇಕು’ ಎಂದರು.

ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಮೇಲ್ವರ್ಗದ ಬಡವರಿಗೂ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಈಗ ಮೀಸಲಾತಿಯಿಂದ ಹೊರಗುಳಿದ ಜಾತಿಗಳೇ ಇಲ್ಲ. ಸಾರ್ವಜನಿಕ ಉದ್ದಿಮೆಗಳಿಂದ ಸರ್ಕಾರದ ಷೇರು ಹಿಂಪಡೆದರೂ ಮೀಸಲಾತಿ ವ್ಯವಸ್ಥೆ ಉಳಿಯುವಂತೆ ಮಾಡಬೇಕು’ ಎಂದು ಹೇಳಿದರು.

ಹೊಸ ವಾಹನ ಖರೀದಿಗೆ ರಿಯಾಯಿತಿ • ಜಿಎಸ್‌ಟಿ ಸಂಗ್ರಹ ಮೊತ್ತ ₹ 40,000 ಕೋಟಿ ಮೀರುವ ಅಂದಾಜು


ಗುಜರಿ ನೀತಿ: ವಾಹನ ವಹಿವಾಟು ವೃದ್ಧಿ

ನವದೆಹಲಿ (ಪಿಟಿಐ): 'ವಾಹನಗಳ ಗುಜರಿ ನೀತಿ'ಯಡಿ ಹಳೆಯ ವಾಹನಗಳನ್ನು ಕೈಬಿಟ್ಟು ಹೊಸ ವಾಹನ ಖರೀದಿಸಲು ಮುಂದಾದಲ್ಲಿ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಇದು, ಗ್ರಾಹಕರು –ಮಾರಾಟಗಾರರು ಇಬ್ಬರಿಗೂ ಅನುಕೂಲಕರವಾದ ನೀತಿಯಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಯಲ್ಲಿ ತಿಳಿಸಿದರು.

ಸ್ವಯಂಪ್ರೇರಿತವಾಗಿ ಹಳೆಯ ವಾಹನಗಳನ್ನು ಕೈಬಿಡಲು ಉತ್ತೇಜನ ನೀಡುವ ನೀತಿಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. 15 ವರ್ಷ ಹಳೆಯ ವಾಣಿಜ್ಯ ಬಳಕೆಯ ವಾಹನಗಳು, 20 ವರ್ಷ ಹಳೆಯದಾದ ವೈಯಕ್ತಿಕ ಬಳಕೆ ವಾಹನಗಳ ಸುಸ್ಥಿತಿ ದೃಢಪಡಿಸಲು ಪರೀಕ್ಷೆ ಕಡ್ಡಾಯವಾಗಿದೆ ಎಂದು ಹೇಳಿದರು.

ಹಳೆಯ ವಾಹನ ಕೈಬಿಟ್ಟು ಹೊಸ ವಾಹನ ಖರೀದಿಸುವ ಗ್ರಾಹಕರಿಗೆ ಶೇ 5ರಷ್ಟು ರಿಯಾಯಿತಿ ನೀಡಲು ವಾಹನ ತಯಾರಕರಿಗೆ ಸೂಚಿಸಲಾಗಿದೆ. ಈ ನೀತಿ ಜಾರಿಯಿಂದಾಗಿ ಜಿಎಸ್‌ಟಿ ಸಂಗ್ರಹ ಮೊತ್ತ ₹ 40,000 ಕೋಟಿ ಮೀರುವ ಅಂದಾಜು ಇದೆ. ಆತ್ಮನಿರ್ಭರ ಭಾರತ ಅಭಿಯಾನಕ್ಕೂ ಈ ನೀತಿಯು ಚೇತರಿಕೆ ನೀಡಲಿದೆ ಎಂದು ತಿಳಿಸಿದರು.

ಸುಸ್ಥಿತಿಯಲ್ಲಿಲ್ಲದ ವಾಹನಗಳನ್ನು ನೋಂದಾಯಿತ ಗುಜರಿಗೆ ಹಾಕಿ, ಪ್ರಮಾಣಪತ್ರ ಪಡೆಯಬಹುದು. ಹೊಸ ವಾಹನಗಳ ಎಕ್ಸ್ ಷೋ ರೂಂ ದರದಲ್ಲಿ ಶೇ 4 ರಿಂದ 6ರಷ್ಟು ರಿಯಾಯಿತಿ



ನಿತಿನ್ ಗಡ್ಕರಿ

ಸಿಗಲಿದೆ. ಹೆಚ್ಚುವರಿಯಾಗಿ ನೋಂದಣಿ ಶುಲ್ಕದಿಂದಲೂ ರಿಯಾಯಿತಿ ನೀಡಬಹುದಾಗಿದೆ ಎಂದು ತಿಳಿಸಿದರು.

ನೀತಿ ಜಾರಿಗೆ ಪೂರಕವಾಗಿ ದೇಶದಾದ್ಯಂತ ನೋಂದಾಯಿತ ಗುಜರಿ ಕೇಂದ್ರಗಳನ್ನು ಸ್ಥಾಪಿಸಲು ಸಚಿವಾಲಯ ಒತ್ತು ನೀಡುತ್ತಿದೆ. ಸಾರ್ವಜನಿಕರು, ಖಾಸಗಿ ಭಾಗಿದಾರರಿಗೂ ಕೇಂದ್ರ ಸ್ಥಾಪನೆಗೆ ಉತ್ತೇಜನ ನೀಡಲಾಗುವುದು. ಗುಜರಾತ್‌ನ ಅಲಂಗ್ ಸೇರಿದಂತೆ ದೇಶದ ವಿವಿಧೆಡೆ ಸಮಗ್ರ ಸೌಲಭ್ಯದ ಕೇಂದ್ರ ಸ್ಥಾಪಿಸಲು ಚಿಂತನೆ ನಡೆದಿದೆ. ಇಲ್ಲಿ ವಿವಿಧ ತಂತ್ರಜ್ಞಾನ ಬಳಸಿ ಸುಸ್ಥಿತಿಯಲ್ಲಿ ಇಲ್ಲದ ವಾಹನಗಳನ್ನು ನಿರುಪಯೋಗಗೊಳಿಸಲಾಗುವುದು ಎಂದು ವಿವರಿಸಿದರು.

ಏಕಗವಾಕ್ಷಿ ವ್ಯವಸ್ಥೆಯಡಿ ಈ ಉದ್ದೇಶಕ್ಕಾಗಿ ವಾಹನಗಳ ನೋಂದಣಿ ಮಾಡಬಹುದಾಗಿದೆ. ಜಾರಿಯಲ್ಲಿ ಇರುವ ಎಲ್ಲ ಕಾನೂನುಗಳು, ಪರಿಸರ ಮತ್ತು ವಾಯುಮಾಲಿನ್ಯ ಸಂಬಂಧಿತ ನಿಯಮಗಳಿಗೆ ಬದ್ಧರಾಗಿರಬೇಕಾಗುತ್ತದೆ ಎಂದು ತಿಳಿಸಿದರು.

ಜೊತೆಗೆ ಅಗತ್ಯವಿರುವಷ್ಟು ವಾಹನಗಳ ನಿಲುಗಡೆ ಸೌಲಭ್ಯ, ನೀರು, ವಾಯು ಮತ್ತು ಶಬ್ದ ಮಾಲಿನ್ಯ ನಿವಾರಕ ಪರಿಕರಗಳು, ತ್ಯಾಜ್ಯ ವಿಲೇವಾರಿಗೆ ಅಗತ್ಯ ಸೌಲಭ್ಯಗಳನ್ನು ಒಳಗೊಂಡಿರಬೇಕು.

ಅಂತೆಯೇ, ಪಿಪಿಪಿ ಮಾದರಿಯಡಿ ರಾಜ್ಯ ಸರ್ಕಾರಗಳು, ಖಾಸಗಿ ವಲಯ ಮತ್ತು ವಾಹನ ಉತ್ಪಾದಕ ಕಂಪನಿಗಳ ಸಹಯೋಗದಲ್ಲಿ ಸಚಿವಾಲಯವು ಸ್ವಯಂಚಾಲಿತ ಫಿಟ್‌ನೆಸ್ ಸೆಂಟರ್‌ಗಳನ್ನು ಸ್ಥಾಪಿಸುವ ಚಿಂತನೆಯನ್ನು ಹೊಂದಿದೆ ಎಂದು ವಿವರಿಸಿದರು.

ಹಳೆಯ ವಾಹನಗಳನ್ನು ಕೈಬಿಡುವ ನೀತಿಯು ಭಾರತೀಯ ಆಟೊಮೊಬೈಲ್ ಉದ್ಯಮಕ್ಕೆ ಶೇ 30ರಷ್ಟು ಚೇತರಿಕೆ ನೀಡಲಿದ್ದು, ಬರುವ ವರ್ಷಗಳಲ್ಲಿ ವಹಿವಾಟು ಮೊತ್ತವನ್ನು ₹ 10 ಲಕ್ಷ ಕೋಟಿವರೆಗೂ ಹೆಚ್ಚಿಸುವ ಅಂದಾಜು ಇದೆ. ಸದ್ಯ, ಈ ಉದ್ಯಮದ ವಾರ್ಷಿಕ ವಹಿವಾಟು ₹ 4.5 ಲಕ್ಷ ಕೋಟಿಗಳಾಗಿದೆ ಎಂದು ಗಡ್ಕರಿ ತಿಳಿಸಿದರು.

ವಾಹನಗಳ ಬೇಡಿಕೆಯೂ ಹೆಚ್ಚುವ ಕಾರಣ ಆದಾಯವೂ ಏರಲಿದೆ. ಆರಂಭಿಕವಾಗಿ ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಸುಮಾರು 1 ಕೋಟಿ ವಾಹನಗಳನ್ನು ಬಳಕೆಯಿಂದ ಕೈಬಿಡುವ ಸಾಧ್ಯತೆ ಇದೆ. ಇವುಗಳಲ್ಲಿ 51 ಲಕ್ಷದಷ್ಟು 20 ವರ್ಷ ಹಳೆಯದಾದ ಹಗುರ ಮೋಟಾರು ವಾಹನಗಳಾಗಿದ್ದರೆ, 34 ಲಕ್ಷದಷ್ಟು 15 ವರ್ಷ ಹಳೆಯದಾದ ಭಾರಿ ವಾಹನಗಳಾಗಿವೆ. ಅಲ್ಲದೆ, ಸದ್ಯ ಸುಸ್ಥಿತಿ ಪ್ರಮಾಣಪತ್ರ ಇರುವ 15 ವರ್ಷ ಮೀರಿದ ಮಧ್ಯಮ ವರ್ಗದ ವಾಹನಗಳು ಸೇರುವ ನಿರೀಕ್ಷೆಯಿದೆ ಎಂದರು.

'ಟೋಲ್ ಸಂಗ್ರಹ: ವರ್ಷದೊಳಗೆ ಜಿಪಿಎಸ್ ಆಧರಿತ ವ್ಯವಸ್ಥೆ'

ನವದೆಹಲಿ (ಪಿಟಿಐ): 'ಜಿಪಿಎಸ್ ಆಧರಿಸಿ ಟೋಲ್ ಸಂಗ್ರಹಿಸುವ ವ್ಯವಸ್ಥೆ ಒಂದು ವರ್ಷದಲ್ಲಿ ಜಾರಿಗೆ ಬರಲಿದ್ದು, ಹಾಲಿ ಇರುವ ಟೋಲ್ ಬೂತ್‌ಗಳನ್ನು ತೆಗೆಯಲಾಗುವುದು' ಎಂದು ಭೂ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಗುರುವಾರ ಲೋಕಸಭೆಯಲ್ಲಿ ತಿಳಿಸಿದರು.

ಸದ್ಯ, ಶೇ 93ರಷ್ಟು ವಾಹನಗಳು ಫಾಸ್ಟ್ಯಾಗ್ ವ್ಯಾಪ್ತಿಗೆ ಒಳಪಟ್ಟಿವೆ. ಒಳಪಡದ ಶೇ 7ರಷ್ಟು ವಾಹನಗಳಿಗೆ ಅನ್ವಯಿಸಿ ದುಪ್ಪಟ್ಟು ಟೋಲ್ ಅನ್ನು ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು.

ಒಂದು ವರ್ಷದಲ್ಲಿ ದೇಶದಾದ್ಯಂತ ಇರುವ ಟೋಲ್ ಬೂತ್‌ಗಳನ್ನು ತೆಗೆಯಲಾಗುತ್ತದೆ ಎಂದು ಈ ಸದನಕ್ಕೆ ಭರವಸೆ ನೀಡುತ್ತಿದ್ದೇನೆ. ಅಂದರೆ, ಜಿಪಿಎಸ್ ಆಧರಿಸಿ ಟೋಲ್ ಸಂಗ್ರಹಿಸುವ ಕ್ರಮ ಜಾರಿಗೆ ಬರಲಿದೆ. ವಾಹನಗಳ ಜಿಪಿಎಸ್ ಚಿತ್ರ ಆಧರಿಸಿ ಹಣ ಸಂಗ್ರಹಿಸಲಾಗುತ್ತದೆ ಎಂದು ವಿವರಿಸಿದರು.

ಫಾಸ್ಟ್ಯಾಗ್ ಬಳಸಿ ಟೋಲ್ ಪಾವತಿಸದ ವಾಹನಗಳ ಬಗ್ಗೆ ತನಿಖೆ ನಡೆಸಲು ಪೊಲೀಸರಿಗೆ ಸೂಚಿಸಲಾಗಿದೆ. ಫಾಸ್ಟ್ಯಾಗ್ ಬಳಸದೇ ಟೋಲ್ ವಂಚಿಸುತ್ತಿರುವ ಪ್ರಕರಣಗಳು ಇವೆ. ಹೊಸ ವಾಹನಗಳಿಗೆ ಮಾರಾಟದ ವೇಳೆ ಫಾಸ್ಟ್ಯಾಗ್ ಅಳವಡಿಸಲಾಗುತ್ತದೆ. ಹಳೆಯ ವಾಹನಗಳಿಗೆ ಸರ್ಕಾರವೇ ಉಚಿತವಾಗಿ ಒದಗಿಸುತ್ತಿದೆ ಎಂದು ತಿಳಿಸಿದರು.

ಫಾಸ್ಟ್ಯಾಗ್ ಮೂಲಕ ವಿದ್ಯುನ್ಮಾನ ವ್ಯವಸ್ಥೆಯಡಿ ಟೋಲ್ ಸಂಗ್ರಹಿಸುವ ಕ್ರಮ 2016ರಲ್ಲಿ ಜಾರಿಗೆ ಬಂದಿತ್ತು. ಫಾಸ್ಟ್ಯಾಗ್ ಕಡ್ಡಾಯ ಮಾಡಿದ್ದು, ಈ ವರ್ಷದ ಫೆಬ್ರುವರಿ 16ರಿಂದ ಫಾಸ್ಟ್ಯಾಗ್ ಇಲ್ಲದ ವಾಹನಗಳಿಗೆ ಅನ್ವಯಿಸಿ ದುಪ್ಪಟ್ಟು ಟೋಲ್ ಪಾವತಿಸುವುದು ಕಡ್ಡಾಯವಾಗಿದೆ.

ಇಂಟರ್‌ನೆಟ್ ಮೇಲೆ ಏಕಚಕ್ರಾಧಿಪತ್ಯವನ್ನು ಸಹಿಸುವುದಿಲ್ಲ

ಸಾಮಾಜಿಕ ಮಾಧ್ಯಮಗಳ ದುರುಪಯೋಗಕ್ಕೆ ಅವಕಾಶ ನೀಡುವುದಿಲ್ಲ: ರವಿಶಂಕರ್ ಪ್ರಸಾದ್

ನವದೆಹಲಿ: 'ಇಂಟರ್‌ನೆಟ್ ಮೇಲೆ ಕೆಲವೇ ಕಂಪನಿಗಳು ಏಕ ಚಕ್ರಾಧಿಪತ್ಯ ಸಾಧಿಸುವ ಪ್ರಯತ್ನವನ್ನು ಸಹಿಸುವುದಿಲ್ಲ' ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಗುರುವಾರ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಟ್ವಿಟರ್ ಖಾತೆಗಳನ್ನು ನಿಷೇಧಿಸುವ ವಿಷಯದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಯಾವುದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ಅಥವಾ ವಿರೋಧ ವ್ಯಕ್ತಪಡಿಸುವುದನ್ನು ಸರ್ಕಾರ ಸ್ವಾಗತಿಸುತ್ತದೆ. ಆದರೆ, ಸಾಮಾಜಿಕ ಮಾಧ್ಯಮಗಳ ದುರುಪಯೋಗಕ್ಕೆ ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

'ಟೂಲ್ ಕಿಟ್' ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಸರ ಕಾರ್ಯಕರ್ತೆ ದಿಶಾ ರವಿ ಬಂಧನ ಪ್ರಸ್ತಾಪಿಸಿ ಕಾಂಗ್ರೆಸ್‌ನ ಜಿ.ಸಿ. ಚಂದ್ರಶೇಖರ್ ಅವರು ಕೇಳಿದ್ದ ಪ್ರಶ್ನೆಗೆ ಪ್ರತಿಕ್ರಿಯಿಸಿದ



ರವಿಶಂಕರ ಪ್ರಸಾದ್

ಅವರು, 'ಭಾರತದಲ್ಲಿ ಕೋಟ್ಯಾಂತರ ಮಂದಿ ಸಾಮಾಜಿಕ ಮಾಧ್ಯಮಗಳನ್ನು ಬಳಸುತ್ತಿದ್ದಾರೆ. ಭಾರತದಲ್ಲಿ ವಾಟ್ಸ್‌ಆ್ಯಪ್, ಟ್ವಿಟರ್, ಫೇಸ್‌ಬುಕ್, ಲಿಂಕ್‌ಡಿನ್‌ಗೆ ಮುಕ್ತವಾಗಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಭಾರತದ ಸಾಮಾನ್ಯ ಜನರನ್ನು ಈ ಕಂಪನಿಗಳು ಸಬಲೀಕರಣಗೊಳಿಸಿವೆ' ಎಂದು ಹೇಳಿದರು.

'ಸಾಮಾಜಿಕ ಮಾಧ್ಯಮಗಳ ದುರುಪಯೋಗ ಮತ್ತು ಇವುಗಳ ಮೂಲಕ ನಿಂದನೆ ಮಾಡುವುದು ಚರ್ಚೆಯ ವಿಷಯವಾಗಿದೆ. ಇಂಟರ್‌ನೆಟ್ ಮಾನವನ ಅದ್ಭುತ ಅವಿಷ್ಕಾರ. ಆದರೆ, ಇಂಟರ್‌ನೆಟ್ ಮೇಲೆ ಕೆಲವರು ಮಾತ್ರ ಏಕಸ್ವಾಮ್ಯ ಹೊಂದಬಾರದು. ಕೆಲವೇ ಕಂಪನಿಗಳು ಇಂಟರ್‌ನೆಟ್ ಮೇಲೆ ಸಾಮ್ರಾಜ್ಯಶಾಹಿ ಸ್ಥಾಪಿಸುವುದನ್ನು ಸಹಿಸುವುದಿಲ್ಲ' ಎಂದು ಹೇಳಿದರು.

'ದಿಶಾ ರವಿ ಪ್ರಕರಣ ನ್ಯಾಯಾಂಗದ ಪರಿಶೀಲನೆಯಲ್ಲಿದೆ. ಆದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ನಿಂದಿಸಿ ಭಾರತದ ಗೌರವ, ಮಾನಕ್ಕೆ ಧಕ್ಕೆ ತರಲು ಅವಕಾಶ ನೀಡಬಹುದೇ ಎನ್ನುವ ಬಗ್ಗೆ ಸದನವು ನಿರ್ಧರಿಸಬೇಕು ಎಂದು ಹೇಳಿದರು.

ಆರೋಗ್ಯ ಸಿಬ್ಬಂದಿಗೆ ಸವಾಲಾದ ಇಲಾಖೆ ಗುರಿ

ಪತ್ತೆಯಾಗದ ಸೋಂಕಿತರ ಸಂಪರ್ಕಿತರು

• ವರುಣ್ ಹೆಗಡೆ

ಬೆಂಗಳೂರು: ಪ್ರತಿಯೊಬ್ಬ ಕೋವಿಡ್ ಸೋಂಕಿತ ವ್ಯಕ್ತಿಯ ಜತೆ 20 ಮಂದಿ ನೇರ ಮತ್ತು ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲು ಸಾಧ್ಯವಾಗದೇ ಆರೋಗ್ಯ ಇಲಾಖೆ ಇಕ್ಕಟ್ಟಿಗೆ ಸಿಲುಕಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿ 20 ಮಂದಿ ನೇರ ಮತ್ತು ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡುವ ಗುರಿಯನ್ನು ನಿಗದಿ ಮಾಡಿತ್ತು. ಆದರೆ, ಆರೋಗ್ಯ ಸಿಬ್ಬಂದಿಗೆ ಸೋಂಕಿತರ ಪ್ರಯಾಣದ ಇತಿಹಾಸ ಹಾಗೂ ಸಂಪರ್ಕದ ಜಾಡನ್ನು ಭೇದಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಸದ್ಯ ಪ್ರತಿ ಕೋವಿಡ್ ಪೀಡಿತ ವ್ಯಕ್ತಿಗೆ ಸರಾಸರಿ 4.5 ಮಂದಿ ಸಂಪರ್ಕಿತರನ್ನು ಮಾತ್ರ ಪತ್ತೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದ ಕಾರಣ ಎರಡನೇ ಅಲೆಯ ಮುನ್ಸೂಚನೆ ನೀಡಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ಸೋಂಕಿತರ ಸಂಪರ್ಕ ಪತ್ತೆ ಹಾಗೂ ಪರೀಕ್ಷೆಯನ್ನು ಪರಿಣಾಮಕಾರಿಯಾಗಿ ನಡೆಸಬೇಕು ಎಂದು ಸರ್ಕಾರಕ್ಕೆ ಸೂಚಿಸಿದೆ.

ರಾಜ್ಯದಲ್ಲಿ ವರದಿಯಾಗಿರುವ ಪ್ರಕರಣಗಳಲ್ಲಿ ಶೇ 95.9 ರಷ್ಟು ಸೋಂಕಿತರಿಗೆ ಲಕ್ಷಣಗಳು ಬಹಿರಂಗವಾಗಿ ಕಾಣಿಸಿಕೊಂಡಿಲ್ಲ. ಇನ್ನೊಂದೆಡೆ ಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಆಸ್ಪತ್ರೆಗಳಿಗೆ ತೆರಳಿ, ಪರೀಕ್ಷೆ ಮಾಡಿಸಿಕೊಳ್ಳುವವರ ಸಂಖ್ಯೆಯೂ ಕೂಡ ಕಡಿಮೆಯಾಗಿದೆ. ಇದರಿಂದಾಗಿ ಸೋಂಕಿತರ ಸಂಪರ್ಕಿತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆ ಮಾಡಿ, ಅವರನ್ನು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆಗೆ ಹಿನ್ನಡೆಯಾಗಿದೆ.

ರಾಜ್ಯದಲ್ಲಿ ಮೊದಲ ಕೋವಿಡ್ ಪ್ರಕರಣ ವರದಿಯಾದ ಬಳಿಕ ಸೋಂಕಿತರ ನೇರ ಹಾಗೂ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಿ, ಅವರನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತಿತ್ತು. ಸೋಂಕಿತರ ಸಂಖ್ಯೆ ಏರಿಕೆ ಕಾಣುತ್ತಿದ್ದಂತೆ ಸಂಪರ್ಕ ಪತ್ತೆ, ಸಾಂಸ್ಥಿಕ ಕ್ವಾರಂಟೈನ್, ನೇರ ಮತ್ತು ಪರೋಕ್ಷ ಸಂಪರ್ಕಿತರಿಗೆ ಕೋವಿಡ್ ಪರೀಕ್ಷೆ ನಡೆಸುವ ಪ್ರಕ್ರಿಯೆಯನ್ನು ಕೈಬಿಡಲಾಗಿತ್ತು. ಇದರಿಂದಾಗಿ ರಾಜ್ಯದ ವಿವಿಧೆಡೆ ನಡೆಸಿದ ರ‍್ಯಾಂಡಮ್ ಪರೀಕ್ಷೆಯಲ್ಲಿ ರೋಗಿ ಜತೆ ಪರೋಕ್ಷ ಸಂಪರ್ಕ ಹೊಂದಿದವರೂ ಸೋಂಕಿತರಾಗಿರುವುದು ದೃಢಪಟ್ಟಿತ್ತು. ಹೀಗಾಗಿಯೇ ಈಗ ಸಂಪರ್ಕ ಪತ್ತೆ ಕಾರ್ಯವನ್ನು ಚುರುಕುಗೊಳಿಸಿ, ಸೋಂಕು ಹರಡುವಿಕೆಗೆ ತಡೆಯೊಡ್ಡಲು ತಜ್ಞರು ಸೂಚಿಸಿದ್ದಾರೆ.



ಬೆಂಗಳೂರಿನ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ಪುನಃ ಆರಂಭಿಸಲಾದ ಕೋವಿಡ್ ಕೇರ್ ಸೆಂಟರ್‌ನ ನೋಟ ಪ್ರಜಾವಾಣಿ ಚಿತ್ರ

> **ಕೋವಿಡ್ ನಿಯಂತ್ರಣ ಸಂಬಂಧ ಸಂಪರ್ಕ ಪತ್ತೆ ಮತ್ತು ಪರೀಕ್ಷೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಗುರುತಿಸಲಾದ ಸಂಪರ್ಕಿತರಿಗೂ ಪರೀಕ್ಷೆ ನಡೆಸಲಾಗುತ್ತದೆ.**
> **ಡಾ.ಕೆ.ವಿ. ತ್ರಿಲೋಕ್ ಚಂದ್ರ,**
> ಆರೋಗ್ಯ ಇಲಾಖೆ ಆಯುಕ್ತ

ಗುರಿ ತಲುಪುವ ಸವಾಲು: ಲಕ್ಷಣ ಇರದಿದ್ದರೂ ಕೋವಿಡ್ ಪರೀಕ್ಷೆಗೆ ಒಳಗಾದಾಗ ಕೆಲವರು ಸೋಂಕಿತರಾಗಿರುವುದು ಖಚಿತವಾಗಿದೆ. ಪರಿಣಾಮ ವ್ಯಕ್ತಿಗೆ ಹೇಗೆ ಸೋಂಕು ತಗುಲಿತು, ಎಷ್ಟು ಮಂದಿಯ ಜತೆಗೆ ಸಂಪರ್ಕ ಹೊಂದಿದ್ದರು ಎಂಬುದನ್ನು ಪತ್ತೆ ಮಾಡಲು ಸಿಬ್ಬಂದಿಗೆ ಸಾಧ್ಯವಾಗುತ್ತಿಲ್ಲ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ ಮಾ.1ರಿಂದ ಮಾ.17ರ ಅವಧಿಯಲ್ಲಿ 14,186 ಪ್ರಕರಣಗಳು ವರದಿಯಾಗಿವೆ. ಈ ಅವಧಿಯಲ್ಲಿ 33,251 ಮಂದಿ ಪರೋಕ್ಷ ಸಂಪರ್ಕಿತರು ಸೇರಿದಂತೆ ಒಟ್ಟು 63,247 ಮಂದಿ ಸಂಪರ್ಕಿತರನ್ನು ಗುರುತಿಸಲಾಗಿದೆ. 1,420 ಸೋಂಕಿತರಿಗೆ ಯಾವುದೇ ಸಂಪರ್ಕಿತರನ್ನು ಪತ್ತೆ ಹಚ್ಚಲು ಆರೋಗ್ಯ ಸಿಬ್ಬಂದಿಗೆ ಸಾಧ್ಯವಾಗಿಲ್ಲ.

'ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಕಾರಣ ಪ್ರತಿ ಸೋಂಕಿತ ವ್ಯಕ್ತಿಗೆ 20 ಮಂದಿ ಸಂಪರ್ಕಿತರನ್ನು ಪತ್ತೆ ಮಾಡಲು ಸೂಚಿಸಲಾಗಿದೆ. ಈ ಪ್ರಕ್ರಿಯೆ ಪರಿಣಾಮಕಾರಿಯಾಗಿ ನಡೆಯಲಿದೆ. ಈ ಕಾರ್ಯಕ್ಕೆ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಇದ್ದಾರೆ. ಸೋಂಕಿತರು ಸೂಕ್ತ ಮಾಹಿತಿಯನ್ನು ಒದಗಿಸಿ, ಸಹಕರಿಸಿದಲ್ಲಿ ಸಂಪರ್ಕ ಪತ್ತೆ ಸುಲಭವಾಗುತ್ತದೆ' ಎಂದು ಇಲಾಖೆ ನಿರ್ದೇಶಕ ಡಾ. ಓಂಪ್ರಕಾಶ್ ಪಾಟೀಲ್ ತಿಳಿಸಿದರು.

ಸಂಪರ್ಕ ಪತ್ತೆಯಲ್ಲಿ ಹಿಂದೆ ಬಿದ್ದ ಜಿಲ್ಲೆಗಳು (ಮಾ.1ರಿಂದ ಮಾ.17)

ಜಿಲ್ಲೆ	ಪ್ರಕರಣಗಳು	ಸಂಪರ್ಕ ಹೊಂದಿರದ ಸೋಂಕಿತರು	ಒಟ್ಟು ಸಂಪರ್ಕಿತರು	ಸರಾಸರಿ (ಪ್ರತಿ ರೋಗಿಗೆ)
ಬೆಂಗಳೂರು	8,423	02	378	0.04
ರಾಯಚೂರು	54	41	41	1.26
ವಿಜಯಪುರ	173	96	770	7.55
ಬೆಳಗಾವಿ	236	102	1,049	9.02
ಶಿವಮೊಗ್ಗ	86	25	457	11.53
ಕೊಪ್ಪಳ	20	10	87	13.73
ಚಿಕ್ಕಮಗಳೂರು	77	29	476	14.49
ಚಿಕ್ಕಬಳ್ಳಾಪುರ	130	19	801	15.42
ತುಮಕೂರು	484	88	3,419	16.06
ಬಳ್ಳಾರಿ	175	15	1,651	17.07
ದಾವಣಗೆರೆ	80	17	1,118	18.39

ಒಂದೇ ದಿನ 35 ಸಾವಿರ ಪ್ರಕರಣ

ಒಂದನೇ ಪುಟದಿಂದ

ಈ ವಾರದ ಆರಂಭದಲ್ಲಿ ಪಂಜಾಬ್‌ನ ಲೂಧಿಯಾನ ಜಿಲ್ಲಾಡಳಿತ ಬ್ಯಾಂಕ್ ಸಿಬ್ಬಂದಿ, ನ್ಯಾಯಾಂಗ ಅಧಿಕಾರಿಗಳು, ಶಾಲಾ ಉದ್ಯೋಗಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಸದಸ್ಯರಿಗೆ ಮತ್ತು ಪತ್ರಕರ್ತರಿಗೆ ಕೋವಿಡ್–19 ಲಸಿಕೆ ಹಾಕಿಸಿಕೊಳ್ಳುವ ಕಾರ್ಯಕ್ಕೆ ಚಾಲನೆ ನೀಡಿದೆ. ಸದ್ಯಕ್ಕೆ ಕೆಲ ಕಾಯಿಲೆವುಳ್ಳ 45ರಿಂದ 59 ವಯಸ್ಸಿನವರಿಗೆ ಮತ್ತು 60 ವರ್ಷಕ್ಕಿಂತ ಮೇಲಿನವರಿಗೆ ಲಸಿಕೆ ಹಾಕಲಾಗುತ್ತಿದೆ.

3.71 ಕೋಟಿ ಮಂದಿಗೆ ಲಸಿಕೆ: ದೇಶದಲ್ಲಿ ಇದುವರೆಗೆ 3.71 ಕೋಟಿ ಮಂದಿಗೆ ಲಸಿಕೆ ಹಾಕಲಾಗಿದೆ. ಲಸಿಕಾ ಕೇಂದ್ರಗಳನ್ನು ಹೆಚ್ಚಿಸಲಾಗಿದ್ದು, ಶೀಘ್ರದಲ್ಲೇ 4 ಕೋಟಿ ತಲುಪುವ ನಿರೀಕ್ಷೆ ಇದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. 75.68 ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಮೊದಲ ಡೋಸ್ ನೀಡಲಾಗಿದೆ. 46.32 ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಎರಡನೇ ಡೋಸ್ ನೀಡಲಾಗಿದೆ. 77.16 ಲಕ್ಷ ಮುಂಚೂಣಿ ಕಾರ್ಯಕರ್ತರಿಗೆ ಮೊದಲ ಡೋಸ್ ಹಾಗೂ 19.09 ಲಕ್ಷ ಮುಂಚೂಣಿ ಕಾರ್ಯಕರ್ತರಿಗೆ ಎರಡನೇ ಡೋಸ್ ನೀಡಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಕಾಯಿಲೆಪೀಡಿತರಾಗಿರುವ 45ರಿಂದ 59 ವರ್ಷದವರೆಗಿನ 24.57 ಲಕ್ಷ ಮಂದಿಗೆ ಹಾಗೂ 60 ವರ್ಷದ ಮೇಲ್ಪಟ್ಟ 1.28 ಕೋಟಿ ಮಂದಿಗೆ ಮೊದಲ ಡೋಸ್ ನೀಡಲಾಗಿದೆ.

ಗುಜರಾತ್- ಶಾಲೆ, ಕಾಲೇಜು ಬಂದ್ (ಅಹಮದಾಬಾದ್): ಗುಜರಾತ್‌ನಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ರಾಜ್ಯದ ಎಂಟು ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿನ ಶಾಲೆ ಮತ್ತು ಕಾಲೇಜುಗಳನ್ನು ಏಪ್ರಿಲ್ 10ರವರೆಗೆ ಮುಚ್ಚುವಂತೆ ಸರ್ಕಾರ ಸೂಚಿಸಿದೆ. ಅಹಮದಾಬಾದ್, ಗಾಂಧಿನಗರ, ಸೂರತ್, ವಡೋದರಾ, ರಾಜಕೋಟ್, ಜುನಾಗಢ, ಜಾಮ್ನಗರ್ ಮತ್ತು ಭಾವನಗರ ಪಾಲಿಕೆ ವ್ಯಾಪ್ತಿಗಳಲ್ಲಿ ಈ ಆದೇಶ ಅನ್ವಯವಾಗಲಿದೆ. ಜತೆಗೆ, ಎಲ್ಲ ಆಫ್‌ಲೈನ್ ಪರೀಕ್ಷೆಗಳನ್ನು ಸಹ ರದ್ದುಪಡಿಸಲಾಗಿದೆ ಎಂದು ಶಿಕ್ಷಣ ಸಚಿವ ಭೂಪೇಂದ್ರ ಚುಡಾಸಾಮಾ ತಿಳಿಸಿದ್ದಾರೆ.

> **ಪಂಜಾಬ್‌ನಲ್ಲಿ ಪರಿಸ್ಥಿತಿ ಗಂಭೀರವಾಗುತ್ತಿದೆ. ಜನರು ಕೋವಿಡ್–19ಗೆ ಸಂಬಂಧಿಸಿದ ನಿಯಮಗಳನ್ನು ಪಾಲಿಸದಿದ್ದರೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು.**
> **ಅಮರಿಂದರ್ ಸಿಂಗ್ ಪಂಜಾಬ್** ಮುಖ್ಯಮಂತ್ರಿ

> **5.9 ಕೋಟಿ ಡೋಸ್ ಲಸಿಕೆಯನ್ನು ಭಾರತ ರಫ್ತು ಮಾಡಿರುವುದು ಹೆಮ್ಮೆಯ ಸಂಗತಿ. ಆದರೆ, ದೇಶದಲ್ಲಿ ನಿಧಾನಗತಿಯಲ್ಲಿ ಲಸಿಕೆ ಹಾಕಲಾಗುತ್ತಿದೆ.**
> **ಪಿ. ಚಿದಂಬರಂ**
> ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ

27 ವರ್ಷದ ಕಾರು ಚಾಲಕನಿಗೂ ಲಸಿಕೆ ಹಾಕಿಸಿದ ಶಾಸಕ!

ಕಲಬುರ್ಗಿ: ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿ ಜಿಲ್ಲೆಯ ಶಾಸಕರೊಬ್ಬರು ತಮ್ಮ 27 ವರ್ಷದ ಕಾರು ಚಾಲಕನಿಗೆ ಲಸಿಕೆ ಕೊಡಿಸಿದ ಅಂಶ ಗುರುವಾರ 'ಪ್ರಜಾವಾಣಿ' ಫೋನ್ ಇನ್‌ನಲ್ಲಿ ಬಹಿರಂಗಗೊಂಡಿತು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಂಬಾರಾಯ ರುದ್ರವಾಡಿ ಅವರಿಗೆ ಕರೆ ಮಾಡಿ ಮಾತನಾಡಿದ ಚಾಲಕ, 'ಕಡಿಮೆ ವಯಸ್ಸಿದ್ದರೂ ನಾನು ಲಸಿಕೆ ಪಡೆದಿರುವೆ. ನನಗೇನಾದರೂ ತೊಂದರೆ ಆಗುವುದೇ' ಎಂದು ಆತಂಕದಿಂದ ಕೇಳಿದರು. ಆದರೆ, ಆತ ತನ್ನ ಹೆಸರು, ಶಾಸಕರ ಹೆಸರು ಹೇಳಿಕೊಳ್ಳಲು ಇಚ್ಛಿಸಲಿಲ್ಲ.

ಇದಕ್ಕೆ ಪ್ರತಿಕ್ರಿಯಿಸಿದ ಡಾ.ರುದ್ರವಾಡಿ, 'ಲಸಿಕೆ ಪಡೆಯುವುದರಿಂದ ಏನೂ ತೊಂದರೆ ಆಗುವುದಿಲ್ಲ. ಧೈರ್ಯವಾಗಿರು. ಹಿರಿಯರು ಹಾಗೂ ರೋಗಿಗಳಿಗೆ ಅಪಾಯ ಹೆಚ್ಚು ಎಂಬ ಕಾರಣಕ್ಕೆ ಸರ್ಕಾರ ವಯಸ್ಸಿನ ಮಿತಿ ಮಾಡಿದೆ. ಅದನ್ನು ಯಾರೂ ಮೀರಬಾರದು' ಎಂದರು.

ಗ್ರಾಮೀಣ ಭಾಗದಲ್ಲಿ ವ್ಯವಸ್ಥೆಗೆ ಸೂಚನೆ

ಬೆಂಗಳೂರು: ವೈದ್ಯಕೀಯ ವ್ಯವಸ್ಥೆ ಇಲ್ಲದ ಗ್ರಾಮೀಣ ಭಾಗದಲ್ಲಿ ಹಿರಿಯ ನಾಗರಿಕರಿಗೆ ಕೋವಿಡ್ ಲಸಿಕೆ ಪಡೆದುಕೊಳ್ಳಲು ಅಗತ್ಯ ವ್ಯವಸ್ಥೆ ಕಲ್ಪಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯ ಆರೋಗ್ಯ ಇಲಾಖೆಗೆ ಪತ್ರ ಬರೆದು ಸೂಚಿಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಬೇಕು. ವೃದ್ಧಾಶ್ರಮ, ಅಪಾರ್ಟ್‌ಮೆಂಟ್ ಸಮುಚ್ಚಯ ಸೇರಿದಂತೆ ವಿವಿಧೆಡೆಯಲ್ಲಿ ವಾಸವಿರುವ ಹಿರಿಯ ನಾಗರಿಕರಿಗೆ ಲಸಿಕೆ ಪಡೆಯಲು ಹತ್ತಿರದಲ್ಲಿ ಕೇಂದ್ರಗಳು ಇರದಿದ್ದಲ್ಲಿ ಪರ್ಯಾಯ ಸೌಕರ್ಯವನ್ನು ಕಲ್ಪಿಸಬೇಕು. ಇಲ್ಲವಾದಲ್ಲಿ ಸಾರಿಗೆ ವ್ಯವಸ್ಥೆಯನ್ನು ಒದಗಿಸಿ, ಕೋವಿಡ್ ಲಸಿಕೆ ವಿತರಣೆ ಕೇಂದ್ರಗಳಿಗೆ ಕರೆತರಬೇಕು ಎಂದು ತಿಳಿಸಲಾಗಿದೆ.

ಪ್ರತಿ ದಿನ 3 ಲಕ್ಷ ಜನರಿಗೆ ಲಸಿಕೆ

ಒಂದನೇ ಪುಟದಿಂದ

ಎಲ್ಲ ಮಾಹಿತಿ ತಕ್ಷಣವೇ ಪಡೆಯಲು ರಿಯಲ್ ಟೈಮ್ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. ಗೃಹ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿಯ ನೇಮಕವನ್ನು ತಾತ್ಕಾಲಿಕವಾಗಿ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಒಂದು ವೇಳೆ ರೋಗಿಗಳ ಸಂಖ್ಯೆ ಹೆಚ್ಚಾದರೆ ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳ ನೆರವು ಬೇಕಾಗುತ್ತದೆ. ಈ ಸಂಬಂಧ ಇದೇ ವಾರ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಲಾಗುವುದು ಎಂದೂ ಸುಧಾಕರ್ ತಿಳಿಸಿದರು.

ಮಮತಾ ವಿರುದ್ಧ ಆರೋಪಗಳ ಸುರಿಮಳೆಗೈದ ಪ್ರಧಾನಿ ಮೋದಿ

ಒಳನುಸುಳುವಿಕೆಗೆ ಕಾರಣ ಓಲೈಕೆ ರಾಜಕಾರಣ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಮಮತಾ ಬ್ಯಾನರ್ಜಿ ಅವರು ನಡೆಸಿದ ಓಲೈಕೆ ಮತ್ತು ಮತಬ್ಯಾಂಕ್ ರಾಜಕಾರಣವೇ ವಲಸಿಗರ ಒಳನುಸುಳುವಿಕೆಗೆ ಕಾರಣ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಆರೋಪಿಸಿದ್ದಾರೆ. ಅದಲ್ಲದೆ, ಟಿಎಂಸಿ ಆಳ್ವಿಕೆಯು ರಾಜ್ಯದಲ್ಲಿ 'ಹೊಸ ತಳಿಯ ಮಾವೋವಾದಿ'ಗಳನ್ನು ಸೃಷ್ಟಿಸಿದ್ದು, ಅವರು ಸಾರ್ವಜನಿಕ ಹಣದ ಲೂಟಿ ಮಾಡುತ್ತಿದ್ದಾರೆ ಎಂದಿದ್ದಾರೆ.

ಪಶ್ಚಿಮ ಬಂಗಾಳವು ಕಳೆದ 10 ವರ್ಷಗಳಲ್ಲಿ ಓಲೈಕೆ ರಾಜಕಾರಣದಿಂದ ಬಸವಳಿದಿದೆ ಎಂದು ಪುರೂಲಿಯಾ ಜಿಲ್ಲೆಯ ರ‍್ಯಾಲಿಯಲ್ಲಿ ಮಾತನಾಡಿದ ಅವರು ಆಪಾದಿಸಿದರು.

ಓಲೈಕೆ ರಾಜಕಾರಣದ ಕಾರಣದಿಂದಲೇ ಮಮತಾ ಅವರು ಬಾಟ್ಲಾ ಹೌಸ್ ಎನ್‌ಕೌಂಟರ್ ಅನ್ನು ಪ್ರಶ್ನಿಸಿದ್ದರು ಎಂದು ಮೋದಿ ಹೇಳಿದರು. 'ಪುಲ್ವಾಮಾ ಉಗ್ರರ ದಾಳಿಯ ಸಂದರ್ಭದಲ್ಲಿ ನೀವು ಯಾರ ಪರವಾಗಿ ಇದ್ದಿರಿ ಎಂಬುದು ಪಶ್ಚಿಮ ಬಂಗಾಳದ ಜನರಿಗೆ ಸರಿಯಾಗಿ ತಿಳಿದಿದೆ. ಬಾಟ್ಲಾ ಹೌಸ್ ಎನ್‌ಕೌಂಟರ್ ಆರೋಪಿಗೆ ನ್ಯಾಯಾಲಯವು ಈಗ ಗಲ್ಲು ಶಿಕ್ಷೆ ವಿಧಿಸಿದೆ. ಆದರೆ, ಆಗ ಮಮತಾ ದೀದಿ ಅವರು ಎನ್‌ಕೌಂಟರ್ ಬಗ್ಗೆಯೇ ಪ್ರಶ್ನೆಗಳನ್ನು ಕೇಳಿದ್ದರು. ಇವೆಲ್ಲದಕ್ಕೂ ಕಾರಣ ಓಲೈಕೆ ರಾಜಕಾರಣ' ಎಂದು ಮೋದಿ ಹೇಳಿದರು.


ಪುರೂಲಿಯಾದಲ್ಲಿ ನಡೆದ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಪಿಟಿಐ ಚಿತ್ರ

ಬಂಗಾಳದ ಜನರಿಗೆ ನೆನಪಿನ ಶಕ್ತಿ ಹೆಚ್ಚು. ರಾಜ್ಯದಲ್ಲಿ ಸರ್ಕಾರ ಉರುಳಿಸುವ ಕ್ಷಿಪ್ರಕ್ರಾಂತಿಯನ್ನು ಸೇನೆಯು ಯೋಜಿಸಿತ್ತು ಎಂದು ಆರೋಪಿಸಿದವರು ಯಾರು ಎಂಬುದೂ ಜನರಿಗೆ ತಿಳಿದಿದೆ ಎಂದರು. ಭೂಗತ ಮಾವೋವಾದಿಗಳಿಗೂ ಟಿಎಂಸಿ ಸರ್ಕಾರವು ರಹಸ್ಯವಾಗಿ ನೆರವು ನೀಡುತ್ತಿದೆ ಎಂದು ಮೋದಿ ಹೇಳಿದ್ದಾರೆ.

ದಲಿತರು, ಬುಡಕಟ್ಟು ಜನರು ಮತ್ತು ಅರಣ್ಯ ವಾಸಿಗಳನ್ನು ಮುಖ್ಯಮಂತ್ರಿ ನಿರ್ಲಕ್ಷಿಸಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ಕೇಂದ್ರವು ಪೂರೈಸಿದ್ದ ಅಕ್ಕಿಯನ್ನು ಕೂಡ ಮಮತಾ ಅವರ ಬಂಟರು ಲೂಟಿ ಹೊಡೆದಿದ್ದಾರೆ. 'ಕಟ್ ಮನಿ' ಮತ್ತು ಸರ್ಕಾರಿ ಸೌಲಭ್ಯಕ್ಕಾಗಿ ಲಂಚ ನೀಡಿಕೆಯ ಭ್ರಷ್ಟ ಪದ್ಧತಿಗಳಿಂದಾಗಿ ದಲಿತರು ಮತ್ತು ಬುಡಕಟ್ಟು ಜನರೇ ಹೆಚ್ಚು ತೊಂದರೆಗೆ ಒಳಗಾಗಿದ್ದಾರೆ ಎಂದು ಮೋದಿ ಹೇಳಿದರು.

'ಆಟ ಮುಗಿಯಿತು'

'ದೀದಿಗೆ ನನ್ನ ಮೇಲೆ ಸಿಟ್ಟು ಬರುತ್ತಿದೆ. ದೀದಿ ಅವರೇ, ನೀವು ಕೂಡ ಭಾರತದ ಮಗಳು. ನನಗೆ ನಿಮ್ಮ ಮೇಲೆ ಗೌರವ ಇದೆ. ಆದರೆ, ಪಶ್ಚಿಮ ಬಂಗಾಳದ ಮೇಲೆ ನೀವು ದೌರ್ಜನ್ಯ ಎಸಗಿದ್ದೀರಿ. ಹಾಗಾಗಿ, ಜನರು ನಿಮ್ಮ ವಿರುದ್ಧ ತಿರುಗಿ ಬೀಳಲಿದ್ದಾರೆ. ನಿಮ್ಮನ್ನು ಸೋಲಿಸಲಿದ್ದಾರೆ' ಎಂದು ಮೋದಿ ಹೇಳಿದರು.

ಟಿಎಂಸಿಯ ಘೋಷಣೆಯಾದ 'ಆಟ ಶುರು' (ಖೇಲಾ ಹೋಬೆ) ಎಂಬುದನ್ನೂ ಮೋದಿ ಲೇವಡಿ ಮಾಡಿದರು. ಈ ವಿಧಾನಸಭೆ ಚುನಾವಣೆಯಲ್ಲಿ 'ದೀದಿ ಅವರ ಆಟ ಮುಗಿಯಿತು' ಎಂದರು.

'ಇಲ್ಲಿ ಗೆದ್ದು ದೆಹಲಿಗೆ ಹೋಗುವೆ'

ಬಿಜೆಪಿಗೆ ನೇರ ಸವಾಲಿನ ಜತೆಗೆ ಮಹತ್ವಾಕಾಂಕ್ಷೆ ಪ್ರಕಟಿಸಿದ ಮಮತಾ ಬ್ಯಾನರ್ಜಿ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಿಜೆಪಿಗೆ ನೇರ ಸವಾಲು ಹಾಕುವುದರ ಜತೆಗೆ ತಮಗೆ ರಾಷ್ಟ್ರ ಮಟ್ಟದಲ್ಲಿ ಮಹತ್ವಾಕಾಂಕ್ಷೆ ಇದೆ ಎಂಬ ಸಂದೇಶವನ್ನೂ ಗುರುವಾರ ರವಾನಿಸಿದ್ದಾರೆ.

'ವಿಧಾನಸಭೆ ಚುನಾವಣೆಗಳು ಮುಗಿಯುವ ತನಕ ಕಾಯಿರಿ. ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಬಳಿಕ ದೆಹಲಿಯಲ್ಲಿರುವ ಸರ್ಕಾರವನ್ನು (ಕೇಂದ್ರ) ಉರುಳಿಸಲು ಹೋಗುತ್ತೇನೆ' ಎಂದು ಪಶ್ಚಿಮ ಮೇದಿನಿಪುರ ಜಿಲ್ಲೆಯ ಕಾಲೈಕುಂಡದಲ್ಲಿ ನಡೆದ ಸಮಾವೇಶ ಉದ್ದೇಶಿಸಿ ಹೇಳಿದರು.

ಚುನಾವಣೆ ಸಂದರ್ಭದಲ್ಲಿ ಹೆಲಿಕಾಪ್ಟರ್‌ಗಳು ಮತ್ತು ವಿಮಾನಗಳಲ್ಲಿ ಬರುವ ಬಿಜೆಪಿ ಮುಖಂಡರು ಜನರಿಗೆ ಆಮಿಷ ಒಡ್ಡಲು ಚೀಲಗಟ್ಟಲೆ ದುಡ್ಡು ತರುತ್ತಾರೆ. ಆದರೆ, ಬಿಕ್ಕಟ್ಟುಗಳ ಸಂದರ್ಭದಲ್ಲಿ ಅವರು ಯಾರೂ ಇಲ್ಲಿ ಕಾಣ ಸಿಗುವುದಿಲ್ಲ ಎಂದರು.

'ನಾವು ದೆಹಲಿಯಲ್ಲಿ ಕೂಡ ಪರಿವರ್ತನೆ ತರುತ್ತೇವೆ ಎಂಬ ಕಾರಣಕ್ಕೆ ಅವರಿಗೆ (ಬಿಜೆಪಿ) ಭಯವಾಗಿದೆ. ಹಾಗಾಗಿಯೇ ಅವರು ಪಶ್ಚಿಮ ಬಂಗಾಳವನ್ನು ಗುರಿಯಾಗಿಸಿಕೊಂಡಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ಅವರಿಗೆ ವಲಸಿಗ ಕಾರ್ಮಿಕರ ಬಗ್ಗೆ ಕರುಣೆಯೇ ಇರಲಿಲ್ಲ. ಆ ಪಕ್ಷವು ಇವರನ್ನೆಲ್ಲ ಪೀಡಕರು ಮತ್ತು ರಕ್ಕಸರು ಎಂಬಂತೆ ಚಿತ್ರಿಸಿತ್ತು' ಎಂದು ಮಮತಾ ಹೇಳಿದರು.


ಮಮತಾ ಅವರು ಪಶ್ಚಿಮ ಮೇದಿನಿಪುರ ಜಿಲ್ಲೆಯ ಕಾಲೈಕುಂಡದಲ್ಲಿ ಸಮಾವೇಶ ಉದ್ದೇಶಿಸಿ ಗುರುವಾರ ಮಾತನಾಡಿದರು ಪಿಟಿಐ ಚಿತ್ರ

'ಲಾಕ್‌ಡೌನ್ ಸಂದರ್ಭದಲ್ಲಿ ಮುಂಬೈನಲ್ಲಿ ಸಿಲುಕಿಕೊಂಡಿದ್ದ ವಲಸೆ ಕಾರ್ಮಿಕರನ್ನು ಕರೆತರಲು ನಾನು ಹಣ ಕಳುಹಿಸಿದ್ದೆ. ರಾಜಸ್ಥಾನದಲ್ಲಿ ಸಿಕ್ಕಿಹಾಕಿಕೊಂಡಿದ್ದ ವಿದ್ಯಾರ್ಥಿಗಳನ್ನು ಕರೆತರಲು ಬಸ್ ಕಳುಹಿಸಿದ್ದೆ. ನಿದ್ದೆ ಮಾಡುತ್ತಿದ್ದ ಮಕ್ಕಳನ್ನು ಚಕ್ರ ಇರುವ ಸೂಟ್‌ಕೇಸ್‌ನಲ್ಲಿ ಕೂರಿಸಿಕೊಂಡು ಮಹಿಳೆಯರು ಹೇಗೆ ನಡೆದು ಬಂದಿದ್ದಾರೆ ಎಂಬುದನ್ನು ನೀವೆಲ್ಲ ನೋಡಿಲ್ಲವೇ? ಆದರೆ, ಅವರಿಗೆ (ಬಿಜೆಪಿ) ಯಾವ ಕನಿಕರವೂ ಇಲ್ಲ. ಅವರದ್ದು ಕ್ರೂರಿಗಳು ಮತ್ತು ರಕ್ಕಸರ ಪಕ್ಷ' ಎಂದು ಮಮತಾ ಟೀಕಿಸಿದ್ದಾರೆ.

ಟಿಎಂಸಿ ಅಭ್ಯರ್ಥಿ ಯಾರು ಎಂಬುದನ್ನು ನೋಡುವುದಕ್ಕೇ ಹೋಗಬೇಡಿ. ಪಕ್ಷಕ್ಕೆ ಮತ ಹಾಕಿ. ಹಾಗಾದರೆ ಮಾತ್ರ ಜನರಿಗಾಗಿ ತಾವು ಮಾಡುತ್ತಿರುವ ಕೆಲಸ ಮುಂದುವರಿಸಲು ಸಾಧ್ಯ ಎಂದು ಮಮತಾ ಹೇಳಿದರು.

'ಹೆಸರು ಅಳಿಸುತ್ತಾರೆ'

ಗಣತಿಗೆ ಬಂದಾಗ ವ್ಯಕ್ತಿಯು ಮನೆಯಲ್ಲಿ ಇಲ್ಲದಿದ್ದರೆ ಕೇಂದ್ರ ಸರ್ಕಾರದವರು ಮತದಾರರ ಪಟ್ಟಿಯಿಂದಲೇ ಅವರ ಹೆಸರು ಅಳಿಸಿ ಹಾಕುತ್ತಾರೆ. ಏನೇ ಆದರೂ ಪಶ್ಚಿಮ ಬಂಗಾಳದಲ್ಲಿ ಎನ್‌ಪಿಆರ್ (ರಾಷ್ಟ್ರೀಯ ಜನಸಂಖ್ಯಾ ನೋಂದಣಿ) ಪರಿಷ್ಕರಣೆಗೆ ಅವಕಾಶ ಕೊಡುವುದಿಲ್ಲ ಎಂದು ಮಮತಾ ಹೇಳಿದ್ದಾರೆ.

ಸಿಪಿಎಂ ಮತ್ತು ಕಾಂಗ್ರೆಸ್ ಪಕ್ಷವು ಬಿಜೆಪಿ ಜೊತೆ ಶಾಮೀಲಾಗಿದೆ. ಹಾಗಾಗಿ, ಎಡರಂಗದ ಕಾರ್ಯಕರ್ತರು ಟಿಎಂಸಿಗೆ ಮತ ಹಾಕಬೇಕು ಎಂದು ಮಮತಾ ಕೋರಿದರು.

ಶನಿವಾರ ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆ

ಬೆಂಗಳೂರು: ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ಇದೇ 19 ಕ್ಕೆ ನಗರಕ್ಕೆ ಬರಲಿದ್ದು, ಮಾರ್ಚ್ 20 ರಂದು ಪಕ್ಷದ ಪ್ರಮುಖ ನಾಯಕರ ಸಭೆ ನಡೆಯಲಿದೆ.

ಈ ಸಭೆಯಲ್ಲಿ ಮೂರು ಕ್ಷೇತ್ರಗಳಿಗೆ ನಡೆಯುವ ಉಪಚುನಾವಣೆಯ ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚೆ ನಡೆಯಲಿದ್ದು, ರಾಜ್ಯದಲ್ಲಿ ಪಕ್ಷದ ವಿದ್ಯಮಾನಗಳ ಬಗ್ಗೆ ಮಾಹಿತಿ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಾ.19 ರಂದು ಸಂಜೆ 6 ಗಂಟೆಗೆ ಬರುವ ಅವರು ಕುಮಾರಕೃಪಾ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಲಿದ್ದು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತನ್ನು ಭೇಟಿ ಮಾಡುವ ಸಾಧ್ಯತೆ ಇದೆ. 20 ರ ಬೆಳಿಗ್ಗೆ 8.30 ಕ್ಕೆ ಪ್ರಮುಖ ನಾಯಕರ ಸಭೆ ನಡೆಯಲಿದೆ. ಸಭೆಯ ಬಳಿಕ ಅವರು ರಾಜಸ್ಥಾನದ ಉದಯಪುರಕ್ಕೆ ತೆರಳಲಿದ್ದಾರೆ.

ಅಸ್ಸಾಂನ ಚಹಾ ತೋಟದ ಕಾರ್ಮಿಕರ ಅಳಲು: ಕಡಿಮೆ ಕೂಲಿಯ ಪಡಿಪಾಟಲು

ಯಾರೇ ಬಂದರೂ ಬದುಕು ಬದಲಾಗದು

• ಸುಮಿರ್ ಕರ್ಮಾಕರ್

ಧೇಕಿಯಾಜುಲಿ (ಅಸ್ಸಾಂ): ತೀನ್‌ಖರಿಯಾ ಚಹಾ ತೋಟದ ಜುಲಿಯಾ ವಿಭಾಗದಲ್ಲಿ ಎಲೆ ಕೀಳುವ ಕೆಲಸ ಮಾಡುವ ಜಾಸ್ಮಿನ್ ಬರ್ಲಾಗೆ ಇದು ವಿರಾಮವಿಲ್ಲದ ದುಡಿಮೆಯ ದಿನಗಳು. ಇದು ಉತ್ತರ ಅಸ್ಸಾಂನ ಸೋನಿತ್‌ಪುರ ಜಿಲ್ಲೆಯ ಸ್ಥಳ. ಚಳಿಗಾಲ ಕಳೆದು, ಹೊಸ ಋತುವಿನ ಮೊದಲ ಮಳೆ ಸುರಿದ ಕಾರಣಕ್ಕೆ ಎಲೆ ಕೀಳುವ ಕೆಲಸ ವೇಗ ಪಡೆದುಕೊಂಡಿದೆ.

ಈಗ ಅಸ್ಸಾಂನಲ್ಲಿ ಚುನಾವಣೆ ಸಮಯ. ಆದರೆ, 42 ವರ್ಷದ ಜಾಸ್ಮಿನ್‌ಗೆ ಮಾತ್ರ ಚುನಾವಣೆ ಬಗ್ಗೆ ಮಾತನಾಡುವುದಕ್ಕೇ ಇಷ್ಟ ಇಲ್ಲ. 'ಚುನಾವಣೆಯಿಂದ ಏನಾಗುತ್ತದೆ? ನಮ್ಮ ಬಗ್ಗೆ, ನಮ್ಮ ಸಮಸ್ಯೆಗಳ ಬಗ್ಗೆ ಯಾರೂ ತಲೆಯೇ ಕೆಡಿಸಿಕೊಳ್ಳುವುದಿಲ್ಲ' ಎಂದು ಎಲೆಗಳಿಂದ ತುಂಬಿದ ಬುಟ್ಟಿಯನ್ನು ಖಾಲಿ ಮಾಡಲು ಆತುರಾತುರವಾಗಿ ಹೋಗುತ್ತಾ ಜಾಸ್ಮಿನ್ ಹೇಳುತ್ತಾರೆ. ಅವರನ್ನೇ ನೋಡುತ್ತಿದ್ದ ಇನ್ನೊಬ್ಬ ಮಹಿಳೆ ಬಿಸ್ವಾಸಿ ಭದ್ರ 'ಹೌದೌದು' ಎಂಬಂತೆ ತಲೆಯಾಡಿಸಿದರು.

'ನಮಗೆ ಸಿಗೋದು ದಿನಕ್ಕೆ ₹167. ಈ ಹಣದಲ್ಲಿ ಜೀವನ ನಡೆಸೋದು ಹೇಗೆ' ಎಂದು ಅವರು ಪ್ರಶ್ನಿಸುತ್ತಾರೆ. 'ಎಲ್‌ಪಿಜಿ ಸಿಲಿಂಡರ್ ದರ ಈಗ ₹800 ಆಗಿದೆ. ಇಬ್ಬರು ಮಕ್ಕಳಿಗೆ ತಿಂಗಳಿಗೆ ತಲಾ ₹270 ಶಾಲಾ ಶುಲ್ಕ ಕಟ್ಟಬೇಕು. ಪ್ರತಿ ವರ್ಷ ತಲಾ ₹3,000 ಪ್ರವೇಶ ಶುಲ್ಕ ಕೊಡಬೇಕು. ನನ್ನ ಗಂಡನಿಗೆ ಹೊರಗೆ ಕೆಲಸಕ್ಕೆ ಹೋದರೆ ದಿನಕ್ಕೆ ₹270 ಸಿಗುತ್ತದೆ. ಆದರೆ ಆತನಿಗೆ ದಿನವೂ ಕೆಲಸ ಸಿಗೋದಿಲ್ಲ' ಎಂದು ಬಿಸ್ವಾಸಿ ತಮ್ಮ ಅಳಲು ತೋಡಿಕೊಂಡರು.


ತೀನ್‌ಖರಿಯಾ ಚಹಾ ತೋಟದಲ್ಲಿ ಕಾರ್ಮಿಕರು

'ಕಾಂಗ್ರೆಸ್, ಬಿಜೆಪಿ ಎಲ್ಲವೂ ಒಂದೇ. ಚುನಾವಣೆಗೆ ಮೊದಲು ಭರವಸೆ ಕೊಡುತ್ತಾರೆ. ಚುನಾವಣೆ ಬಳಿಕ ನಮ್ಮನ್ನು ಮರೆತುಬಿಡುತ್ತಾರೆ' ಎಂದು ಬಿಸ್ವಾಸಿ ನಿಟ್ಟುಸಿರಿಟ್ಟರು.

ತೀನ್‌ಖರಿಯಾ ಚಹಾ ತೋಟ 210 ಹೆಕ್ಟೇರ್ ವ್ಯಾಪಿಸಿದೆ. ಇಲ್ಲಿ, 454 ಕಾಯಂ ಕೆಲಸಗಾರರಿದ್ದಾರೆ. ಮತದಾರರ ಸಂಖ್ಯೆ 1,300. ದಿನದ ಕೂಲಿಯನ್ನು ₹351ಕ್ಕೆ ಏರಿಸಬೇಕು ಎಂಬ ಅವರ ಬೇಡಿಕೆ ವರ್ಷಗಳಿಂದ ಹಾಗೆಯೇ ಇದೆ. ಅಸ್ಸಾಂನಲ್ಲಿ 850ಕ್ಕೂ ಹೆಚ್ಚು ದೊಡ್ಡ ಚಹಾ ತೋಟಗಳಿವೆ. ದೇಶದ ಚಹಾ ಉತ್ಪಾದನೆಯಲ್ಲಿ ಅಸ್ಸಾಂನ ಪಾಲು ಶೇ 51ಕ್ಕೂ ಹೆಚ್ಚು. ಅಸ್ಸಾಂ ಚಹಾಕ್ಕೆ ಜಾಗತಿಕ ಮಾನ್ಯತೆ ಇದೆ. ಇದರ ಪರಿಮಳ ಮತ್ತು ಬಣ್ಣಕ್ಕೆ ದೊಡ್ಡ ಮನ್ನಣೆ ಇದೆ. ಆದರೆ, ಚಹಾ ತೋಟದ ಕಾರ್ಮಿಕರ ಸಂಕಟವನ್ನು ಮಾತ್ರ ಕೇಳುವವರಿಲ್ಲ.

ಅಸ್ಸಾಂನ 126 ಕ್ಷೇತ್ರಗಳ ಪೈಕಿ 40 ಕ್ಷೇತ್ರಗಳಲ್ಲಿ ಚಹಾ ತೋಟದ ಕಾರ್ಮಿಕರೇ ನಿರ್ಣಾಯಕ. ಇವರ ಸಂಖ್ಯೆ 20 ಲಕ್ಷಕ್ಕೂ ಹೆಚ್ಚು ಇದೆ.

ಧೇಕಿಯಾಜುಲಿ ಕ್ಷೇತ್ರವು 2011ರಲ್ಲಿ ಕಾಂಗ್ರೆಸ್‌ನ ಹಾಬುಲ್ ಚೌಧುರಿಯನ್ನು ಆಯ್ಕೆ ಮಾಡಿತ್ತು. 2016ರಲ್ಲಿ ಬಿಜೆಪಿಯ ಅಶೋಕ್ ಸಿಂಘಾಲ್ ಗೆದ್ದರು.

2014ರ ಲೋಕಸಭಾ ಚುನಾವಣೆ ವರೆಗೆ ಚಹಾ ತೋಟದ ಕಾರ್ಮಿಕರ ಮತಗಳು ಕಾಂಗ್ರೆಸ್‌ಗೆ ಕಟ್ಟಿಟ್ಟ ಬುತ್ತಿ ಯಾಗಿತ್ತು. ಈಗ ಅದು ಬಿಜೆಪಿಗೆ ವರ್ಗಾವಣೆಯಾಗಿದೆ.

ದಿನಗೂಲಿಯೇ ಈ ಚುನಾವಣೆಯ ಮುಖ್ಯ ವಿಷಯ ಆಗಬಹುದು ಎಂಬುದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೆ ಅರಿವಾಗಿದೆ. ಹಾಗಾಗಿಯೇ, ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ದಿನಗೂಲಿಯನ್ನು ₹365ಕ್ಕೆ ಏರಿಸುವ ಭರವಸೆಯನ್ನು ಫೆ. 14ರಂದು ಶಿವಸಾಗರದಲ್ಲಿ ನಡೆದ ರ‍್ಯಾಲಿಯಲ್ಲಿ ಅವರು ಕೊಟ್ಟಿದ್ದಾರೆ. ಕೆಲ ದಿನಗಳ ಬಳಿಕ ದಿನಗೂಲಿಯನ್ನು ಬಿಜೆಪಿ ಸರ್ಕಾರವು ₹217ಕ್ಕೆ ಏರಿಸಿತು. ಆದರೆ, ಚಹಾ ಎಸ್ಟೇಟ್ ಮಾಲೀಕರು ಕೋರ್ಟ್‌ಗೆ ಹೋದ ಕಾರಣ, ಈ ಏರಿಕೆಗೆ ಗುವಾಹಟಿ ಹೈಕೋರ್ಟ್ ತಡೆ ನೀಡಿದೆ. ದಿನಗೂಲಿಯನ್ನು ಸರ್ಕಾರ ನಿಗದಿ ಮಾಡುತ್ತದೆ, ಆದರೆ ಚಹಾ ತೋಟದ ಮಾಲೀಕರೇ ಅದನ್ನು ಪಾವತಿಸಬೇಕಾಗುತ್ತದೆ.

ಎಸ್‌ಟಿ ಮಾನ್ಯತೆ ಗಗನಕುಸುಮ

19ನೇ ಶತಮಾನದಲ್ಲಿ ಮಧ್ಯ ಪ್ರದೇಶ, ಬಿಹಾರ, ಒಡಿಶಾ ಮತ್ತು ಈಗಿನ ಜಾರ್ಖಂಡ್‌ನಿಂದ ಕಾರ್ಮಿಕರನ್ನು ಕರೆ ತರಲಾಗಿತ್ತು. ಈಗ ಅವರೆಲ್ಲರೂ ಅಸ್ಸಾಂನ ಕಾಯಂ ನಿವಾಸಿಗಳು. ಅವರ ಸಂಬಂಧಿಕರು ಈಗಲೂ ಆ ರಾಜ್ಯಗಳಲ್ಲಿಯೇ ಇದ್ದಾರೆ. ಅವರಿಗೆ ಪರಿಶಿಷ್ಟ ಪಂಗಡದ (ಎಸ್‌ಟಿ) ಮಾನ್ಯತೆ ಇದೆ. ಅದೇ ರೀತಿ ತಮಗೂ ಪರಿಶಿಷ್ಟ ಪಂಗಡ ಮಾನ್ಯತೆ ಬೇಕು ಎಂಬುದು ಅಸ್ಸಾಂನಲ್ಲಿ ನೆಲೆಯಾಗಿರುವವರ ಬೇಡಿಕೆ. ಈ ಬೇಡಿಕೆಯು ಕಾಂಗ್ರೆಸ್ ಸರ್ಕಾರ ಇದ್ದಾಗಲಾಗಲಿ ಬಿಜೆಪಿ ಸರ್ಕಾರ ಬಂದಾಗಲಾಗಲಿ ಈಡೇರಿಲ್ಲ.

ಪೌರತ್ವದ ಪ್ರಸ್ತಾಪವೇ ಮಾಡದ ಮೋದಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಚುನಾವಣೆಯಲ್ಲಿ ಮತಗಳಿಸುವ ಒಂದೇ ಉದ್ದೇಶದಿಂದ ಅಸ್ಸಾಂ ರಾಜ್ಯವನ್ನು ಕಾಂಗ್ರೆಸ್ ವಿಭಜಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಆರೋಪಿಸಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ರಾಜ್ಯದ ಕಟ್ಟಕಡೆಯ ಸಮುದಾಯದ ಅಭಿವೃದ್ಧಿಗೆ ಯತ್ನಿಸುತ್ತಿದೆ ಎಂದು ಹೇಳಿದ್ದಾರೆ.

ಅಸ್ಸಾಂನ ಕರೀಮ್‌ಗಂಜ್‌ನಲ್ಲಿ ತಮ್ಮ ಮೊದಲ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮೋದಿ ಮಾತನಾಡಿದರು. ಆದರೆ, ಪ್ರಧಾನಿ ಅವರು ತಮ್ಮ ಭಾಷಣದ ಎಲ್ಲಿಯೂ ಪೌರತ್ವ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಸಿಎಎ ಅಥವಾ ಎನ್‌ಆರ್‌ಸಿ ಕುರಿತಂತೆ ದಕ್ಷಿಣ ಅಸ್ಸಾಂನ ಮತದಾರರು ಆತಂಕದಲ್ಲಿದ್ದಾರೆ. ಏಕೆಂದರೆ ಬಹುತೇಕ ಸಮಾನ ಸಂಖ್ಯೆಯ ಬಂಗಾಳಿ ಮಾತನಾಡುವ ಹಿಂದೂಗಳು ಮತ್ತು ಮುಸ್ಲಿಮರನ್ನು ಈ ಪ್ರದೇಶ ಹೊಂದಿದೆ. ಎನ್‌ಆರ್‌ಸಿಯಿಂದ ಬಂಗಾಳಿ ಮಾತನಾಡುವ ಮುಸ್ಲಿಮರು ಚಿಂತಿತರಾಗಿದ್ದಾರೆ. ಆದರೆ ಸಿಎಎ ಮೂಲಕ ಪೌರತ್ವದ ಭರವಸೆ ಮೋದಿಯವರು ನೀಡುತ್ತಾರೆ ಎಂಬ ವಿಶ್ವಾಸದಲ್ಲಿ ಬಂಗಾಳಿ ಮಾತನಾಡುವ ಹಿಂದೂಗಳು ಇದ್ದರು.

ಪ.ಬಂಗಾಳ: ಬಿಜೆಪಿ ಪಟ್ಟಿ ಘೋಷಣೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ 148 ಅಭ್ಯರ್ಥಿಗಳ ಹೆಸರನ್ನು ಬಿಜೆಪಿ ಗುರುವಾರ ಘೋಷಿಸಿದೆ. ಪಕ್ಷದ ಪಶ್ಚಿಮ ಬಂಗಾಳ ಘಟಕದ ಉಪಾಧ್ಯಕ್ಷ ಮುಕುಲ್ ರಾಯ್ ಮತ್ತು ಮಾಜಿ ಅಧ್ಯಕ್ಷ ರಾಹುಲ್ ಸಿನ್ಹಾ ಅವರಿಗೂ ಪಟ್ಟಿಯಲ್ಲಿ ಸ್ಥಾನ ಕಲ್ಪಿಸಲಾಗಿದೆ.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಮತ್ತು ಪಕ್ಷದ ಐವರು ಸಂಸದರಿಗೆ ಈ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡಿದೆ. ಟಿಎಂಸಿಯಿಂದ ಬಿಜೆಪಿಗೆ ಬಂದಿದ್ದ ಮುಕುಲ್ ರಾಯ್ ಅವರಿಗೆ ಕೃಷ್ಣಾನಗರ ಉತ್ತರ ಕ್ಷೇತ್ರದಲ್ಲಿ ಟಿಕೆಟ್ ನೀಡಲಾಗಿದೆ.

ಲೇವಡಿಗೊಳಗಾದ ಆಯ್ಕೆ: ಪಶ್ಚಿಮ ಬಂಗಾಳ ಕಾಂಗ್ರೆಸ್‌ನ ನಾಯಕ ದಿವಂಗತ ಸೋಮೆನ್ ಮಿತ್ರಾ ಅವರ ಪತ್ನಿ ಸಿಖಾ ಮಿತ್ರಾ ಅವರಿಗೆ ಚೌರಿಂಘೀ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನೀಡಿದೆ. ಟಿಕೆಟ್ ಪಟ್ಟಿ ಘೋಷಣೆಯಾದ ಬೆನ್ನಲ್ಲೇ ಸಿಖಾ ಅವರು, 'ನಾನು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ' ಎಂದು ಘೋಷಿಸಿದ್ದಾರೆ.

'ನನ್ನ ಜತೆ ಮಾತುಕತೆ ನಡೆಸದೆ ಮತ್ತು ನನ್ನ ಒಪ್ಪಿಗೆ ಪಡೆಯದೆ ಬಿಜೆಪಿ ಪಟ್ಟಿಯಲ್ಲಿ ನನ್ನ ಹೆಸರು ಪ್ರಕಟಿಸಿದೆ. ಆದರೆ, ನಾನು ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ. ಅಸಲಿಗೆ ನಾನು ಬಿಜೆಪಿ ಸೇರಿಯೇ ಇಲ್ಲ, ಬಿಜೆಪಿಯನ್ನು ಸೇರುವುದೂ ಇಲ್ಲ' ಎಂದು ಸಿಖಾ ಹೇಳಿಕೆ ನೀಡಿದ್ದಾರೆ. ಈ ಟಿಕೆಟ್ ನೀಡಿಕೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಲೇವಡಿ ಮಾಡಲಾಗುತ್ತಿದೆ.

ಚುನಾವಣಾ ಕಣದಲ್ಲಿ...

- ಶಬರಿಮಲೆಗೆ ಎಲ್ಲ ವಯೋಮಾನದ ಮಹಿಳೆಯರ ಪ್ರವೇಶದ ವಿಚಾರವು ಕೇರಳದಲ್ಲಿ ಎಡರಂಗಕ್ಕೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಮಹಿಳೆಯರ ಪ್ರವೇಶದ ವಿಚಾರವು ಈಗ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಹಾಗಾಗಿ, ಈ ಬಗ್ಗೆ ಈಗ ಏನನ್ನೂ ಮಾತನಾಡಬಾರದು ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ
- ಅಸ್ಸಾಂನಲ್ಲಿ ಪಕ್ಷವು ಟಿಕೆಟ್ ನಿರಾಕರಿಸಿದ್ದರಿಂದ ಪಕ್ಷೇತರರಾಗಿ ಚುನಾವಣೆಗೆ ಸ್ಪರ್ಧಿಸಿರುವ 15 ಮುಖಂಡರನ್ನು ಬಿಜೆಪಿ ಆರು ವರ್ಷಗಳಿಗೆ ಅಮಾನತು ಮಾಡಿದೆ. ಅಸ್ಸಾಂ ವಿಧಾನಸಭೆಯ ಮಾಜಿ ಉಪ ಸ್ಪೀಕರ್ ದಿಲೀಪ್ ಕುಮಾರ್ ಕೂಡ ಅಮಾನತಾದವರಲ್ಲಿ ಸೇರಿದ್ದಾರೆ.
- ಪ್ರಸಿದ್ಧ 'ರಾಮಾಯಣ' ಟಿ.ವಿ. ಧಾರಾವಾಹಿಯಲ್ಲಿ ಶ್ರೀರಾಮನ ಪಾತ್ರ ಮಾಡಿದ್ದ ಅರುಣ್ ಗೋವಿಲ್ ಗುರುವಾರ ಬಿಜೆಪಿ ಸೇರಿದ್ದಾರೆ. 'ಜೈ ಶ್ರೀರಾಂ' ಘೋಷಣೆ ಕೂಗಿದರೆ ಮಮತಾ ಬ್ಯಾನರ್ಜಿ ಅವರಿಗೆ 'ಕಿರಿಕಿರಿ' ಅನಿಸುತ್ತಿದೆ. ಹಾಗಾಗಿ ಬಿಜೆಪಿ ಸೇರಿದ್ದಾಗಿ ಗೋವಿಲ್ ಹೇಳಿದ್ದಾರೆ
- ಎಐಎಡಿಎಂಕೆ ಶಾಸಕ ಮತ್ತು ತಮಿಳುನಾಡಿನ ಮಾಜಿ ಸಚಿವ ತೊಪ್ಪು ಎನ್. ವೆಂಕಟಾಚಲಂ ಅವರು ಪೆರುಂದೊರೈ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. 2011 ಮತ್ತು 2016ರಲ್ಲಿ ಈ ಕ್ಷೇತ್ರದಿಂದ ಗೆದ್ದಿದ್ದ ಅವರಿಗೆ ಪಕ್ಷವು ಟಿಕೆಟ್ ನಿರಾಕರಿಸಿತ್ತು

ಜೆಡಿಎಸ್‌ನಿಂದ 'ಮುಸ್ಲಿಂ', ಕಾಂಗ್ರೆಸ್‌ನಿಂದ 'ಅನುಕಂಪ' ಅಸ್ತ್ರ

ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಇಲ್ಲಿಯ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಸೈಯದ್ ಯಸ್ರಬ್ ಅಲಿ ಖಾದ್ರಿ ಅವರಿಗೆ ಟಿಕೆಟ್ ನೀಡಿ ಜೆಡಿಎಸ್ 'ಮುಸ್ಲಿಂ' ಅಸ್ತ್ರ ಪ್ರಯೋಗಿಸಿದೆ. ಶಾಸಕರಾಗಿದ್ದ ದಿ.ಬಿ.ನಾರಾಯಣರಾವ್ ಅವರ ಪತ್ನಿ ಮಲ್ಲಮ್ಮ ಅವರನ್ನು ಕಣಕ್ಕಿಳಿಸಿ ಅನುಕಂಪದ ಅಲೆಯ ಲಾಭ ಪಡೆಯಲು ಕಾಂಗ್ರೆಸ್ ಮುಂದಾಗಿದೆ.

ಏತನ್ಮಧ್ಯೆ, ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, 'ಬಿಜೆಪಿ ಟಿಕೆಟ್ ಸ್ಥಳೀಯರಿಗೇ ಕೊಡಬೇಕು. ಹೊರಗಿನವರಿಗೆ ಟಿಕೆಟ್ ಕೊಡಬಾರದು' ಎಂದು ಒತ್ತಾಯಿಸಿದ್ದಾರೆ.

ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮರಾಠ ಸಮಾಜದ ಮುಖಂಡ, ಮಾಜಿ ಶಾಸಕ ಮಾರುತಿರಾವ ಮುಳೆ ಬಂಡಾಯದ ಮುನ್ಸೂಚನೆ ನೀಡಿದ್ದಾರೆ. 'ನಾನೂ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಶರದ್ ಪವಾರ್ ನೇತೃತ್ವದ ಎನ್‌ಸಿಪಿಯಿಂದ ಕಣಕ್ಕಿಳಿಯುತ್ತೇನೆ' ಎಂದು ಅವರು ಹೇಳಿದ್ದಾರೆ.

ಈ ಕ್ಷೇತ್ರದಲ್ಲಿ ಮುಸ್ಲಿಂ ಮತದಾರರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಮುಸ್ಲಿಂ ಅಭ್ಯರ್ಥಿಯನ್ನೇ ಕಣಕ್ಕಿಳಿಸಲು ನಿರ್ಧರಿಸಿ ನಾಲ್ಕು ದಿನಗಳ ಹಿಂದೆ ವೀಕ್ಷಕರನ್ನು ಬಸವಕಲ್ಯಾಣಕ್ಕೆ ಕಳಿಸಿದ್ದರು. ವೀಕ್ಷಕರು ವರದಿ ಸಲ್ಲಿಸಿದ ನಂತರ ಟಿಕೆಟ್ ಕೊಡಲು ಸೈಯದ್ ಯಸ್ರಬ್ ಅಲಿ ಖಾದ್ರಿ ಅವರನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದರು.

ಖಾದ್ರಿ ಅವರು ಲಾರಿ ಉದ್ಯಮ, ಪೆಟ್ರೋಲ್ ಬಂಕ್ ಹೊಂದಿದ್ದಾರೆ. ಪ್ರಗತಿಪರ ಕೃಷಿಕರೂ ಹೌದು. ಬಸವಕಲ್ಯಾಣದ ಬಡೇಶಾ ದರ್ಗಾದ ಮುಖ್ಯಸ್ಥರಾಗಿರುವ ಅವರು 'ಬಡೇಶಾ ಸಾಹೇಬ್' ಎಂದೇ ಪರಿಚಿತರು.

ಗೆಲುವು ನನ್ನದೇ: 'ಪಕ್ಷಕ್ಕೆ ಸೇರಿದ ತಕ್ಷಣವೇ ಕುಮಾರಸ್ವಾಮಿ ಅವರು ನನ್ನ ಬೇಡಿಕೆ ಈಡೇರಿಸಿದ್ದಾರೆ. ಕಾಂಗ್ರೆಸ್ ಕೇವಲ ಅಲ್ಪಸಂಖ್ಯಾತರ ಮತ ಕೇಳುತ್ತದೆ. ಆದರೆ, ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ' ಎಂದು ಯಸ್ರಬ್ ಅಲಿ ಖಾದ್ರಿ ಹೇಳಿದರು.

'ಬಸವಕಲ್ಯಾಣ ಕ್ಷೇತ್ರದಲ್ಲಿ ಮುಸ್ಲಿಂ ಮತಗಳ ಜತೆಗೆ ಹಿಂದುಳಿದ ವರ್ಗಗಳ, ಪರಿಶಿಷ್ಟ ಸಮುದಾಯದ ಮತ ಪಡೆಯುವೆ. ಈ ಕ್ಷೇತ್ರ ಹಿಂದೆ ಜೆಡಿಎಸ್ ಭದ್ರಕೋಟೆಯಾಗಿತ್ತು. ಅದನ್ನು ಮತ್ತೊಮ್ಮೆ ಸಾಬೀತುಪಡಿಸುವೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಲ್ಲಮ್ಮ ಸಕ್ರಿಯ: ಯಾದಗಿರಿ ಜಿಲ್ಲೆಯ ನಾಲವಾರ ಮೂಲದ ಮಲ್ಲಮ್ಮ ಅವರು ಬಿ.ನಾರಾಯಣರಾವ್ ಅವರನ್ನು ಮದುವೆಯಾದ ನಂತರ ಬೀದರ್ ತಾಲ್ಲೂಕಿನ ಬಸಂತಪುರದಲ್ಲಿ ಸ್ವಲ್ಪ ದಿನ ವಾಸವಾಗಿದ್ದರು.

ಬಿ.ನಾರಾಯಣರಾವ್ 40 ವರ್ಷದಿಂದ ಈ ಕ್ಷೇತ್ರದಲ್ಲಿದ್ದು ಕಾಂಗ್ರೆಸ್‌ನಿಂದ ಮೂರು ಸಲ ಸ್ಪರ್ಧಿಸಿದ್ದರಾದರೂ ಮಲ್ಲಮ್ಮ ಅವರು ರಾಜಕೀಯದಲ್ಲಿ ಕಾಣಿಸಿಕೊಂಡಿರಲಿಲ್ಲ. ಬೆಂಗಳೂರಿನ ಮನೆಯಲ್ಲಿ ವಾಸಿಸುತ್ತಿದ್ದರು. ನಾರಾಯಣರಾವ್ ಅವರ ನಿಧನದ ಬಳಿಕ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ.


ಕನ್ಯಾಕುಮಾರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪೊನ್ ರಾಧಾಕೃಷ್ಣನ್ (ಎಡ) ಮತ್ತು ಕಾಂಗ್ರೆಸ್ ಅಭ್ಯರ್ಥಿ ವಿಜಯ್ ವಸಂತ್ ಅವರು ನಾಮಪತ್ರ ಸಲ್ಲಿಸಿದ ನಂತರ ಪರಸ್ಪರ ನಮಸ್ಕರಿಸಿದರು ಪಿಟಿಐ ಚಿತ್ರ

ಎಫ್‌ಐಆರ್ ರದ್ದುಗೊಳಿಸಲು ಹೈಕೋರ್ಟ್‌ಗೆ ನಾಯ್ಡು ಅರ್ಜಿ


ಪ್ರಜಾವಾಣಿ ವಾರ್ತೆ

ಹೈದರಾಬಾದ್: ಅಮರಾವತಿ ಭೂ ಹಗರಣ ಪ್ರಕರಣದಲ್ಲಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ರದ್ದುಪಡಿಸುವಂತೆ ಮತ್ತು ವಿಚಾರಣೆಗೆ ಹಾಜರಾಗುವಂತೆ ಸಿಐಡಿ ನೀಡಿರುವ ನೋಟಿಸ್ ಪ್ರಶ್ನಿಸಿ ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ಈ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಶುಕ್ರವಾರ ಕೈಗೆತ್ತಿಕೊಳ್ಳಲಿದೆ ಎಂದು ತಿಳಿದುಬಂದಿದೆ.

ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ನಾಯ್ಡು ಅವರಿಗೆ ಮಾರ್ಚ್ 23ರಂದು ವಿಜಯವಾಡದಲ್ಲಿನ ಸಿಐಡಿ ಕಚೇರಿಯಲ್ಲಿ ತನಿಖಾಧಿಕಾರಿ ಎದುರು ಖುದ್ದು ಹಾಜರಾಗುವಂತೆ ಸಿಐಡಿ ಮಂಗಳವಾರ ನೋಟಿಸ್ ನೀಡಿತ್ತು.

ಆಂಧ್ರದ ರಾಜಧಾನಿ ಅಮರಾವತಿ ಪ್ರದೇಶದಲ್ಲಿ ಎಸ್‌ಸಿ, ಎಸ್‌ಟಿಗೆ ಮೀಸಲಾದ ಭೂಮಿಯನ್ನು ಅಂದಿನ ಟಿಡಿಪಿ ಸರ್ಕಾರಕ್ಕೆ ಹತ್ತಿರದ ವ್ಯಕ್ತಿಗಳು ವಂಚನೆಯಿಂದ ಖರೀದಿಸಿದ್ದಾರೆ ಎಂದು ಆರೋಪಿಸಿ ದಾಖಲಿಸಿರುವ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ನಾಯ್ಡು ಅವರಿಗೆ ಈ ಸಮನ್ಸ್ ನೀಡಲಾಗಿದೆ.


ಚಂದ್ರಬಾಬು ನಾಯ್ಡು

ಮಾರ್ಚ್ 12ರಂದು ದಾಖಲಿಸಿರುವ ಎಫ್‌ಐಆರ್‌ನಲ್ಲಿ ನಾಯ್ಡು ಅವರನ್ನು 'ಆರೋಪಿ ನಂಬರ್ 1' ಎಂದು ಉಲ್ಲೇಖಿಸಿದ್ದು, ನಾಯ್ಡು ಮುಖ್ಯಮಂತ್ರಿಯಾಗಿದ್ದಾಗ ಅವರ ಸಂಪುಟದಲ್ಲಿ ಪೌರಾಡಳಿತ ಮತ್ತು ನಗರಾಭಿವೃದ್ಧಿ ಸಚಿವರಾಗಿದ್ದ ಪಿ.ನಾರಾಯಣ ಅವರನ್ನು ಎರಡನೇ ಆರೋಪಿಯಾಗಿ ಹೆಸರಿಸಲಾಗಿದೆ. ನಾಯ್ಡು ಅವರಿಗಿಂತ ಒಂದು ದಿನ ಮೊದಲು ಸಿಐಡಿ ಮುಂದೆ ಹಾಜರಾಗಲು ನಾರಾಯಣ ಅವರಿಗೂ ಇದೇ ರೀತಿಯ ನೋಟಿಸ್ ನೀಡಲಾಗಿದೆ.

'ನೋಟಿಸ್‌ನಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ವಿಚಾರಣೆಗೆ ಹಾಜರಾಗದಿದ್ದರೆ, ಸಿಆರ್‌ಪಿಸಿಯ ಸೆಕ್ಷನ್ 41 (3) ಮತ್ತು (4)ರ ಅಡಿಯಲ್ಲಿ ಬಂಧಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಲಾಗಿದೆ.

ವಲಸಿಗರಿಗೆ ಕಾಂಗ್ರೆಸ್, ಜೆಡಿಎಸ್ ಮಣೆ

ಒಂದನೇ ಪುಟದಿಂದ

ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಶನಿವಾರ ಬೆಂಗಳೂರಿಗೆ ಬರಲಿದ್ದು, ಆ ಬಳಿಕ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಗೆ ಚಾಲನೆ ಸಿಗಲಿದೆ.

ಬಸವಕಲ್ಯಾಣ ಕ್ಷೇತ್ರದಲ್ಲಿ ಶಾಸಕರಾಗಿದ್ದ ದಿವಂಗತ ನಾರಾಯಣರಾವ್ ಅವರ ಪತ್ನಿ ಮಲ್ಲಮ್ಮ ಅವರಿಗೆ ಟಿಕೆಟ್ ನೀಡಲಾಗಿದೆ. ಇತ್ತೀಚೆಗಷ್ಟೇ ಬಿಜೆಪಿ ತೊರೆದು ಪಕ್ಷ ಸೇರಿದ್ದ ಬಸವನಗೌಡ ತುರವೀಹಾಳ ಅವರನ್ನು ಮಸ್ಕಿ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಘೋಷಿಸಲಾಗಿದೆ.

2018ರಲ್ಲಿ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರತಾಪಗೌಡ ಪಾಟೀಲ (ಇವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರ್ಪಡೆಯಾಗಿದ್ದಾರೆ) ವಿರುದ್ಧ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಸವನಗೌಡ ಅಲ್ಪ ಮತಗಳ ಅಂತರದಿಂದ ಸೋಲನುಭವಿಸಿದ್ದರು.

ಬಸವಕಲ್ಯಾಣ ಮತ್ತು ಮಸ್ಕಿ ಕ್ಷೇತ್ರದ ಉಪಚುನಾವಣೆಗೆ ಏಪ್ರಿಲ್ 17ರಂದು ಮತದಾನ ನಡೆಯಲಿದೆ. ಚುನಾವಣೆ ದಿನಾಂಕ ಘೋಷಣೆಯಾಗದ ಸಿಂದಗಿ ಕ್ಷೇತ್ರಕ್ಕೂ ಕಾಂಗ್ರೆಸ್ ಅಭ್ಯರ್ಥಿಯನ್ನು ಘೋಷಿಸಿದೆ. ಎಂ.ಸಿ. ಮನಗೂಳಿ ಅವರು ಕಣಕ್ಕಿಳಿಯಲಿದ್ದಾರೆ.

ಜೆಡಿಎಸ್‌ನಿಂದ ಖಾದ್ರಿ: ಬಸವ ಕಲ್ಯಾಣ ಕ್ಷೇತ್ರದ ಅಭ್ಯರ್ಥಿಯಾಗಿ ಸೈಯದ್ ಯಸ್ರಬ್ ಅಲಿ ಖಾದ್ರಿ ಅವರನ್ನು ಕಣಕ್ಕೆ ಇಳಿಸುವುದಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ಉಪಚುನಾವಣೆಯನ್ನು ನಾವು ಲಘುವಾಗಿ ಪರಿಗಣಿಸಿಲ್ಲ. ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತೇವೆ' ಎಂದು ಹೇಳಿದರು.

'ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ ಕೂಡಲೇ, ಬಿಜೆಪಿಗೆ ಅನುಕೂಲವಾಗುವಂತೆ ಜೆಡಿಎಸ್ ನಡೆದುಕೊಂಡಿದೆ ಎಂದು ಕಾಂಗ್ರೆಸ್ ನಾಯಕರು ನಾಳೆಯಿಂದಲೇ ಟೀಕೆ ಆರಂಭಿಸುತ್ತಾರೆ. ಎರಡೂ ರಾಷ್ಟ್ರೀಯ ಪಕ್ಷಗಳ ಜತೆಗೂ ಸಮಾನ ಅಂತರ ಕಾಯ್ದುಕೊಂಡು ಗೆಲ್ಲಲೇಬೇಕೆಂದು ಕೊನೆಯವರೆಗೂ ಪ್ರಯತ್ನ ಮಾಡುತ್ತೇವೆ' ಎಂದೂ ಅವರು ಹೇಳಿದರು.

ಉಪಚುನಾವಣೆ: 'ಕೈ' ನಾಯಕರ ಸಭೆ 20ರಂದು

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರ ಮತ್ತು ಬಸವ ಕಲ್ಯಾಣ, ಮಸ್ಕಿ ವಿಧಾನಸಭೆ ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆ ಕುರಿತು ಚರ್ಚಿಸಲು ಕಾಂಗ್ರೆಸ್ ಹಿರಿಯ ಮುಖಂಡರ ಸಭೆ ಶನಿವಾರ (ಮಾರ್ಚ್ 20) ಬೆಳಿಗ್ಗೆ 11 ಗಂಟೆಗೆ ಕೆಪಿಸಿಸಿ ಕಚೇರಿಯಲ್ಲಿ ನಡೆಯಲಿದೆ.

ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರು ಮತ್ತು ಎಐಸಿಸಿ ವೀಕ್ಷಕರು ಭಾಗವಹಿಸಲಿದ್ದಾರೆ.

'ಉಪ ಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಉಸ್ತುವಾರಿ ವಹಿಸಿರುವ ಪಕ್ಷದ ಮುಖಂಡರು, ಮಾಜಿ ಸಚಿವರು, ಶಾಸಕರು, ಸಂಸದರನ್ನು ಸಭೆಗೆ ಆಹ್ವಾನಿಸಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಚುನಾವಣೆಯಿಂದ ಹಿಂದೆ ಸರಿಯಲು ತಂದೆ ನಕಾರ: ಮಗಳ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಲಖನೌ: ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ನಿರ್ಧಾರ ಕೈಬಿಡಲು ವ್ಯಕ್ತಿ ನಿರಾಕರಿಸಿದ್ದರಿಂದ, ಅವರ 16 ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿರುವ ಕೃತ್ಯ ಇಲ್ಲಿಗೆ 40 ಕಿ.ಮೀ ದೂರದ ಬಾರಾಬಂಕಿ ಜಿಲ್ಲೆಯ ಜೈದ್‌ಪುರ ವಲಯದಲ್ಲಿ ನಡೆದಿದೆ.

ಪೊಲೀಸರ ಪ್ರಕಾರ, ಬಾಲಕಿಯು ಶಾಲೆಯಿಂದ ಬರುವಾಗ ನಾಲ್ವರು ಯುವಕರು ಬಾಲಕಿಯನ್ನು ಅಪಹರಿಸಿ ಕೃತ್ಯ ಎಸಗಿದ್ದು, ಬಳಿಕ ಮನೆಯ ಸಮೀಪ ಬಿಟ್ಟು ಹೋಗಿದ್ದಾರೆ. ಶಂಕಿತ ಆರೋಪಿಗಳು ಬಾಲಕಿ ತಂದೆಯ ವಿರುದ್ಧ ಪ್ರತಿಸ್ಪರ್ಧಿಯಾಗಿದ್ದವನ ಬೆಂಬಲಿಗರು ಎನ್ನಲಾಗಿದೆ.

'ಪ್ರತಿಸ್ಪರ್ಧಿ ನನಗೆ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರ ಕೈಬಿಡಲು ಒತ್ತಡ ಹೇರುತ್ತಿದ್ದ. ಇದಕ್ಕಾಗಿ ಹಣದ ಆಮಿಷವನ್ನು ಒಡ್ಡಲಾಗಿತ್ತು. ನಾನು ಒಪ್ಪಿರಲಿಲ್ಲ. ಸ್ಪಂದಿಸದ ಕಾರಣ ಮಗಳ ಮೇಲೆ ಕೃತ್ಯ ಎಸಗಲಾಗಿದೆ' ಎಂದು ಬಾಲಕಿಯ ತಂದೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಪಂಚಾಯಿತಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ದಿನಾಂಕ ನಿಗದಿಯಾಗಿರಲಿಲ್ಲ. ಶೀಘ್ರದಲ್ಲಿಯೇ ನಡೆಯುವ ಸಂಭವವಿತ್ತು. ಶಂಕಿತ ನಾಲ್ವರು ಯುವಕರು ತಲೆಮರೆಸಿಕೊಂಡಿದ್ದಾರೆ. ಅವರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾಂತ್ರಿಕ ದೋಷ: ಹಿಮ್ಮುಖ ಚಲಿಸಿದ ಜನಶತಾಬ್ದಿ ರೈಲು

ನವದೆಹಲಿ: ಉತ್ತರಾಖಂಡದ ತನಕ್‌ಪುರ್ ಜಿಲ್ಲೆಗೆ ಹೊರಟಿದ್ದ ಪೂರ್ಣಗಿರಿ ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲು ತಾಂತ್ರಿಕ ದೋಷದಿಂದಾಗಿ 30 ಕಿ.ಮೀ. ದೂರದವರೆಗೆ ಹಿಮ್ಮುಖವಾಗಿ ಚಲಿಸಿದ ಘಟನೆ ಬುಧವಾರ ನಡೆದಿದೆ.

ಹಳಿಯ ಮೇಲೆ ಹೊರಟಿದ್ದ ಹಸುಗಳಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಮುಂದಾದಾಗ ತಾಂತ್ರಿಕ ದೋಷ ಕಂಡುಬಂದಿದೆ. ರೈಲಿನ ಎಂಜಿನ್ ಮೇಲಿನ ಚಾಲಕನ ನಿಯಂತ್ರಣ ತಪ್ಪಿದ್ದರಿಂದ ರೈಲು ಹಿಮ್ಮುಖವಾಗಿ ಚಲಿಸಿದೆ ಎಂದು ರೈಲ್ವೆ ಇಲಾಖೆಯ ವರದಿ ತಿಳಿಸಿದೆ.

ಕೆಲವು ಪ್ರಯಾಣಿಕರು ತುರ್ತು ಸರಪಳಿ ಎಳೆದರೂ ರೈಲು ನಿಲುಗಡೆಯಾಗಲಿಲ್ಲ. ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ತಕ್ಷಣವೇ ಸಮೀಪದ ನಿಲ್ದಾಣಗಳಿಗೆ ಸಂದೇಶ ಕಳುಹಿಸಲಾಯಿತು. ಎಲ್ಲ ಕ್ರಾಸಿಂಗ್ ಗೇಟ್‌ಗಳನ್ನು ಮುಚ್ಚಿದ್ದರಿಂದ ಯಾವುದೇ ಅನಾಹುತ ಸಂಭವಿಸಲಿಲ್ಲ. ಖಾಟಿಮಾ ರೈಲು ನಿಲ್ದಾಣದಲ್ಲಿ ರೈಲನ್ನು ನಿಲುಗಡೆ ಮಾಡಲಾಯಿತು. ರೈಲಿನಲ್ಲಿದ್ದ 25 ಮಂದಿ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ. ಎಲ್ಲ ಪ್ರಯಾಣಿಕರನ್ನು ಖಾಟಿಮಾದಿಂದ ಬಸ್ ಮೂಲಕ ತನಕ್‌ಪುರಕ್ಕೆ ಕಳುಹಿಸಲಾಯಿತು ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಘಟನೆ ಕುರಿತು ತನಿಖೆಗೆ ಆದೇಶಿಸಲಾಗಿದೆ. ರೈಲ್ವೆ ಬೋಗಿಗಳ ನಡುವಿನ ವಾಯು ಒತ್ತಡದ ಪೈಪ್ ಹಾನಿಗೊಳಗಾಗಿದ್ದು ಮತ್ತು ಸೋರಿಕೆಯಾಗಿದ್ದರಿಂದ ಬ್ರೇಕ್ ವ್ಯವಸ್ಥೆ ವಿಫಲವಾಗಲು ಕಾರಣ ಎಂದು ಹೇಳಲಾಗಿದೆ.

ಸಿನಿಮಾ ಪುರವಣಿ





‘ಸರ್ವಂ’ ಚಿತ್ರದಲ್ಲಿ ರಾಜ್ ಪ್ರಭು, ಅಕ್ಷಿತಾ ನಾಗರಾಜ್

ಏನಿದು ಒಂದು ಗಂಟೆಯ ಕಥೆ?

‘ಒಂದು ಗಂಟೆಯ ಕಥೆ’ ಚಿತ್ರದ ದೃಶ್ಯ

ದೇಶದಲ್ಲಿ ಸಂಚಲನ ಸೃಷ್ಟಿಸಿ ಸುದ್ದಿಯಾದ ಘಟನೆಯೊಂದರ ಸುತ್ತ ಹೆಣೆದದ್ದೇ ‘ಒಂದು ಗಂಟೆಯ ಕಥೆ’.

ಭಿನ್ನ ಶೀರ್ಷಿಕೆಯ ಕಾರಣದಿಂದಲೇ ಗಮನ ಸೆಳೆಯುವ ಹಲವು ಸಿನಿಮಾಗಳು ಈಗಾಗಲೇ ಚಂದನವನದಲ್ಲಿ ಬಿಡುಗಡೆ ಕಂಡಿವೆ. ಕುತೂಹಲ ಹುಟ್ಟಿಸುವ ಟೈಟಲ್ ಮೂಲಕ ಸಿನಿ ಪ್ರೇಕ್ಷಕರನ್ನು ಚಿತ್ರಮಂದಿರದ ಕಡೆಗೆ ಸೆಳೆಯುವ ಪ್ರಯತ್ನವೂ ಇದು ಎಂದು ಹೇಳಬಹುದು. ಈಗ ಈ ಸಾಲಿಗೆ ಇನ್ನೊಂದು ಹೊಸ ಸಿನಿಮಾ ಸೇರ್ಪಡೆಯಾಗುತ್ತಿದೆ. ಸಿನಿಮಾದ ಹೆಸರು ‘ಒಂದು ಗಂಟೆಯ ಕಥೆ’. ಈ ಸಿನಿಮಾ ಇಂದು ಬಿಡುಗಡೆಯಾಗಿದೆ.


‘ಮತ್ತೆ ಮುಂಗಾರು’, ‘ಗುಣ’ ಸಿನಿಮಾಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದ ದ್ವಾರ್ಕಿ ರಾಘವ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. 8 ವರ್ಷಗಳ ನಂತರ ಒಂದು ಗಂಟೆಯ ಕಥೆಯ ಮೂಲಕ ಅವರು ಸಿನಿರಂಗಕ್ಕೆ ಮರಳಿದ್ದಾರೆ. ಹಿಂದೆ ಕನ್ನಡ ಕಿರುತೆರೆ ಹಾಗೂ ಹಿರಿತೆರೆಗಳಲ್ಲಿ ನಟಿಸಿದ್ದ ಅಜಯ್‌ರಾಜ್ ಈ ಚಿತ್ರಕ್ಕೆ ನಾಯಕ. ಶನಾಯ ಕಾಟ್ವೆ ಚಿತ್ರದ ನಾಯಕಿ.

ಅಜಯ್‌ರಾವ್ ಸದ್ಯ ಚೆನ್ನೈನಲ್ಲಿ ನೆಲೆಸಿದ್ದಾರೆ. ಕಮಲ್‌ಹಾಸನ್ ನಟನೆಯ ‘ಉತ್ತಮ ವಿಲನ್’ ಚಿತ್ರದಲ್ಲಿ ಇವರು ನಟಿಸಿದ್ದಾರೆ. ವೆಟ್ರಿಮಾರನ್ ಅವರ ಸಿನಿಮಾದಲ್ಲೂ ನಟಿಸಿರುವ ಇವರು ಸದ್ಯ ಎರಡು ತಮಿಳು ಚಿತ್ರಗಳಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ.

ಈ ಸಿನಿಮಾದ ಬಗ್ಗೆ ಮಾತನಾಡಿದ ನಾಯಕಿ ಶನಾಯ ‘ಈ ಸಿನಿಮಾ ನನ್ನ ಸಿನಿವೃತ್ತಿಗೆ ಒಂದು ಒಳ್ಳೆಯ ಚಿತ್ರ ಆಗಲಿದೆ ಎಂದು ನಂಬಿದ್ದೇನೆ’ ಎಂದಿದ್ದಾರೆ. ಇದು ನೈಜ ಘಟನೆ ಆಧಾರಿತ ಸಿನಿಮಾ. ದೇಶದಲ್ಲಿ ಸಂಚಲನವನ್ನು ಉಂಟು ಮಾಡಿದ ಘಟನೆಯಿದು. ಪ್ರೇಮಿಯ ಖಾಸಗಿ ಭಾಗವನ್ನು ಕತ್ತರಿಸಿದ ಪ್ರೇಯಸಿಯ ಕಥೆ ಇದು ಎನ್ನಿಸುತ್ತದೆ. ಕಿರುತೆರೆಯ ಹಲವು ಪ್ರತಿಭೆಗಳು ಈ ಸಿನಿಮಾದಲ್ಲಿ ನಟಿಸಿರುವುದು ವಿಶೇಷ.

ಸಂಪೂರ್ಣ ಹಾಸ್ಯಮಯ ಚಿತ್ರ ಇದಾಗಿದ್ದು ಪ್ರೇಕ್ಷಕರಿಗೆ ಮನರಂಜನೆ ನೀಡಲಿದೆ ಎಂದಿದೆ ಚಿತ್ರತಂಡ. ಈ ಚಿತ್ರದ ಟ್ರೇಲರ್ ಕೂಡ ಬಿಡುಗಡೆಯಾಗಿದ್ದು ಕಚಗುಳಿ ಇಡುವ ಡೈಲಾಗ್‌ಗಳ ಮೂಲಕ ಗಮನ ಸೆಳೆದಿದೆ. ಟ್ರೇಲರ್ ತುಂಬಾ ದ್ವಂದ್ವಾರ್ಥದ ಸಂಭಾಷಣೆಗಳೇ ತುಂಬಿವೆ. ಆದರೆ, ‘ಚಿತ್ರ ಹಾಗಿಲ್ಲ, ಈ ಚಿತ್ರದಿಂದ ಸಮಾಜಕ್ಕೆ ಒಂದು ಉತ್ತಮ ಸಂದೇಶವಿದೆ’ ಎನ್ನುತ್ತದೆ ಚಿತ್ರತಂಡ.

ರಿಯಲ್ ವೆಲ್ತ್ ವೆಂಚರ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕಶ್ಯಪ್ ದಾಕೋಜು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ದುಶ್ಯಂತ್ ಹಾಗೂ ಶ್ವೇತಾ ದಾಕೋಜು ಈ ಚಿತ್ರದ ಸಹ ನಿರ್ಮಾಪಕರು. ಡೆನಿಸ್ ವಲ್ಲಭನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖



ಅಜಯ್ ರಾಜ್

ಮೊದಲ ಹಂತದ ಚಿತ್ರೀಕರಣ ಮುಗಿಸಿದ ‘ಸರ್ವಂ’

ಕೃಷ್ಣ ಕಂಬೈನ್ಸ್ ಹಾಗೂ ಉದಯ ಆರ್ಟ್ಸ್ ಲಾಂಛನದಲ್ಲಿ ಸುರೇಶ್ ಕಣ್ಣ ಹಾಗೂ ಕೆ.ಎಂ. ಕೃಷ್ಣ ದೊಡ್ಡಿ ನಿರ್ಮಿಸುತ್ತಿರುವ ‘ಸರ್ವಂ’ ಚಿತ್ರದ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ಒಂದು ಹಾಡು, ಒಂದು ಸಾಹಸ ಸನ್ನಿವೇಶ ಹಾಗೂ ಮಾತಿನ ಭಾಗದ ಚಿತ್ರೀಕರಣ ಮೊದಲ ಹಂತದಲ್ಲಿ ನಡೆದಿದೆ. ಅಫ್ಜಲ್ (ನಮ್ಮ ಸೂಪರ್ ಸ್ಟಾರ್) ಅವರು ಈ ಚಿತ್ರದ ಸಹ ನಿರ್ಮಾಪಕರು.
ಚಿತ್ರೀಕರಣಕ್ಕಾಗಿ ಬೆಂಗಳೂರಿನ ಜಿಗಣಿ ಬಳಿ ಅದ್ದೂರಿ ಸೆಟ್ ಹಾಕಲಾಗಿತ್ತು.
ಎರಡನೇ ಹಂತದ ಚಿತ್ರೀಕರಣ ಪಾಂಡಿಚೇರಿ, ಮಂಗಳೂರು, ಗೋವಾದಲ್ಲಿ ನಡೆಯಲಿದೆ. ಮುಂದಿನವಾರದಿಂದ ಚಿತ್ರೀಕರಣ ಆರಂಭವಾಗಲಿದೆ. ಒಟ್ಟು ನಾಲ್ಕು ಹಂತದಲ್ಲಿ ಈ ಚಿತ್ರದ ಚಿತ್ರೀಕರಣ ನಡೆಯಲಿದೆ.
ಕಲಾವಿದನಾಗಿ ‘ಅನಕ್ಷ’, ‘ಮೋಂಬತ್ತಿ’, ‘ತಮಸ್’ ಹಾಗೂ ‘ಛಾಯಾ’ ಚಿತ್ರಗಳಲ್ಲಿ ಅಭಿನಯಿಸಿರುವ ರಾಜ್ ಪ್ರಭು ಈ ಚಿತ್ರದ ನಾಯಕನಾಗಿ ಅಭಿನಯಿಸಿದ್ದಾರೆ. ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸಾಕಷ್ಟು ಜಾಹೀರಾತುಗಳನ್ನು ನಿರ್ದೇಶಿಸಿರುವ ರಾಜ್ ಪ್ರಭು ಅವರಿಗೆ ಹಿರಿತೆರೆಯಲ್ಲಿ ಇದು ಮೊದಲ ನಿರ್ದೇಶನದ ಚಿತ್ರ.

ನಿರ್ದೇಶಕರೇ ‘ಸರ್ವಂ’ ಗೆ ಕಥೆ, ಚಿತ್ರಕಥೆ ಬರೆದಿದ್ದಾರೆ. ರಾಜರತ್ನ ಬರೆಯುವುದರ ಜೊತೆಗೆ ಸಹ ನಿರ್ದೇಶನವನ್ನು ಮಾಡಿದ್ದಾರೆ.
ನಾಲ್ಕು ಹಾಡುಗಳಿರುವ ಚಿತ್ರಕ್ಕೆ ಕೌಶಿಕ್ ಹರ್ಷ ಸಂಗೀತ ನೀಡುತ್ತಿದ್ದಾರೆ. ಶ್ಯಾಂ ಸಿಂಧನೂರು ಛಾಯಾಗ್ರಹಣ, ಕೆ.ಬಿ.ಕೆ ಫಯಾಜ್ ಖಾನ್ ಸಾಹಸ ನಿರ್ದೇಶನ ಹಾಗೂ ಜಗ್ಗು ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.
ರಾಜ್ ಪ್ರಭು ಅವರಿಗೆ ನಾಯಕಿಯಾಗಿ ಅಕ್ಷಿತಾ ನಾಗರಾಜ್ ನಟಿಸಿದ್ದಾರೆ. ಧಾರಾ ಪರೇಕ್, ಅಫ್ಜಲ್, ರವಿ, ಕನ್ನಡ ರಾಜು, ಸ್ಮೈಲ್ ಶಿವು ತಾರಾಬಳಗದಲ್ಲಿದ್ದಾರೆ. ❖

‘ವೇಷ’ ಚಿತ್ರೀಕರಣ ಮುಕ್ತಾಯ

ಹಂಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ರಾಘು ಡಿ.ಜಿ ಅವರು ನಿರ್ಮಿಸುತ್ತಿರುವ ‘ವೇಷ’ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಸದ್ಯದಲ್ಲೇ ಮಾತಿನ ಜೋಡಣೆ ಆರಂಭವಾಗಲಿದೆ. ಜುಲೈ ವೇಳೆಗೆ ಚಿತ್ರ ತೆರೆಗೆ ಬರಲಿದೆ. ಚಿಕ್ಕಮಗಳೂರು, ತೀರ್ಥಹಳ್ಳಿ, ಶಿವಮೊಗ್ಗ, ಕುಂದಾಪುರ ಹಾಗೂ ಆಗುಂಬೆಯ ಸುಂದರ ಸ್ಥಳಗಳಲ್ಲಿ ‘ವೇಷ’ದ ಚಿತ್ರೀಕರಣ ನಡೆದಿದೆ.

ಕನ್ನಡದ ಕೆಲವು ನಿರ್ದೇಶಕರ ಜೊತೆ ಕಾರ್ಯನಿರ್ವಹಿಸಿರುವ ಹಾಗೂ ಕೆಲವು ಕಿರುಚಿತ್ರಗಳನ್ನು ನಿರ್ದೇಶಿಸಿರುವ ಕೃಷ್ಣ ಈ ಚಿತ್ರದ ನಿರ್ದೇಶಕರು. ಕುತೂಹಲ ಹಾಗೂ ಕೌಟುಂಬಿಕ ಕಥಾಹಂದರ ಹೊಂದಿರುವ ‘ವೇಷ’ಕ್ಕೆ ನಿರ್ದೇಶಕರೆ ಕಥೆ, ಚಿತ್ರಕಥೆ ಬರೆದಿದ್ದಾರೆ.

ಚಿತ್ರಕ್ಕೆ ಉತ್ತಮ್ ಸಾರಂಗ್ ಸಂಗೀತ ನೀಡಿದ್ದಾರೆ. ಸುರೇಂದ್ರ ಪಣಿಯೂರ್ ಛಾಯಾಗ್ರಹಣ, ಸನತ್ ಉಪ್ಪುಂದ ಸಂಕಲನ ಹಾಗೂ ಜಾಗ್ವಾರ್ ಸಣ್ಣಪ್ಪ ಅವರು ಸಾಹಸ ನಿರ್ದೇಶನದೆ. ಸಂಭಾಷಣೆಯನ್ನು ಪವನ್ ಕುಮಾರ್ ಬರೆದಿದ್ದಾರೆ.

ರಘು ನಾಯಕ. ನಾಯಕಿ ಸೌಖ್ಯ ಗೌಡ. ನಿಧಿ ಮಾರೊಲಿ ಮಂಜು ಪಾವಗಡ, ಪ್ರಿಯಾಂಕ ಕಾಮತ್, ವಾಣಿಶ್ರೀ, ಜಯ್ ಶೆಟ್ಟಿ, ಶಿಲ್ಪ ಕುಮಟಾ ತಾರಾಬಳಗದಲ್ಲಿದ್ದಾರೆ. ❖

ಸೆಟ್ಟೇರಿದೆ ರಣವ್ಯೂಹ



1980ರ ದಶಕದಲ್ಲಿ ಅಂಬರೀಷ್, ಅಂಬಿಕಾ ಅಭಿನಯದಲ್ಲಿ ‘ಚಕ್ರವ್ಯೂಹ’ ಚಿತ್ರವು ಭರ್ಜರಿ ದಾಖಲೆ ಮಾಡಿತ್ತು. ಈಗ ಹೊಸಬರೇ ಸೇರಿಕೊಂಡು ‘ರಣವ್ಯೂಹ’ ಸಿನಿಮಾವನ್ನು ಸಿದ್ಧಪಡಿಸುತ್ತಿದ್ದಾರೆ.

ಹಾಗಂತ ಆ ಚಿತ್ರಕ್ಕೂ ಇದಕ್ಕೂ ಸಂಬಂಧವಿಲ್ಲ. ಶ್ರೀಶಿರಡಿ ಸಾಯಿ ಮೂವೀಸ್ ಮತ್ತು ಮೈ ಮೂವಿ ಮೇಕರ್ ಪ್ರೊಡಕ್ಷನ್ಸ್‌ದಲ್ಲಿ ಎಂ.ಜಿ. ವೇಣುಕುಮಾರ್ ಹಾಗೂ ರೋಹನ್ ಪ್ರದೀಪ್ ಮೆಂಡೋನ್ಸಾ ಜಂಟಿಯಾಗಿ ಬಂಡವಾಳ ಹೂಡುತ್ತಿದ್ದಾರೆ. ಎಸ್. ಶಂಕರ್ ಚಿತ್ರದ ನಿರ್ದೇಶಕರು.

ಶುಕ್ರವಾರ ಚಿತ್ರದ ಮಹೂರ್ತ ನಡೆಯಿತು. ಸಮಾಜ ವಿದ್ರೋಹಕ ಚಟುವಟಿಕೆಗಳ ಮೇಲೆ ಸಿನಿಮಾ ಮಾಡಲಾಗುತ್ತಿದೆ. ವಿನಯ್‌ಕುಮಾರ್ ಕತೆಯನ್ನು ಬರೆದಿದ್ದಾರೆ ಎಂದಿದೆ ಚಿತ್ರತಂಡ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಪರಿಹರಿಸಬಹುದಾದ ಸಂಗತಿಯಾದರೆ ಚಿಂತಿಸುವ ಅಗತ್ಯವಿಲ್ಲ; ಪರಿಹರಿಸಲು ಅಸಾಧ್ಯವಾದುದಾದರೆ ಅದಕ್ಕಾಗಿ ಚಿಂತಿಸುವುದರಿಂದ ಪ್ರಯೋಜನವಿಲ್ಲ.

–ದಲೈಲಾಮ

ಕೊರೊನಾ ನಿಯಂತ್ರಣ: ಗೊಂದಲ ಬದಿಗಿರಿಸಿ ಸರ್ಕಾರ ಸ್ಪಷ್ಟ ನಿಲುವು ತಳೆಯಲಿ

ಇಡೀ ಜಗತ್ತು ತತ್ತರಿಸುವಂತೆ ಮಾಡಿರುವ ಕೊರೊನಾ ಸೋಂಕಿತರ ಸಂಖ್ಯೆ ರಾಜ್ಯದಲ್ಲಿ, ದೇಶದಲ್ಲಿ ಮತ್ತೆ ಏರಿಕೆ ಕಾಣುತ್ತಿದೆ. ಸೋಂಕು ಹರಡುವಿಕೆಯು ಇನ್ನಷ್ಟು ಹೆಚ್ಚುವುದನ್ನು ತಡೆಯುವುದಕ್ಕಾಗಿ ದೇಶದ ಕೆಲವು ಸ್ಥಳಗಳಲ್ಲಿ ಲಾಕ್‌ಡೌನ್ ಮತ್ತು ಕರ್ಫ್ಯೂ ವಿಧಿಸಲಾಗಿದೆ. ಕರ್ನಾಟಕದಲ್ಲಿ ಸದ್ಯಕ್ಕೆ ಲಾಕ್‌ಡೌನ್ ಮತ್ತು ಕರ್ಫ್ಯೂ ಹೇರಿಕೆ ಇಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಅಂದರೆ, ಇಲ್ಲಿನ ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ ಎಂಬುದು ಇದರ ಅರ್ಥವಲ್ಲ. ಬುಧವಾರ 1,275 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದು, ಕಳೆದ ಮೂರು ತಿಂಗಳ ಗರಿಷ್ಠ ಸಂಖ್ಯೆ. ಈಗ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿ ದಾಟಿದೆ. ಮೂರು ವಾರಗಳಿಂದ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ. ಸೋಂಕು ಏರಿಕೆ ಹೀಗೇ ಮುಂದುವರಿದರೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ವಿಚಾರಣೆ ಕೈಗೆತ್ತಿಕೊಳ್ಳಲಾಗುವುದು ಎಂದು ಹೈಕೋರ್ಟ್‌ನ ವಿಭಾಗೀಯ ಪೀಠ ಎಚ್ಚರಿಸಿದೆ. ಸೋಂಕು ಇನ್ನಷ್ಟು ವ್ಯಾಪಕವಾಗಿ ಹರಡುವುದನ್ನು ತಡೆಯಲು ರಾಜ್ಯ ಸರ್ಕಾರವು ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಮತ್ತೆ ಪ್ರಕಟಿಸಿದೆ. ಮದುವೆ, ಜನ್ಮದಿನ ಆಚರಣೆ ಸಹಿತ ಎಲ್ಲ ರೀತಿಯ ಒಳಾಂಗಣ ಕಾರ್ಯಕ್ರಮಗಳಿಗೆ ನಿರ್ಬಂಧಗಳನ್ನು ವಿಧಿಸಲಾಗಿದೆ. ‘ಸಭಾಂಗಣಗಳ ಒಳಗೆ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರ ಸಂಖ್ಯೆಗೆ ಮಿತಿ ಹೇರಲಾಗಿದೆ; ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು. ಆದರೆ ಹೊರಾಂಗಣ ಕಾರ್ಯಕ್ರಮಗಳಿಗೆ ನಿರ್ಬಂಧ ಇಲ್ಲ’ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಲಾಕ್‌ಡೌನ್ ಹೇರದೇ ಇರುವ ಸರ್ಕಾರದ ನಿರ್ಧಾರ ಸರಿಯಾಗಿಯೇ ಇದೆ. ಆದರೆ, ಒಳಾಂಗಣದಲ್ಲಿ ನಡೆಯುವ ಸಭೆ, ಸಮಾರಂಭಗಳಿಗೆ ಒಂದು ನೀತಿ ಮತ್ತು ಹೊರಾಂಗಣದಲ್ಲಿ ನಡೆಯುವ ಸಭೆ, ಸಮಾರಂಭಗಳಿಗೆ ಇನ್ನೊಂದು ನೀತಿಯು ಸರ್ಕಾರದ ಗೊಂದಲವನ್ನು ಸೂಚಿಸುವುದಿಲ್ಲವೇ?



ಕೋವಿಡ್ ಲಸಿಕೆ ನೀಡುವ ವಿಚಾರದಲ್ಲಿ ಸರ್ಕಾರ ಇನ್ನಷ್ಟು ಚುರುಕಾಗಿ ಕೆಲಸ ಮಾಡಬೇಕಾಗಿದೆ. ಲಸಿಕೆ ಹಾಕಿಸಿಕೊಳ್ಳುವುದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾದ ತುರ್ತು ಅಗತ್ಯವೂ ಇದೆ

ಈಗ ಜಾತ್ರೆಗಳ ಸಮಯ. ಜಾತ್ರೆಗಳಲ್ಲಿ ಸಾವಿರಾರು, ಕೆಲವೆಡೆ ಲಕ್ಷಾಂತರ ಜನ ಸೇರುತ್ತಾರೆ. ಜಾತ್ರೆಗಳಲ್ಲಿ ಜನರು ಸಂಭ್ರಮದ ಗುಂಗಿನಲ್ಲಿ ಇರುತ್ತಾರೆ. ಹಾಗಾಗಿ, ಕೋವಿಡ್ ಮಾರ್ಗಸೂಚಿಗಳ ಪಾಲನೆಗೆ ಸಂಬಂಧಿಸಿ ಜನರು ನಿರ್ಲಕ್ಷ್ಯ ತೋರುವ ಸಾಧ್ಯತೆ ಹೆಚ್ಚು. ಕೋವಿಡ್ ಹರಡುವುದನ್ನು ತಡೆಯುವುದರ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ಬುಧವಾರ ವಿಡಿಯೊ ಸಂವಾದ ನಡೆಸಿದ್ದಾರೆ. ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ಸೋಂಕು ವ್ಯಾಪಿಸುವುದನ್ನು ಗಮನಕ್ಕೆ ತಂದು ಎಚ್ಚರಿಸಿದ್ದಾರೆ. ಈ ನಗರಗಳಿಂದ ಸೋಂಕು ಹಳ್ಳಿಗಳಿಗೆ ವ್ಯಾಪಿಸುವುದು ಸುಲಭ ಎಂಬ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ. ಕೋವಿಡ್ ಆರೈಕೆ ಕೇಂದ್ರಗಳನ್ನು ಬೆಂಗಳೂರಿನಲ್ಲಿ ಪುನರಾರಂಭಿಸುವ ಜೊತೆಯಲ್ಲೇ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿಯೂ ಆರಂಭಿಸಬೇಕು ಎಂಬ ನೆಲೆಯಲ್ಲಿ ಪ್ರಧಾನಿಯವರ ಎಚ್ಚರಿಕೆಯ ಮಾತನ್ನು ಅರ್ಥ ಮಾಡಿಕೊಳ್ಳಬಹುದು. ಈ ಮಧ್ಯೆ, ಉಪಚುನಾವಣೆಗಳು ಕೂಡ ಬಂದಿರುವುದರಿಂದ ಚುನಾವಣಾ ಪ್ರಚಾರದ ನೆಪದಲ್ಲಿ ಜನರ ಗುಂಪುಗೂಡುವಿಕೆಯೂ ಹೆಚ್ಚಾಗುತ್ತದೆ. ಹೊರಾಂಗಣದ ಇಂತಹ ಕಾರ್ಯಕ್ರಮಗಳ ಮೇಲೆಯೂ ಕಠಿಣ ನಿರ್ಬಂಧಗಳನ್ನು ವಿಧಿಸಿ ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದಿದ್ದರೆ ಅಪಾಯ ತಪ್ಪಿದ್ದಲ್ಲ. ನಿಯಮ ಪಾಲನೆಯ ಬಗ್ಗೆ ಮಾದರಿ ಆಗಬೇಕಿರುವ ರಾಜಕಾರಣಿಗಳೇ ಬಹಿರಂಗ ಸಮಾವೇಶಗಳಲ್ಲಿ ಭಾಗವಹಿಸುತ್ತಿರುವುದು ವಿಪರ್ಯಾಸದ ಸಂಗತಿ. ಕೋವಿಡ್ ತಡೆಯ ನಿಯಮ ಪಾಲನೆಗಳಲ್ಲಿ ಅಧಿಕಾರಸ್ಥರಿಗೆ ವಿನಾಯಿತಿ ಕೊಡುವುದು ಎಳ್ಳಷ್ಟೂ ಸರಿಯಲ್ಲ. ಕೋವಿಡ್ ಲಸಿಕೆ ನೀಡುವ ವಿಚಾರದಲ್ಲಿ ಸರ್ಕಾರ ಇನ್ನಷ್ಟು ಚುರುಕಾಗಿ ಕೆಲಸ ಮಾಡಬೇಕಾಗಿದೆ. ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದರ ಬಗ್ಗೆ ನಗರ - ಗ್ರಾಮೀಣ ಎನ್ನದೆ ಜನರಲ್ಲಿ ಜಾಗೃತಿ ಮೂಡಿಸಬೇಕಾದ ತುರ್ತು ಅಗತ್ಯವೂ ಇದೆ.

ದಿನದ ಟ್ವೀಟ್

ಎಲ್ಲಿ ಹೋಯಿತು ಕಾರ್ಯತತ್ಪರತೆ?



ಮುಕೇಶ್ ಅಂಬಾನಿ ಅವರ ಮನೆ ಮುಂದೆ ಸ್ಫೋಟಕ ತುಂಬಿದ್ದ ಕಾರು ಪತ್ತೆ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ನಾಲ್ಕೇ ದಿನಗಳಲ್ಲಿ ಎಲ್ಲವನ್ನೂ ಪತ್ತೆ ಹಚ್ಚಿದೆ. ಆದರೆ, ಪುಲ್ವಾಮಾ ದಾಳಿಯಾಗಿ 25 ತಿಂಗಳುಗಳು ಕಳೆದರೂ ಅತ್ಯಧಿಕ ಭದ್ರತೆ ಇರುವ ಹೆದ್ದಾರಿಯಲ್ಲಿ ಉಗ್ರರು 350 ಕೆ.ಜಿ. ಸ್ಫೋಟಕವನ್ನು ಹೇಗೆ ಒಟ್ಟುಗೂಡಿಸಿ ಸಾಗಿಸಿದರು ಎಂಬ ಮಾಹಿತಿಯನ್ನು ಮಾತ್ರ ಎನ್‌ಐಎ ಇದುವರೆಗೂ ಬಹಿರಂಗಪಡಿಸಿಲ್ಲ. ಈಗಿನ ಕಾರ್ಯತತ್ಪರತೆಯು ಪುಲ್ವಾಮಾ ದಾಳಿಯ ವಿಷಯದಲ್ಲಿ ಕಾಣೆಯಾಗಿದ್ದೇಕೆ?

ಸರಳ್ ಪಟೇಲ್, ಗುಜರಾತ್ ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 19-3-1996

- **ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಸ್ತು**

ಬೆಂಗಳೂರು, ಮಾರ್ಚ್ 18– ಬೆಂಗಳೂರು ಹೊರವಲಯದ ದೇವನಹಳ್ಳಿ ಬಳಿ ಖಾಸಗಿ ಕ್ಷೇತ್ರದಲ್ಲಿ ಬರುತ್ತಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತು ರಾಜ್ಯದ ಇನ್ನಿತರ ಏಳು ಕಡೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಕೇಂದ್ರದ ನಾಗರಿಕ ವಿಮಾನಯಾನ ಹಾಗೂ ಪ್ರವಾಸೋದ್ಯಮ ಸಚಿವ ಗುಲಾಂ ನಬಿ ಆಜಾದ್ ಇಂದು ಇಲ್ಲಿ ಪ್ರಕಟಿಸಿದರು.

ಬೆಳಗಾವಿ, ಮಂಗಳೂರು, ಹಾಸನ, ರಾಯಚೂರು, ಬಳ್ಳಾರಿ, ಹುಬ್ಬಳ್ಳಿ, ಕಲ್ಬುರ್ಗಿ, ಬಿಜಾಪುರ, ಮೈಸೂರುಗಳಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಬೇಕು ಎಂದು ಮುಖ್ಯಮಂತ್ರಿ ಎಚ್.ಡಿ.ದೇವೇಗೌಡರು ಪತ್ರ ಬರೆದು ಕೋರಿದ್ದರು. ಈ ಪೈಕಿ ಮಂಗಳೂರು, ಬೆಳಗಾವಿ ಹೊರತುಪಡಿಸಿ ಉಳಿದ ಸ್ಥಳಗಳ ನಿಲ್ದಾಣ ಅಭಿವೃದ್ಧಿಯನ್ನು ರಾಜ್ಯಕ್ಕೇ ಬಿಟ್ಟುಕೊಡಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

- **ಅಮೆರಿಕ ಮೇಲೆ ಅಣ್ವಸ್ತ್ರ; ಚೀನಾ ಎಚ್ಚರಿಕೆ**

ವಾಷಿಂಗ್ಟನ್, ಮಾರ್ಚ್ 18 (ಎಎಫ್‌ಪಿ)– ತೈವಾನ್ ಮೇಲೆ ಚೀನಾ ಆಕ್ರಮಣಕ್ಕೆ ಪ್ರತಿಯಾಗಿ ಅಮೆರಿಕವು ತೈವಾನ್ ನೆರವಿಗೆ ಆಗಮಿಸಿದರೆ ಲಾಸ್ ಏಂಜಲೀಸ್ ಮೇಲೆ ಅಣ್ವಸ್ತ್ರಸಜ್ಜಿತ ಕ್ಷಿಪಣಿ ದಾಳಿ ನಡೆಸಲಾಗುವುದು ಎಂದು ಚೀನಾದ ಕೆಳ ಹಂತದ ಅಧಿಕಾರಿಗಳು ಎಚ್ಚರಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 19-3-1971

- **ವೀರೇಂದ್ರ ಸಂಪುಟದ ಅಸ್ತಮಾನ: ಆಡಳಿತ ಕಾಂಗ್ರೆಸ್‌ಗೆ ನೂಕುನುಗ್ಗಲು**

ಬೆಂಗಳೂರು, ಮಾರ್ಚ್ 18– ಬಹುಮತ ಕಳೆದುಕೊಂಡ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಅವರು ಇಂದು ತಮ್ಮ ಸಂಪುಟದ ರಾಜೀನಾಮೆ ನೀಡಿದರು.

ಅತ್ತ ವಿರೋಧ ಪಕ್ಷದ ನಾಯಕ ಶ್ರೀ ಎಚ್.ಸಿದ್ಧವೀರಪ್ಪ ಅವರು ಹೊಸ ಸರ್ಕಾರ ರಚಿಸುವ ಸಾಧ್ಯಾಸಾಧ್ಯತೆಯನ್ನು ತಿಳಿಸಲು ಶುಕ್ರವಾರ ಸಂಜೆ ಅಥವಾ ಶನಿವಾರ ಬೆಳಿಗ್ಗೆವರೆಗೆ ರಾಜ್ಯಪಾಲರಿಂದ ಸಮಯ ತೆಗೆದುಕೊಂಡಿದ್ದಾರೆ.

ನೂಕುನುಗ್ಗಲಿನಂತೆ ಸಂಸ್ಥಾ ಕಾಂಗ್ರೆಸ್ ಹಾಗೂ ಇತರ ಪಕ್ಷಗಳಿಂದ ಸದಸ್ಯರು ಬಂದು ಸೇರಿದ ಆಡಳಿತ ಕಾಂಗ್ರೆಸ್ ಪಕ್ಷದ ಬಲ ಇಂದು ಸಂಜೆಯ ಹೊತ್ತಿಗೆ 110 ಸಂಖ್ಯೆಯನ್ನು ಮುಟ್ಟಿತ್ತು.

- **ಕೆಂಗಲ್‌ಗೆ ರೈಲ್ವೆ: 36 ಸಚಿವರಲ್ಲಿ ಐವರು ಹೊಸಬರು**

ನವದೆಹಲಿ, ಮಾರ್ಚ್ 18– ಶ್ರೀಮತಿ ಇಂದಿರಾ ಗಾಂಧಿ ಅವರ ನಾಯಕತ್ವದಲ್ಲಿ ಕೇಂದ್ರದ ಹೊಸ ಸಂಪುಟದ 36 ಮಂದಿ ಸಚಿವರು ಹೊಸ ಲೋಕಸಭೆ ಅಧಿವೇಶನದ ಮುನ್ನಾ ದಿನವಾದ ಇಂದು ರಾಷ್ಟ್ರಪತಿ ವಿ.ವಿ.ಗಿರಿ ಅವರಿಂದ ಪ್ರಮಾಣವಚನ ಸ್ವೀಕರಿಸಿದರು. ಅವರಲ್ಲಿ ಕರ್ನಾಟಕದ ಕೆಂಗಲ್ ಹನುಮಂತಯ್ಯ ಸಹ ಸೇರಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ಧಾರ್ಥ ಶಂಕರರಾಯ್ (ಶಿಕ್ಷಣ, ಸಂಸ್ಕೃತಿ), ಮುಂಬೈ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶ ಎಚ್.ಆರ್.ಗೋಖಲೆ (ಕಾನೂನು), ಐ.ಎ.ಸಿ. ಅಧ್ಯಕ್ಷರಾಗಿದ್ದ ಮೋಹನ್ ಕುಮಾರಮಂಗಳಂ (ಉಕ್ಕು, ಭಾರಿ ಎಂಜಿನಿಯರಿಂಗ್), ಅಸ್ಸಾಂನ ಮಾಜಿ ಮುಖ್ಯಮಂತ್ರಿ ಮೊಯಿನುಲ್ ಹಕ್ ಚೌಧುರಿ (ಕೈಗಾರಿಕಾಭಿವೃದ್ಧಿ) ಮತ್ತು ನೇಪಾಳದಲ್ಲಿ ಭಾರತದ ರಾಯಭಾರಿಯಾಗಿದ್ದ ರಾಜಬಹಾದ್ದೂರ್ (ನೌಕೆ, ಸಾರಿಗೆ, ಪಾರ್ಲಿಮೆಂಟರಿ ವ್ಯವಹಾರ) ಸೇರ್ಪಡೆಯಾಗಿರುವ ಹೊಸಬರಲ್ಲಿ ಸೇರಿದ್ದಾರೆ.

ಗರ್ಭಪಾತದ ಅವಧಿ ವಿಸ್ತರಣೆ ಅವಕಾಶದಿಂದ ಹೆಣ್ಣು ಭ್ರೂಣಹತ್ಯೆ ಹೆಚ್ಚಾಗಬಹುದೆಂಬ ಭಯ ಸಲ್ಲ

ಗರ್ಭಪಾತ ಮತ್ತು ಕಾನೂನಿನ ಬಲ



ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ವಿಶೇಷ ಪ್ರಕರಣಗಳಲ್ಲಿ, ಗರ್ಭಪಾತ ಮಾಡಿಸಬಹುದಾದ ಗರ್ಭಾವಸ್ಥೆಯ ಕಾಲವನ್ನು 20 ವಾರಗಳಿಂದ 24 ವಾರಗಳಿಗೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಗೆ ರಾಜ್ಯಸಭೆ ಮಂಗಳವಾರ ಅಂಗೀಕಾರ ನೀಡಿದೆ. ವೈದ್ಯಕೀಯ ಗರ್ಭಪಾತ (ತಿದ್ದುಪಡಿ) ಮಸೂದೆ–2020ರ (The Medical Termination of Pregnancy (Amendment)– 2020) ಮೂಲಕ ಮಹಿಳೆಯರಿಗೆ ಸುರಕ್ಷಿತ, ಕಾನೂನುಬದ್ಧ ಗರ್ಭಪಾತದ ಸೇವೆಗಳನ್ನು ಚಿಕಿತ್ಸಕ- ಮಾನವೀಯ ನೆಲೆಯಲ್ಲಿ ದೊರಕಿಸುವ ಪ್ರಮುಖ ಕ್ರಮ ಇದು ಎಂದು ಸರ್ಕಾರ ತಿಳಿಸಿದೆ.

ಈ ಮಸೂದೆಯು ಲೋಕಸಭೆಯಲ್ಲಿ ಕಳೆದ ವರ್ಷವೇ ಅಂಗೀಕಾರ ಪಡೆದಿದೆ. ಮಸೂದೆಯನ್ನು ಆಯ್ಕೆ ಸಮಿತಿಗೆ ಒಪ್ಪಿಸಬೇಕು ಎಂದು ಕೆಲವು ಸದಸ್ಯರು ಆಗ್ರಹಿಸಿದರಾದರೂ ಅದೃಷ್ಟವಶಾತ್ ಅವರ ಆಗ್ರಹ ಫಲಿಸಿಲ್ಲ. ಇಲ್ಲವಾದಲ್ಲಿ ಮಸೂದೆಯು ಮತ್ತಷ್ಟು ಕಾಲ ನನೆಗುದಿಯಲ್ಲಿ ಉಳಿಯುವಂತಾಗುತ್ತಿತ್ತು.

ಆಯ್ಕೆ ಸಮಿತಿಗೆ ಒಪ್ಪಿಸಬೇಕೆಂದು ರಾಜ್ಯಸಭೆಯಲ್ಲಿ ಆಗ್ರಹಿಸಿದ ಸದಸ್ಯರಂತೆ ಬಹುತೇಕರಿಗೆ, ಗರ್ಭಪಾತ ಮಾಡಿಸಬಹುದಾದ ಗರ್ಭಾವಧಿಯ ಮಿತಿಯನ್ನು ಏರಿಸಿರುವ ಸಂಗತಿ ಎಷ್ಟು ಮಹತ್ವದ್ದು ಎಂಬುದರ ಅರಿವು ಇರಲಾರದು. ಅಂತಹ ಅರಿವು ಮೂಡಿಸದೆ, ಕಾನೂನು ಎಷ್ಟೇ ‘ಪ್ರಬಲ’ ಎನಿಸಿದರೂ ವ್ಯರ್ಥ ಎಂದೆನಿಸಿಬಿಡುತ್ತದೆ.

ಮಹಿಳೆಯರಿಗೆ ಸಂಬಂಧಿಸಿದ ಎಲ್ಲವೂ ಅಂದರೆ ಉಡುಗೆ-ತೊಡುಗೆ, ಮುಟ್ಟು, ದೇವಾಲಯ ಪ್ರವೇಶ-ನಿಷಿದ್ಧ, ವಿವಾಹವಾಗುವಿಕೆ- ಆಗದಿರುವಿಕೆ, ಲೈಂಗಿಕತೆ... ಚರ್ಚೆಯ ವಿಷಯಗಳಾಗುವುದು ಸಾಮಾನ್ಯ. ಆದರೆ ‘ಗರ್ಭಪಾತ’ದ ವಿಷಯದಲ್ಲಿ ಇದು ಇನ್ನೂ ಒಂದು ಮೆಟ್ಟಿಲು ಹೆಚ್ಚು. ಮುಂದುವರಿದ ಯುರೋಪಿಯನ್ ರಾಷ್ಟ್ರಗಳೂ ಇದಕ್ಕೆ ಹೊರತಲ್ಲ. ಮತದಾನದ ಹಕ್ಕನ್ನು ಮಹಿಳೆಗೆ ನಿರಾಕರಿಸಿದಂತೆ, ಗರ್ಭಪಾತದ ಹಕ್ಕನ್ನೂ ಆಕೆಗೆ ಬಹುಕಾಲ ನೀಡಿರಲಿಲ್ಲ. ಐರ್ಲೆಂಡ್‌ನಲ್ಲಿ ಸೋಂಕುಂಟಾಗಿ ಗರ್ಭಪಾತಕ್ಕೆ ಅನುಮತಿ ಸಿಗದೆ ಮೃತಪಟ್ಟ ದಂತವೈದ್ಯೆ, ಕನ್ನಡತಿ ಸವಿತಾ ಹಾಲಪ್ಪನವರ ಅವರ ನಗುಮುಖ ನನಗಿನ್ನೂ ನೆನಪಿನಲ್ಲಿದೆ. ಅವರ ಮರಣದಿಂದ ಉಂಟಾದ ಕ್ರಾಂತಿ, ಕೊನೆಗೂ ಗರ್ಭಪಾತವನ್ನು ಮಹಿಳೆಯರ ಹಕ್ಕನ್ನಾಗಿ ಐರ್ಲೆಂಡ್ ಒಪ್ಪಿಕೊಳ್ಳುವಂತೆ ಮಾಡಿತು ಎನ್ನುವುದು ಒಂದು ಐತಿಹಾಸಿಕ ಸತ್ಯ.

ಗರ್ಭಪಾತ ಎನ್ನುವುದು ಮುಖ್ಯವಾಗಿ ಚರ್ಚೆಯಾಗುವುದು ಅದರಲ್ಲಿ ಹುದುಗಿರುವ ಮಹಿಳೆಯ ‘ವೈಯಕ್ತಿಕ ಆಯ್ಕೆ’ (pro choice) ಮತ್ತು ಭ್ರೂಣದ ‘ಜೀವ ಪರ’ (Pro life) ಎಂಬ ಎರಡು ಅಂಶಗಳ ಮಧ್ಯದ ಸಂಘರ್ಷದಿಂದ. ಜೊತೆಗೂಡುವ ಧರ್ಮ-ನೈತಿಕತೆ- ಕಾನೂನು- ಆರೋಗ್ಯಗಳು ಈ ಚರ್ಚೆಯನ್ನು ಮತ್ತಷ್ಟು ಜಟಿಲವಾಗಿಸಿಬಿಡುತ್ತವೆ. ಮಹಿಳೆಯ ಲೈಂಗಿಕತೆ- ಗರ್ಭಧಾರಣೆ- ದೈಹಿಕ- ಮಾನಸಿಕ ಆರೋಗ್ಯದ ಹಕ್ಕುಗಳು ಇಂತಹ ಚರ್ಚೆಗಳಲ್ಲಿ ನಿರ್ಲಕ್ಷ್ಯ, ಗೇಲಿಗೆ ಒಳಗಾಗುವುದು ಹೆಚ್ಚು. ಕಾನೂನನ್ನು ಮಾಡುವವರೂ ಪಾಲಿಸುವವರೂ ಇದಕ್ಕೆ ಹೊರತಲ್ಲ.

ಭಾರತದಲ್ಲಿ ಪ್ರತೀ ಮೂವರು ಗರ್ಭಿಣಿಯರಲ್ಲಿ ಒಬ್ಬರು ಗರ್ಭಪಾತಕ್ಕೀಡಾಗುವ ಪರಿಸ್ಥಿತಿಯಿದೆ. ಭಾರತದ ಈ ಬಗೆಗಿನ ಅತಿ ದೊಡ್ಡ ಅಧ್ಯಯನ ‘ಬೇಡದ ಗರ್ಭಧಾರಣೆ ಮತ್ತು ಗರ್ಭಪಾತ’– 2017, ಪ್ರಮುಖ ಜರ್ನಲ್ ‘ಲ್ಯಾನ್ಸೆಟ್’ನಲ್ಲಿ ಪ್ರಕಟವಾಗಿದೆ. ಅದರಂತೆ, 2015ರಲ್ಲಿ ನಡೆದ ಗರ್ಭಪಾತಗಳ ಸಂಖ್ಯೆ 1.56 ಲಕ್ಷ. ಹೀಗಿರುವಾಗ ಗರ್ಭಪಾತ ಎಂಬುದು ಒಂದು ಗಂಭೀರ, ಗಮನಾರ್ಹ ಆರೋಗ್ಯಕ್ಕೆ ಸಂಬಂಧಿಸಿದ ವಿಷಯ ಎಂಬುದರಲ್ಲಿ ಎರಡು ಮಾತಿಲ್ಲ.

1972ರಲ್ಲಿ ಭಾರತವು ವೈದ್ಯಕೀಯ ಗರ್ಭಪಾತ ಮಸೂದೆಯನ್ನು (Medical Termination of Pregnancy– MTP) ಜಾರಿಗೆ ತಂದಿತು. ಅದರ ಅರ್ಥ ಅಲ್ಲಿಯವರೆಗೆ ಗರ್ಭಪಾತಗಳು ನಡೆಯುತ್ತಿರಲಿಲ್ಲ ಎಂದಲ್ಲ. ಅಸುರಕ್ಷಿತವಾಗಿ, ಹೇಗಾದರೂ ಯಾರಿಂದಲಾದರೂ ನಡೆಯುತ್ತಿದ್ದ ಗರ್ಭಪಾತಗಳಿಂದ ಭ್ರೂಣದ ಜೀವವಷ್ಟೇ ಅಲ್ಲ, ಎಷ್ಟೋ ಬಾರಿ ತಾಯಿಯ ಜೀವವೂ ಹರಣವಾಗುತ್ತಿತ್ತು. ‘ವೈಯಕ್ತಿಕ ಆಯ್ಕೆ’, ‘ಜೀವದ ಪ್ರಶ್ನೆ’ಗಳೆರಡೂ ಉತ್ತರವೇ ಇರದಂತೆ ಮಾಯವಾಗಿ ಹೋಗುತ್ತಿದ್ದವು. 1975ರಲ್ಲಿ, ನಂತರ 2002ರಲ್ಲಿ (27 ವರ್ಷಗಳ ವಿರಾಮದ ನಂತರ!) ತಿದ್ದುಪಡಿಗಳೊಂದಿಗೆ ಅಂತೂ ಇಂತೂ ಎಂಟಿಪಿ ಕಾಯ್ದೆ ಬಲವಾಗಿ ನಿಂತಿತು. ಈ ಕಾಯ್ದೆಯು ‘ಬೇಡದ’, ಅಂದರೆ ಪರಿಸ್ಥಿತಿಯ ಕಾರಣದಿಂದ ಮುಂದುವರಿಸಲು ಸಾಧ್ಯವಿರದ ಗರ್ಭ, ಗರ್ಭನಿರೋಧಕಗಳ ಬಳಕೆಯ ವೈಫಲ್ಯ, ಅತ್ಯಾಚಾರದಂತಹ ಸಂದರ್ಭಗಳಲ್ಲಿ, ಒಂದೊಮ್ಮೆ ಆನುವಂಶಿಕ ಕಾಯಿಲೆಯ ಅಪಾಯ ಭ್ರೂಣಕ್ಕಿದ್ದರೆ, ಮಾನವೀಯತೆಯ ದೃಷ್ಟಿಯಿಂದ ಸುರಕ್ಷಿತ ಗರ್ಭಪಾತಕ್ಕೆ ಕಾನೂನುಬದ್ಧವಾದ ಅವಕಾಶ ನೀಡಿತು.

ಸುರಕ್ಷಿತ ಗರ್ಭಪಾತ ಉದ್ದೇಶದ ಈ ಕಾಯ್ದೆಗೂ ಭ್ರೂಣಲಿಂಗ ಪತ್ತೆ ಹಚ್ಚುವುದನ್ನು ನಿಷೇಧಿಸುವ ಪಿಎನ್‌ಡಿಟಿ ಕಾಯ್ದೆಗೂ ಕೊಂಡಿ ಏರ್ಪಟ್ಟಿದ್ದು ಅಚ್ಚರಿಯ ಮಾತೇನಲ್ಲ. ಅಂದರೆ, ಪಿಎನ್‌ಡಿಟಿ ಕಾಯ್ದೆಯ ಬಗ್ಗೆ ಆಡಳಿತ ವ್ಯವಸ್ಥೆ ಅಷ್ಟೇನೂ ಜಾಗ್ರತೆ ವಹಿಸದೇ ಇದ್ದಾಗ, ಎಂಟಿಪಿ ಕಾಯ್ದೆಯಡಿಯಲ್ಲಿ ನಡೆದ ಗರ್ಭಪಾತಗಳಿಗೆ ಲೆಕ್ಕವಿಲ್ಲ! ಕ್ರಮೇಣ ಪಿಎನ್‌ಡಿಟಿ ಕಾಯ್ದೆಯನ್ನು ಪ್ರಬಲವಾಗಿ ಜಾರಿಗೆ ತರಲಾರಂಭಿಸಿದಾಗ, ಹೆಣ್ಣು ಮಕ್ಕಳನ್ನು ಉಳಿಸುವ ಪ್ರಕ್ರಿಯೆ ಸಾಧ್ಯವಾಯಿತು ಎನ್ನುವುದು ನಿಜಸಂಗತಿ.



ದಿನನಿತ್ಯ ಹೆರಿಗೆಗಳನ್ನು ಮಾಡಿಸುವ, ಗರ್ಭಿಣಿಯರಿಗೆ ಆರೈಕೆ ಮಾಡುವ, ಚಿಕಿತ್ಸೆ ನೀಡುವ, ಗರ್ಭಪಾತಗಳನ್ನು ಮಾಡಿಸುವ ವೈದ್ಯ-ವೈದ್ಯೆಯರು ಹೇಳುವ ಪ್ರಕಾರ, ‘ಎಷ್ಟೋ ಬಾರಿ ಅಂಗವೈಕಲ್ಯದಿಂದ ಭ್ರೂಣದ ಪತ್ತೆಯಾಗುವುದು 20 ವಾರಗಳ ಗರ್ಭಾವಸ್ಥೆಯ ನಂತರವೇ. ಮಗು ಆರೋಗ್ಯವಾಗಿ ಇರುವುದಿಲ್ಲವೆಂದು, ತಾಯಿ-ಮಗು ಇಬ್ಬರೂ ಇಡೀ ಜೀವನ ನರಳಬೇಕಾಗುತ್ತದೆಂದು ನಮಗೆ ಗೊತ್ತಿದ್ದರೂ ಈಗಿರುವ ಕಾನೂನಿನ ಪ್ರಕಾರ ನಾವು ಗರ್ಭಪಾತ ಮಾಡುವ ಹಾಗಿಲ್ಲ. ತಂದೆ-ತಾಯಿಗೆ ಈ ಸತ್ಯವನ್ನು ನಾವು ಹೇಳಲೇಬೇಕು. ತಾಯಿಯ ಸಂಕಟವನ್ನು ನಮ್ಮ ಯಾವ ಸಮಾಧಾನದ ಮಾತು ಕಡಿಮೆ ಮಾಡೀತು? ನಾವು ‘ಮಗುವಿನ ಜೀವ’ದ ಬಗ್ಗೆ ಯೋಚಿಸಬೇಕೋ ತಾಯಿಯ ಮಾನಸಿಕ ಆರೋಗ್ಯ- ಅದರ ಹದಗೆಡುವಿಕೆ, ಇಡೀ ಕುಟುಂಬ, ಆ ತಾಯಿಗೆ ಇರಬಹುದಾದ ಇತರ ಮಕ್ಕಳು, ಅವರ ಬೆಳವಣಿಗೆಗಳ ಬಗ್ಗೆ ಯೋಚಿಸಬೇಕೋ?’

2017ರಿಂದ 2019ರ ನಡುವೆ ನಡೆದ ವಿಶ್ಲೇಷಣೆಯ ಪ್ರಕಾರ, ಅತ್ಯಾಚಾರದಂತಹ ದೌರ್ಜನ್ಯದ ಕಾರಣಗಳಿಂದ ಗರ್ಭ ಧರಿಸಿದಾಗ ಗರ್ಭಪಾತಕ್ಕೆಂದು ನ್ಯಾಯಾಲಯದ ಮೆಟ್ಟಿಲು ಹತ್ತಿದವರಲ್ಲಿ ಶೇ 41ರಷ್ಟು ಮಂದಿ 24 ವಾರಗಳನ್ನು ಮೀರಿದ ಗರ್ಭಾವಸ್ಥೆಯಲ್ಲಿದ್ದದ್ದು ಕಂಡುಬಂದಿದೆ. ಇನ್ನೂ ಹುಟ್ಟದ ಭ್ರೂಣದ ಬಗ್ಗೆ ಮಾನವೀಯ ದೃಷ್ಟಿಯಿಂದ ಯೋಚನೆ-ವಾದ ಮಾಡುವ ಜಗತ್ತು, ಅದೇ ಮಾನವೀಯ ದೃಷ್ಟಿಯನ್ನು, ದೇಹ-ಮನಸ್ಸುಗಳ ಮೇಲೆ ನಡೆದ ಅತ್ಯಾಚಾರದ ಫಲವನ್ನು ಮುಂದುವರಿಸಲೇಬೇಕೆಂಬ ಒತ್ತಾಯ ಹೇರುವ ಅಪಾಯದ ಕಡೆಗೇಕೆ ವಿಸ್ತರಿಸಲಾರದು? ಬೇಡದ ಗರ್ಭವನ್ನು ಮುಂದುವರಿಸುವ ಮನಃಸ್ಥಿತಿಯಾಗಲೀ, ಗರ್ಭಪಾತ ನಂತರದ ಮಾನಸಿಕ ಸ್ಥಿತಿಯಾಗಲೀ ತಾಯಿಯ ಆರೋಗ್ಯಕ್ಕೆ ಸಂಬಂಧಿಸಿದ್ದು ಎಂಬ ಬಗ್ಗೆ ಆಡಳಿತ ವ್ಯವಸ್ಥೆಗೆ ಅರಿವಿದ್ದಂತಿಲ್ಲ. ಹಾಗಾಗಿಯೇ ಸರ್ಕಾರ ಈ ಮಸೂದೆಯನ್ನು ತರುವ ಮುನ್ನ ಸಲಹೆ ಪಡೆದುಕೊಂಡ ಪರಿಣತರ ಪಟ್ಟಿಯಲ್ಲಿ ಮನೋವೈದ್ಯರು ಸೇರಿದಂತಿಲ್ಲ! ಕೆಲವು ಅತ್ಯಾಚಾರದ ಪ್ರಕರಣಗಳಲ್ಲಿ 24 ವಾರಗಳ ನಂತರವೂ ಗರ್ಭಪಾತಕ್ಕೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಆದರೆ ಅದಕ್ಕಾಗಿ ಬಹಳಷ್ಟು ಹೋರಾಟದ ಹಂತಗಳನ್ನು ಆ ಮಹಿಳೆಯರು ಎದುರಿಸಬೇಕಾಯಿತು ಎನ್ನುವುದು ಗಮನಾರ್ಹ.

ವೈದ್ಯಕೀಯ ವಿಜ್ಞಾನ ನಿಂತ ನೀರಲ್ಲ. ಹೆರಿಗೆ ಮಾಡಿಸುವ ವಿಧಾನಗಳಂತೆಯೇ ಗರ್ಭಪಾತದ ವಿಧಾನಗಳು ಸುಧಾರಿಸಿವೆ. ಹೆಣ್ಣು ಭ್ರೂಣಹತ್ಯೆಯನ್ನು ತಡೆಯಬಲ್ಲ ಆತ್ಮಸಾಕ್ಷಿ ಬಲವಾಗತೊಡಗಿದೆ. ಹಾಗಾಗಿ ಗರ್ಭಪಾತದ ಮಸೂದೆಯ ಈ ತಿದ್ದುಪಡಿ ಸ್ವಾಗತಾರ್ಹ. ತಿದ್ದುಪಡಿಯು ಮಹಿಳಾ ಮಾನಸಿಕ ಆರೋಗ್ಯದ ಬಗೆಗೆ ಸಂಶೋಧನೆ- ಅಧ್ಯಯನ- ಚಿಕಿತ್ಸೆ ನಡೆಸುವ ನನ್ನಂತಹ ಹಲವರಿಗೆ ಸಮಾಧಾನ ತಂದಿದೆ. ಇದರಿಂದ ಹೆಣ್ಣು ಭ್ರೂಣಹತ್ಯೆ ಹೆಚ್ಚಾಗಬಹುದೆಂಬ ಭಯ ನನಗಿಲ್ಲ. ಹೆಣ್ಣು ಭ್ರೂಣಹತ್ಯೆಯ ವಿರುದ್ಧದ ಹೋರಾಟದ ಬಗ್ಗೆ ಅರಿವು ಮೂಡಿಸಲು ನಾವು, ನಮ್ಮಂತಹ ಹಲವರು ಸಿದ್ಧರಿದ್ದೇವೆ. ಹಾಗಾಗಿ, ಬಹು ಬೇಗ ಈ ಮಸೂದೆಯು ಕಾಯ್ದೆಯಾಗಲಿ. ನಮ್ಮ ಆಡಳಿತ ವ್ಯವಸ್ಥೆ ಕಾಲಕಾಲಕ್ಕೆ ವೈಜ್ಞಾನಿಕ ಪ್ರಗತಿ, ಅಧ್ಯಯನಗಳನ್ನು ಆಧರಿಸಿ ಸೂಕ್ತ ತಿದ್ದುಪಡಿಗಳನ್ನು ತರುವಂತಹ ಪ್ರಯತ್ನ ಮಾಡಲಿ.

ಲೇಖಕಿ: ಮನೋವೈದ್ಯೆ

ಚುರುಮುರಿ



ಕೊರೊನಾ ಸ್ಟಾಕ್!

• ಬಿ.ಎನ್.ಮಲ್ಲೇಶ್

‘ರೀ... ಕೊರೊನಾ ಸೆಕೆಂಡ್ ವೇವ್ ಬಂದೇತಂತೆ? ಗೌರ್ಮೆಂಟ್‌ನೋರು ಮತ್ತೇನಾದ್ರು ಲಾಕ್‌ಡೌನು, ಸೀಲ್‌ಡೌನು ಮಾಡ್ತಾರಾ?’

ಹೆಂಡತಿ ಪಮ್ಮಿ ಪ್ರಶ್ನೆಗೆ ಉತ್ತರಿಸಿದ ತೆಪರೇಸಿ, ‘ಸದ್ಯಕ್ಕೆ ಅದೇನೂ ಮಾಡಲ್ಲಂತೆ... ಪೇಪರ್ ನೋಡಿಲ್ವ?’ ಎಂದ.

‘ಆದ್ರು ಅವರ್‍ನ ನಂಬಂಗಿಲ್ಲ ಕಣ್ರಿ, ನಮ್ ಹುಷಾರಲ್ಲಿ ನಾವಿರಬೇಕು. ಮನೆಗೆ ಏನೇನು ಬೇಕು ಎಲ್ಲ ಸ್ವಲ್ಪ ಸ್ಟಾಕ್ ತಂದು ಇಟ್ಕೋಬೇಕು ಅಲ್ವ?’

‘ನೀ ಹೇಳೋದೂ ನಿಜ ಅನ್ನು, ಟಿ.ವಿ.ಯೋರು ರಣಕೇಕೆ, ಮರಣಮೃದಂಗ ಅಂತ ಹಾಕೋಕೆ ಶುರು ಮಾಡಿದ್ರೆ ಸರ್ಕಾರದೋರು ಮತ್ತೆ ಉಲ್ಟಾ ಹೊಡೆದ್ರೂ ಹೊಡೀಬಹುದು...’

‘ಅದ್ಕೇ ಹೇಳಿದ್ದು, ಒಂದ್ ತಿಂಗಳಿಗೆ ಏನೇನ್ ಬೇಕು ಹೇಳ್ತಾ ಹೋಗ್ತೀನಿ, ನೀವು ಲಿಸ್ಟ್ ಬರೀತೀರಾ? ಆಮೇಲೆ ದುಡ್ಡು ಕೊಡ್ತೀನಿ, ಪೇಟೆಗೆ ಹೋಗಿ ತಗಂಬನ್ನಿ’ ಎಂದಳು ಪಮ್ಮಿ.

ತಲೆಯಾಡಿಸಿದ ತೆಪರೇಸಿ, ಹೆಂಡತಿ ಹೇಳಿದ್ದನ್ನೆಲ್ಲ ಲಿಸ್ಟ್ ಬರೀತಾ ಹೋದ. ತರಕಾರಿ, ದಿನಸಿ ಸಾಮಾನು, ಹಣ್ಣುಹಂಪಲು, ಬೇಕರಿ ಐಟಂಗಳು... ಎಲ್ಲ ದೊಡ್ಡ ಪಟ್ಟಿಯೇ ಆಯಿತು.

‘ಅಷ್ಟಕ್ಕೆಲ್ಲ ಎಷ್ಟ್ ಆಗಬಹುದುರೀ?’ ಕೇಳಿದಳು ಪಮ್ಮಿ.

‘ಅಂದಾಜು ಹತ್ತರಿಂದ ಹದಿನೈದು ಸಾವಿರ ಆಗಬಹುದು ಕಣೆ...’ ತಡವರಿಸಿದ ತೆಪರೇಸಿ.

ಪಮ್ಮಿಗೇಕೋ ಅನುಮಾನ. ‘ಎಲ್ಲಿ ಲಿಸ್ಟ್ ಕೊಡಿ ಇಲ್ಲಿ’ ಎಂದು ಲಿಸ್ಟ್ ಕಸಿದುಕೊಂಡು ಕಣ್ಣಾಡಿಸಿ, ‘ಏನ್ರಿ ಇದು ಎಣ್ಣೆ ಎಣ್ಣೆ ಅಂತ ಎರಡು ಕಡೆ ಬರೆದಿದೀರಿ? ನೋಡಿ ಇಲ್ಲಿ’ ಎಂದು ತೋರಿಸಿದಳು.

‘ಅದೂ... ಒಂದು ಅಡುಗೆ ಎಣ್ಣೆ...’

‘ಇನ್ನೊಂದು?’

‘ಅದು ಬೇರೆ... ಬಂದ ಸಂಬಳನೆಲ್ಲ ನೀನೇ ಕಸ್ಕಂತೀಯ, ಮತ್ತೆ ನನ್ನ ಅಬ್ಕಾರಿ ಸ್ಟಾಕಿಗೆ ಏನ್ಮಾಡ್ಲಿ?’

ಪಮ್ಮಿ ದೊಡ್ಡ ಕಣ್ಣು ಬಿಟ್ಟು ಗುರ್ ಎಂದಳು. ತೆಪರೇಸಿ ಪಿಟಿಕ್ಕೆನ್ನಲಿಲ್ಲ.

ಸಂಗತ

ಗುಬ್ಬಚ್ಚಿ... ಆಡಲು ಬಾರೋ ಪಾಪಚ್ಚಿ

ಅಭಿವೃದ್ಧಿಯ ಅಂಧಯುಗದ ಪಾಲಾಗಿ ಕಳೆದುಹೋಗುತ್ತಿವೆ ಈ ಪುಟ್ಟ ಹಕ್ಕಿಗಳು

• ಗುರುರಾಜ್ ಎಸ್. ದಾವಣಗೆರೆ

ಹೇಯ್, ನಾನು ನಿಮ್ಮ ಬಾಲ್ಯದ ಗೆಳೆಯ ಗುಬ್ಬಿ ಅಲಿಯಾಸ್ ಗುಬ್ಬಚ್ಚಿ! ನಾಳೆ ಶನಿವಾರ (ಮಾರ್ಚ್ 20) ನನ್ನ ದಿನ! ಪಕ್ಷಿಗಳಲ್ಲೇ ಅತ್ಯಂತ ಚಿಕ್ಕ ಸೈಜಿನ ನನ್ನ ಮೇಲೆ ನಿಮಗೆಲ್ಲಾ ತುಂಬಾ ಪ್ರೀತಿ. ನಾನು ಮತ್ತು ನನ್ನ ಸಂಗಾತಿ ನಿಮ್ಮ ಹಳ್ಳಿಯ, ಊರಿನ ಮನೆಯ ಮಾಡಿನಲ್ಲಿ, ಹೆಂಚಿನ ಸಂದಿ, ಬೇಲಿ, ಪೊದೆಗಳಲ್ಲಿ ಇಲ್ಲವೆ ಜಗುಲಿಯ ಗೋಡೆಗೆ ವಾಲಿಸಿ ನೇತು ಹಾಕಿದ್ದ ದೇವರ ಫೋಟೊದ ಹಿಂದೆ ಗೂಡುಕಟ್ಟಿ ಸಂಸಾರ ಹೂಡುತ್ತಿದ್ದೆವು. ನೀವು, ನಿಮ್ಮ ಮನೆಯವರ್‍ಯಾರೂ ನಮ್ಮನ್ನಲ್ಲಿಂದ ಓಡಿಸುತ್ತಿರಲಿಲ್ಲ.

ಜಗುಲಿಯ ಹಜಾರದಲ್ಲೇ ಕಾಳು ಕಡಿ ಹಸನು ಮಾಡುತ್ತಿದ್ದ ನಿಮ್ಮ ಅಮ್ಮಂದಿರು ಮೊರದಿಂದ ಕೇರಿದಾಗ ಹೊರ ಚಿಮ್ಮುತ್ತಿದ್ದ ಕಾಳುಗಳೇ ನಮ್ಮ ಕುಟುಂಬದ ಆಹಾರವಾಗುತ್ತಿತ್ತು. ಒಮ್ಮೊಮ್ಮೆ ಅದು ಸಾಲದಾಗಿ ಪಕ್ಕದ ಬುಟ್ಟಿಯಲ್ಲಿ ತುಂಬಿಟ್ಟಿದ್ದ ಧಾನ್ಯಕ್ಕೇ ಬಾಯಿ ಹಾಕುತ್ತಿದ್ದೆವು. ಆಗಲೂ ಯಾರೂ ನಮ್ಮನ್ನು ಗದರುತ್ತಿರಲಿಲ್ಲ. ದೊಡ್ಡವರ ಗುಣ ನಿಮಗೂ ಬಂದಿತ್ತು. ನಿಮಗೆ ತಿನ್ನಲು ಕೊಡುತ್ತಿದ್ದ ಕಡಲೆ, ಬತ್ತಾಸು, ಹುರಿಗಾಳುಗಳನ್ನು ಶಾಲೆಗೆ ಹೋಗುವ ದಾರಿಯುದ್ದಕ್ಕೂ ನೀವಿಷ್ಟು ತಿಂದು ನಮಗೂ ನೀಡುತ್ತಿದ್ದಿರಿ. ಮನೆಯಲ್ಲಿ ಗೂಡು ಕಟ್ಟಿದರೆ ಅದು ಶುಭಸಂಕೇತವೆಂದೂ ನಂಬಲಾಗಿತ್ತು. ನೀವು ಸಣ್ಣವರಿದ್ದಾಗ ನಿಮ್ಮ ಅಮ್ಮ–ಅಜ್ಜಿಯರು ಪ್ರಸಿದ್ಧ ಕಾಗಕ್ಕ–ಗುಬ್ಬಕ್ಕನ ಕತೆಯನ್ನು ಹೇಳಿ ನಿಮ್ಮನ್ನು ರಮಿಸುತ್ತಿದ್ದರು. ಹೀಗೆ ನಿಮ್ಮ ಪರ್ಸನಾಲಿಟಿ ಡೆವಲಪ್‌ಮೆಂಟ್‌ಗೆ ನಮ್ಮ ಕೊಡುಗೆ ತುಂಬಾ ಇರುತ್ತಿತ್ತು.

ಅದೇನಾಯಿತೋ! ನೋಡ ನೋಡುತ್ತಿದ್ದಂತೆ ನೀವು ಹಳ್ಳಿಯ ಶಾಲೆ ಬಿಟ್ಟು ಪಟ್ಟಣಕ್ಕೆ ಹೋದಿರಿ. ಮಾಡ ಹಂಚಿನ, ಹುಲ್ಲಿನ ತಾರಸಿಯಿದ್ದ ನಿಮ್ಮ ಮನೆಗಳು ಗಟ್ಟಿ ಕಾಂಕ್ರೀಟಿನ ಮನೆಗಳಾಗಿ ನಮ್ಮ ಪ್ರವೇಶಕ್ಕೆ ದಾರಿ ಮುಚ್ಚಿತು. ದಿನಸಿಯೆಲ್ಲ ಮೊದಲೇ ಶುದ್ಧಗೊಂಡು ಪ್ಯಾಕೆಟ್‌ಗಳಲ್ಲಿ ಮನೆ ತಲುಪಲು ಶುರುವಾಗಿ, ನಮ್ಮ ಅನ್ನದ ಮೂಲ ಇಲ್ಲವಾಯಿತು. ನಾವು ಬೇರೆ ದಾರಿ ಇಲ್ಲದೆ ಹೊಲ-ಗದ್ದೆಗಳ ತೆನೆಗಳಿಗೆ ಬಾಯಿ ಹಾಕಿ, ಸಿಂಪಡಿಸಿದ ಕೀಟನಾಶಕಗಳಿಂದ ನರಕಯಾತನೆ ಅನುಭವಿಸಿದೆವು. ಹೊಲ- ಗದ್ದೆಗಳ ಬದುವಿನಲ್ಲಿ ಜಾಸ್ತಿ ಮರಗಳಿದ್ದರೆ ಅದನ್ನು ಅರಣ್ಯ ಎಂದು ಘೋಷಿಸುವ ಕಾನೂನು ಬಂದದ್ದರಿಂದ ನಿಮ್ಮ ದೊಡ್ಡವರು ಹಣ್ಣುಹಂಪಲು ಬಿಡುತ್ತಿದ್ದ ಇದ್ದಬದ್ದ ಮರಗಳನ್ನು ಕಡಿದು ಸಪಾಟು ಮಾಡಿಬಿಟ್ಟರು. ಇದರ ಜೊತೆಗೆ ನಿಮ್ಮೂರಿಗೆ ಮೊಬೈಲೂ ಬಂದು ಸಿಗ್ನಲ್ ಕಂಬಗಳೂ ಬಂದವು. ಅವು ಹೊಮ್ಮಿಸುವ ವಿಕಿರಣ ನಮ್ಮ ಕುಲವನ್ನೇ ನಾಶ ಮಾಡಲು ಮುಂದಾದಾಗ ಊರು ಬಿಡುವಂತಾಯಿತು. ಈಗಿನ ತಾಯಂದಿರಿಗೆ ನಮ್ಮ ನೆನಪೇ ಇಲ್ಲ. ಅವರೆಲ್ಲ ಡೊರೆಮಾನ್-ಪೋಕೆಮಾನ್- ಸೂಪರ್‌ಮ್ಯಾನ್ ಕತೆ ಹೇಳುತ್ತಾರೆ.

ಕಳೆದ 30 ವರ್ಷಗಳಲ್ಲಿ ನಮ್ಮ ಸಂಖ್ಯೆ ಶೇ 75ರಷ್ಟು ಕಡಿಮೆಯಾಗಿದೆ. ನಾವು ವಿಶ್ವದಾದ್ಯಂತ 26 ಜಾತಿಗಳಲ್ಲಿ ಹಂಚಿಹೋಗಿದ್ದೇವೆ. ನಮ್ಮ ಬಹುಸಂಖ್ಯೆಯೇ ನಮಗೆ ಮುಳ್ಳಾಗಿದ್ದಿದೆ. ಚೀನಾದ ಕ್ರಾಂತಿಕಾರಿ ನಾಯಕ ಮಾವೊ, ಬೆಳೆಯುವ ಧಾನ್ಯವನ್ನೆಲ್ಲಾ ನಾವು ಖಾಲಿ ಮಾಡುತ್ತೇವೆ ಎಂದು ಸಾಮೂಹಿಕ ವಧೆ ಮಾಡಿಸಿದಾಗ, ಮಿಡತೆಗಳ ಸಂಖ್ಯೆ ಹೆಚ್ಚಾಗಿ, ಅವು ಇದ್ದ ಬದ್ದ ಬೆಳೆಯನ್ನೆಲ್ಲಾ ನುಂಗಿ ಐದು ವರ್ಷಗಳ ಕಾಲ ಭಾರಿ ಆಹಾರಕ್ಷಾಮ ಸೃಷ್ಟಿಯಾಯಿತು. ಕಂಗಾಲಾದ ಮಾವೊ ವಿಶ್ವದ ನಾಯಕರ ಬಳಿ ಬೇಡಿ ಅಂದಿನ ರಷ್ಯಾದಿಂದ 2 ಕೋಟಿ, ನಮ್ಮ ದೇಶದಿಂದ 75 ಲಕ್ಷ ಗುಬ್ಬಿಗಳನ್ನು ಆಮದು ಮಾಡಿಕೊಂಡು ಬೆಳೆಗಳನ್ನು ಮೊದಲಿನ ಸ್ಥಿತಿಗೆ ತಂದುಕೊಂಡ.



ಹಿಂದೆ ನಾವಿದ್ದ ಜಾಗದಲ್ಲಿ ಮೈನಾಗಳು ಬಂದು ನೆಲೆಸಿವೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ತಜ್ಞರು ಹೇಳುವುದು ನಮ್ಮ ಕಿವಿಗೂ ಬಿದ್ದಿದೆ. ನಮ್ಮನ್ನು ಕಳೆದುಕೊಂಡ ಮೇಲೆ ನಿಮಗೆ ನಮ್ಮ ಮೇಲೆ ಅಕ್ಕರೆ ಶುರುವಾಗಿದೆ. ನಮ್ಮ ಸಂತತಿ ವೃದ್ಧಿಗೆ ‘ನೇಚರ್ ಫಾರ್ ಎವರ್’ ಸೊಸೈಟಿಯ ದಿಲಾವರ್ ಮೊಹಮದ್, ‘ವೈಲ್ಡ್‌ಲೈಫ್ ವೆಲ್‌ಫೇರ್ ಸೊಸೈಟಿ’ಯ ಮಂಜುನಾಥ ನಾಯಕ, ಚಿಕ್ಕೋಡಿಯ ವಿಠೋಬಾ, ಝೆಡ್ ಪ್ರತಿಷ್ಠಾನ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಗುಬ್ಬಿ ಲ್ಯಾಬ್ಸ್ ವತಿಯಿಂದ ನಮ್ಮ ಬಗ್ಗೆ ಕಾಳಜಿ ತೋರಿಸಿ, ಶಾಲಾ ಮಕ್ಕಳು ಹಾಗೂ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ದೆಹಲಿ, ಬಿಹಾರ ರಾಜ್ಯಗಳು ರಾಜ್ಯಪಕ್ಷಿ ಎಂಬ ಗೌರವ ನೀಡಿವೆ. ಅಂಚೆ ಇಲಾಖೆ ಸ್ಟ್ಯಾಂಪ್ ಬಿಡುಗಡೆ ಮಾಡಿದೆ.

ವಿಶೇಷವೆಂದರೆ, ತಮಿಳುನಾಡಿನ ಗ್ರಾಮ ಪೋಥಕುಡಿಯ ಮುಖ್ಯ ವಿದ್ಯುತ್ ಸ್ವಿಚ್ ಬೋರ್ಡ್ ಮೇಲೆ ನಾವು ಗೂಡು ಕಟ್ಟಿದಾಗ, ನಮ್ಮ ಸಂತಾನಾಭಿವೃದ್ಧಿ ಮುಗಿದು ಮರಿಗಳು ಹಾರುವವರೆಗೆ 3 ತಿಂಗಳು ಇಡೀ ಹಳ್ಳಿಯ ಜನ ಸ್ವಿಚ್‌ಬಾಕ್ಸ್ ಬಳಿ ಬರದೆ ಕತ್ತಲಿನಲ್ಲೇ ಜೀವನ ನಡೆಸಿದ್ದರು. ಇವರ ತ್ಯಾಗಕ್ಕೆ ನಾವು ಮೂಕವಿಸ್ಮಿತರಾಗಿದ್ದೇವೆ. ಮದುರೆಯ ವಕೀಲ ಅರುಣ್ ಸ್ವಾಮಿನಾಥನ್ ಅವರ ಸ್ಕೂಟಿಯ ಸ್ಪೆಪ್ನಿಯ ಜಾಗದಲ್ಲಿ ಗೂಡು ಕಟ್ಟಿದಾಗ ಅವರಂತೂ 45 ದಿನ ಸ್ಕೂಟರ್ ಅನ್ನು ನಿಲ್ಲಿಸಿದ ಜಾಗದಿಂದ ತೆಗೆದಿರಲಿಲ್ಲ. ಇಂಥ ಅನೇಕ ಮಾನವೀಯ ಘಟನೆಗಳಿಗೆ ಸಾಕ್ಷಿಯಾಗಿದ್ದೇವೆ.

ನೀವೇನೂ ನಮ್ಮ ಶತ್ರುಗಳಲ್ಲ. ಅಭಿವೃದ್ಧಿಯ ಅಂಧಯುಗದ ಪಾಲಾಗಿ ನಮ್ಮನ್ನು ಕಳೆದುಕೊಳ್ಳುತ್ತಿದ್ದೀರಿ. ಸ್ವಲ್ಪ ಬಿಡುವು ಮಾಡಿಕೊಂಡು ಪ್ರೀತಿಯಿಂದ ಕರೆದು ಜಾಗ ಕೊಟ್ಟರೆ ಮತ್ತೆ ಬರುತ್ತೇವೆ. ಅಲ್ಲಿಯವರೆಗೆ ಬೈಬೈ! ಟೇಕ್‌ಕೇರ್.

ಇಂತಿ ನಿಮ್ಮ ಪ್ರೀತಿಯ ಗುಬ್ಬಚ್ಚಿ

ವಾಚಕರ ವಾಣಿ

‘ದುಡಿಯೋಣ ಬಾ’– ಅರಿವು ಅಗತ್ಯ

ರೈತರ ಬದುಕಿಗೆ ಆಧಾರವಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ‘ದುಡಿಯೋಣ ಬಾ’ ಎಂಬ ಅಭಿಯಾನ ಮಾರ್ಚ್ 15ರಿಂದ ಆರಂಭವಾಗಿರುವುದು ಖುಷಿಯ ವಿಚಾರ. ಆದರೆ ಈ ಅಭಿಯಾನದ ಗುರಿ, ಉದ್ದೇಶಗಳನ್ನು ಮರೆತ ಕೆಲವು ಗ್ರಾಮ ಪಂಚಾಯಿತಿಗಳು, ಜನರಿಗೆ ಇದರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದಿರುವುದು ಬೇಸರದ ಸಂಗತಿ.

ಗ್ರಾಮ ಪಂಚಾಯಿತಿ ಸೂಚನಾ ಫಲಕದಲ್ಲಿಯೂ ಅಭಿಯಾನದ ವಿಷಯ ಕಾಣುತ್ತಿಲ್ಲ. ಕೊರೊನಾದ ಎರಡನೇ ಅಲೆ ಬೀಸುತ್ತಿರುವುದರಿಂದ ಜನ ಕೆಲಸವನ್ನು ಅರಸಿ ವಲಸೆ ಹೋಗುತ್ತಿರುವುದು ಆತಂಕಕಾರಿಯಾಗಿದೆ. ಜನರಿಗೆ ಈ ಅಭಿಯಾನದ ಬಗ್ಗೆ ಅಷ್ಟೊಂದು ಮಾಹಿತಿ ಇಲ್ಲದಿರುವುದನ್ನೇ ಗುರಿಯಾಗಿ ಇಟ್ಟುಕೊಂಡು ಅಧಿಕಾರಿಗಳು ಸಾರ್ವಜನಿಕರನ್ನು ಸತಾಯಿಸದೆ, ದುಡಿದ ಕೂಲಿಯನ್ನು ಸಮರ್ಪಕವಾಗಿ ತಲುಪಿಸಲಿ.

ಶ್ರೀಧರ ಎಸ್. ವಾಣಿ, ಕಲ್ಲತಾವರಗೇರಿ, ಕೊಪ್ಪಳ

ಸಿರಿಧಾನ್ಯ: ರೈತರಿಗೂ ಸಿಗಲಿ ಮನ್ನಣೆ

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಒಕ್ಕೂಟ (ಎಫ್‌ಎಒ) 2023 ಅನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿ ಆಚರಿಸಲು ಮುಂದಾಗುವ ಮೂಲಕ, ಸಿರಿಧಾನ್ಯಕ್ಕೆ ಜಾಗತಿಕ ಮನ್ನಣೆ ದೊರೆತಿರುವುದು (ಪ್ರ.ವಾ., ಮಾರ್ಚ್ 13) ಹೆಮ್ಮೆಯ ವಿಚಾರ. ಸಿರಿಧಾನ್ಯಗಳು ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ತೊಂದರೆಗಳನ್ನು ನಿವಾರಿಸುತ್ತವೆ ಎಂದು ಹೇಳಲಾಗುತ್ತದೆ. ಅವುಗಳಲ್ಲಿ ಪೋಷಕಾಂಶ, ನಾರಿನ ಅಂಶ, ವಿಟಮಿನ್ ಹೆಚ್ಚಾಗಿದ್ದು, ಅತಿ ಕಡಿಮೆ ನೀರಿನಲ್ಲಿ, ಕ್ಲಿಷ್ಟ, ಬದಲಾದ ಹವಾಮಾನದಲ್ಲಿ ಸಹ ಕಡಿಮೆ ಅವಧಿಯಲ್ಲಿ (80- 90 ದಿನ), ರೋಗ, ಕೀಟದ ಹಾವಳಿ ಇಲ್ಲದೆ ಬೆಳೆಯುತ್ತವೆ. ಆದರೆ ಸಿರಿಧಾನ್ಯ ಕಡಿಮೆ ಇಳುವರಿ (ಎಕರೆಗೆ 400- 600 ಕೆ.ಜಿ) ನೀಡುತ್ತದೆ. ಸಿರಿಧಾನ್ಯವನ್ನು ಪಡಿತರದಲ್ಲಿ, ಅಂಗನವಾಡಿಯಲ್ಲಿ, ಶಾಲೆಯ ಬಿಸಿಯೂಟದಲ್ಲಿ, ಹಾಸ್ಟೆಲ್, ಕ್ಯಾಂಟೀನ್‌ಗಳಲ್ಲಿ ಬಳಕೆ ಮಾಡುವುದರಿಂದ ಅದಕ್ಕೆ ಹೆಚ್ಚಿನ ಮನ್ನಣೆ ದೊರೆಯುತ್ತದೆ.

ಈಗ ಸಿರಿಧಾನ್ಯ ಬೆಳೆದ ರೈತರಿಗೆ ಕೆ.ಜಿ.ಗೆ ₹ 12- 16 ದೊರೆಯುತ್ತಿದ್ದು, ಮಾಲ್‌ಗಳಲ್ಲಿ ಅದು ಕೆ.ಜಿ.ಗೆ ₹ 60-100ರಂತೆ ಮಾರಾಟವಾಗುತ್ತಿದೆ. ಸಿರಿಧಾನ್ಯಕ್ಕೆ ಉತ್ಪಾದನಾ ವೆಚ್ಚಕ್ಕೆ ಲಾಭವಾಗುವಂತೆ ನ್ಯಾಯವಾದ ಕನಿಷ್ಠ ಬೆಂಬಲ ಬೆಲೆ ದೊರೆಯುವಂತೆ ಮಾಡಿದರೆ, ಅದನ್ನು ಬೆಳೆದ ರೈತರಿಗೆ ಮನ್ನಣೆ ದೊರೆಯುತ್ತದೆ. ಸಿರಿಧಾನ್ಯ ಬೀಜ ಉತ್ಪಾದನೆ, ಸಂಸ್ಕರಣೆ, ಮೌಲ್ಯವರ್ಧನೆ, ಮಾರಾಟಕ್ಕೆ ಬೆಂಬಲ ನೀಡಬೇಕು.

ಡಾ. ಎಚ್.ಆರ್.ಪ್ರಕಾಶ್, ಮಂಡ್ಯ

ಸಹಬಾಳ್ವೆಗೆ ಯಾವುದು ಮಾನದಂಡ?

ಅಂತರ್ಜಾತಿ ವಿವಾಹ ತಡೆಗೆ ಮಾತ್ರ ಮಂಡಳಿ ರಚಿಸಬೇಕೆಂದು ಪೇಜಾವರ ಮಠಾಧೀಶರು ಹೇಳಿದ್ದಾರೆ. ವಿವಾಹ ಎನ್ನುವುದು ನಿಜಕ್ಕೂ ಜಾತಿಗೆ ಸಂಬಂಧಿಸಿದ್ದೇ? ಜಾತಿ, ಕುಲ, ನಕ್ಷತ್ರ, ಧರ್ಮ, ಗೋತ್ರ ಎನ್ನುವುದು ಪರಸ್ಪರ ವ್ಯಕ್ತಿಗಳಲ್ಲಿ, ಸಂಗಾತಿಗಳಲ್ಲಿ ಪ್ರೀತಿ, ಸೌಹಾರ್ದ, ಕರುಣೆ, ಅನುಕಂಪ ಹಾಗೂ ಮೈತ್ರಿಯನ್ನು ಬೆಳೆಸುತ್ತಿದೆಯೇ? ಎಲ್ಲಾ ವಿಧಿ ವಿಧಾನಗಳನ್ನು, ಜಾತಿ ಧರ್ಮಗಳನ್ನು ಅನುಸರಿಸಿ ಮದುವೆ ಮಾಡಿದ ದಂಪತಿಗಳು ನಿಜಕ್ಕೂ ಸಂತೋಷವಾಗಿ, ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದಾರೆಯೇ? ಮಾನಸಿಕ, ದೈಹಿಕ, ಭಾವನಾತ್ಮಕ ನೋವುಗಳನ್ನು ತಿಂದುಂಡು, ಕುಟುಂಬದ ಮರ್ಯಾದೆ ಅಂತಲೋ ವ್ಯಕ್ತಿಘನತೆ ಅಂತಲೋ ಜಾತಿ, ಧರ್ಮ, ಸಂಸ್ಕಾರ, ನಿಂದೆಗಳಿಗೆ ಹೆದರಿಯೋ ಸತ್ತವರೆಷ್ಟೋ ಸತ್ತಂತೆ ಬದುಕುತ್ತಿರುವವರೆಷ್ಟೋ?! ಮದುವೆ ಎಂಬುದು ಕೇವಲ ಸಂತಾನೋತ್ಪತ್ತಿ ನಿಮಿತ್ತವೇ, ಜಾತಿ ನಿಮಿತ್ತವೇ?

ಬಹುತ್ವವುಳ್ಳ ದೇಶದಲ್ಲಿ ತಮ್ಮ ಸಂಗಾತಿಯನ್ನು ಆರಿಸಿಕೊಳ್ಳುವ ಆಯ್ಕೆಯನ್ನು ಎಲ್ಲರಿಗೂ ಕೊಟ್ಟು, ಎಲ್ಲರೂ ಒಡಗೂಡಿ ಬದುಕುವಂತೆ ಮಾಡಬೇಕಾಗಿದೆ. ಪ್ರತಿಯೊಬ್ಬರೂ ಪ್ರತಿಯೊಬ್ಬರನ್ನೂ ಗೌರವಿಸುತ್ತ, ಪ್ರೀತಿಸುತ್ತ ಸ್ವತಂತ್ರವಾಗಿ, ಸಂತೋಷವಾಗಿ ಬದುಕಲು ಅವಕಾಶ ಕಲ್ಪಿಸಬೇಕಾಗಿದೆ.

ಜ್ಯೋತಿ ಭಾಸ್ಕರ್, ಬೆಂಗಳೂರು

ಒಂದು ದೇಶ: ಒಂದು ಕೃಷಿ– ಎಷ್ಟು ಸರಿ?

ಇಂದು ಒಕ್ಕೂಟ ಸರ್ಕಾರವು ‘ಒಂದು ದೇಶ’ತನವನ್ನು- ಅಖಂಡತೆಯ ಪ್ರಣಾಳಿಕೆಯನ್ನು ಸಮಾಜದ ಎಲ್ಲ ಕ್ಷೇತ್ರಗಳಿಗೂ ಹಬ್ಬಿಸುವ ದಿಸೆಯಲ್ಲಿ ಕಾಯ್ದೆಗಳನ್ನು ರೂಪಿಸುತ್ತಿದೆ. ಇಡೀ ದೇಶದ ಕೃಷಿಯನ್ನು ಒಂದುತನಕ್ಕೆ ಒಗ್ಗಿ/ಬಗ್ಗಿಸುವ ಕೆಲಸವನ್ನು ಮೂರು ಕೃಷಿ ಕಾಯ್ದೆಗಳ ಮೂಲಕ ಮಾಡುತ್ತಿದೆ. ‘ಒಂದು ದೇಶ: ಒಂದು ಕೃಷಿ’ ಎನ್ನುವುದು ಶತಶತಮಾನಗಳಿಂದ ನಮ್ಮ ಸಮಾಜವು ಬೆಳೆಸಿಕೊಂಡು ಬಂದಿರುವ ಬ್ರಹ್ಮಾಂಡ ವೈವಿಧ್ಯದ ಕೃಷಿ ಸಂಸ್ಕೃತಿಯನ್ನು ನಾಶ ಮಾಡಿಬಿಡುತ್ತದೆ. ಇದು ನಮ್ಮ ಆರ್ಥಿಕತೆಗೆ ಸೂಕ್ತವಲ್ಲ. ಉದಾಹರಣೆಗೆ, ಕರ್ನಾಟಕದಲ್ಲಿನ ಕೃಷಿಯನ್ನೇ ತೆಗೆದುಕೊಂಡರೆ, ಇಲ್ಲಿ ಕರಾವಳಿ, ಮಲೆನಾಡು, ಅರೆಮಲೆನಾಡು, ಉತ್ತರ- ದಕ್ಷಿಣ ಬಯಲು ಮುಂತಾದವುಗಳನ್ನು ಹಾಗೂ ಹತ್ತಾರು ಕಸುಬುಗಳಾದ ಕಮ್ಮಾರರು, ಚಮ್ಮಾರರು, ಮೇದಾರರು, ಗಾಣಿಗರು, ಕುಂಬಾರರು ಮುಂತಾದವರನ್ನು ಒಳಗೊಂಡ ಬ್ರಹ್ಮಾಂಡ ಭಿನ್ನತೆಯ ಕೃಷಿಸಂಸ್ಕೃತಿ ನಮ್ಮಲ್ಲಿದೆ. ಕೃಷಿಯು ನಮ್ಮಲ್ಲಿ ಕೇವಲ ಉಳುಮೆ, ಬೀಜ ಬಿತ್ತುವುದು, ಬೆಳೆ ಬೆಳೆಯುವುದು ಇಷ್ಟಕ್ಕೇ ಸೀಮಿತವಾಗಿಲ್ಲ. ಬೆಳೆ ಬೆಳೆಯುವುದರ ಜೊತೆಗೆ, ಇಲ್ಲಿ ಜಾನುವಾರು-ಕುರಿ-ಕೋಳಿ ಸಾಕಾಣಿಕೆಯಿದೆ, ಹೈನುಗಾರಿಕೆಯಿದೆ. ಅರಣ್ಯ ಕೃಷಿಯಿದೆ. ಖುಷ್ಕಿ-ತರಿ-ಬಾಗಾಯತು ಬೆಳೆ ಪದ್ಧತಿಗಳಿವೆ. ಇದಕ್ಕೆ ಜಾನುವಾರು ಗೊಬ್ಬರದ ಆಯಾಮವಿದೆ.


ಕೃಷಿಯ ಕಾರ್ಪೊರೇಟೀಕರಣದಿಂದ ಸಾವಯವ, ಪರಿಸರಸ್ನೇಹಿ, ಜಾನುವಾರು ಅವಲಂಬಿತ ಕೃಷಿ ಸಂಸ್ಕೃತಿಗೆ ಪೆಟ್ಟು ಬೀಳುತ್ತದೆ. ರೈತಾಪಿ ಮಹಿಳೆಯರನ್ನು ಕೃಷಿಯಿಂದ ಇದು ಉಚ್ಚಾಟಿಸಿ ಬಿಡುವ ಅಪಾಯ ಇದೆ. ಭಾರಿ ಪ್ರಮಾಣದ ಯಾಂತ್ರೀಕರಣ, ಬಂಡವಾಳ- ಸಾಂದ್ರ ತಂತ್ರಜ್ಞಾನದಿಂದ ಭೂರಹಿತ ಕೃಷಿ ಕೂಲಿಕಾರರ ಬದುಕು ಮೂರಾಬಟ್ಟೆ ಆಗಲಿದೆ. ಈ ಹಿನ್ನೆಲೆಯಲ್ಲಿ ಮೂರು ಕೃಷಿ ಕಾಯ್ದೆಗಳ ಕಾರ್ಪೊರೇಟೀಕರಣದ ಸ್ವರೂಪವನ್ನು ಮತ್ತು ಅದರ ವಿರುದ್ಧ ಭಾರತೀಯ ಕೃಷಿಕರು ನಡೆಸುತ್ತಿರುವ ಆಂದೋಲನವನ್ನು ನೋಡುವ ಅಗತ್ಯವಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಾಳಗಕ್ಕಿಳಿದ ಬೈಡನ್–ಪುಟಿನ್

'ಪುಟಿನ್ ಹಂತಕ' ಎಂದ ಅಮೆರಿಕ ಅಧ್ಯಕ್ಷ: ಕ್ಷಮೆ ಯಾಚನೆಗೆ ರಷ್ಯಾ ಪಟ್ಟು


ಬೈಡನ್

ಅಮೆರಿಕ ಮತ್ತು ರಷ್ಯಾದ ನಡುವೆ 1950ರ ದಶಕದಿಂದಲೂ ಸೌಹಾರ್ದ ಸಂಬಂಧ ಇಲ್ಲ. ಈ ಎರಡು ದೇಶಗಳು ಜಗತ್ತಿನ ಎರಡು ಸೂಪರ್ ಪವರ್‌ಗಳೆಂದು ತಮ್ಮನ್ನು ಕರೆದುಕೊಂಡು ಯಜಮಾನಿಕೆಗಾಗಿ ಶೀತಲ ಸಮರ ನಡೆಸಿದ್ದುವು. ಆ ದಿನಗಳಲ್ಲಿಯೂ ಎರಡೂ ದೇಶಗಳ ನಡುವೆ ಸ್ಪರ್ಧೆ ಮತ್ತು ಸಹಕಾರದ ವಿಶಿಷ್ಟವಾದ ಸಂಬಂಧ ಇತ್ತು. ಈಗ ಅಮೆರಿಕ-ರಷ್ಯಾ ನಡುವಣ ಸಂಬಂಧ ಹಿಂದೆಂದಿಗಿಂತಲೂ ಹದಗೆಟ್ಟಂತೆ ಕಾಣಿಸುತ್ತಿದೆ. ಎರಡೂ ದೇಶಗಳ ನಡುವೆ ಇರುವ ಪೈಪೋಟಿಗೆ ಈಗ ನಾಯಕರ ನಡುವಣ ವೈಮನಸ್ಯದ ಆಯಾಮವೂ ಇದೆ ಎಂಬುದು ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು 'ಹಂತಕ' ಎಂದು 'ಎಬಿಸಿ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. ಪುಟಿನ್ ವಿರೋಧಿ ನಾಯಕ ಅಲೆಕ್ಸಿ ನವಾಲ್ನಿ ಅವರಿಗೆ ವಿಷಪ್ರಾಶನದ ವಿದ್ಯಮಾನವನ್ನು ಇರಿಸಿಕೊಂಡು ಬೈಡನ್ ಹೀಗೆ ಹೇಳಿದ್ದಾರೆ. 2020ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಬೈಡನ್ ಅವರು ಅಧ್ಯಕ್ಷ ಸ್ಥಾನದ ಅಭ್ಯರ್ಥಿಯೇ ಆಗದಂತೆ ನೋಡಿಕೊಳ್ಳಲು ರಷ್ಯಾ ಶ್ರಮಿಸಿದೆ, ಅದರ ಹಿಂದೆ ಇದ್ದದ್ದು ಪುಟಿನ್ ಎಂಬ ಗುಪ್ತಚರ ಮಾಹಿತಿಯು ಅಮೆರಿಕಕ್ಕೆ ಸಿಕ್ಕಿದೆ. ಇದರಿಂದ ಸಂಘರ್ಷ ತೀವ್ರಗೊಳ್ಳಲು ಕಾರಣ ಎನ್ನಲಾಗುತ್ತಿದೆ. 'ಗುಪ್ತಚರ ವರದಿಯು ನಿಜವೇ ಆಗಿದ್ದರೆ ಅದಕ್ಕೆ ಪುಟಿನ್ 'ತಕ್ಕ ಬೆಲೆ ತೆರಬೇಕಾಗುತ್ತದೆ'' ಎಂದೂ ಸಂದರ್ಶನದಲ್ಲಿ ಬೈಡನ್ ಹೇಳಿದ್ದಾರೆ. (2016ರ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವಿನ ಹಿಂದೆ ಪುಟಿನ್ ಕೈವಾಡ ಇತ್ತು ಎಂಬುದು ಕೂಡ ಆಗ ಬಹುದೊಡ್ಡ ಚರ್ಚೆಯ ವಿಷಯ ಆಗಿತ್ತು.) ಹಾಗಾಗಿಯೇ, ಅಮೆರಿಕ-ರಷ್ಯಾ ನಡುವಣ ಸಂಬಂಧದಲ್ಲಿ ವೈಯಕ್ತಿಕ ಇಷ್ಟಾನಿಷ್ಟಗಳು ಕೂಡ ನಿರ್ಣಾಯಕ ಆಗಬಹುದು ಎಂಬ ಪರಿಸ್ಥಿತಿ ನಿರ್ಮಾಣ ಆಗಿದೆ.

ಬೈಡನ್ ಹೇಳಿಕೆಯು ಪುಟಿನ್ ಅವರನ್ನು ಕೆರಳಿಸಿದೆ. ಅಮೆರಿಕದಲ್ಲಿರುವ ರಾಯಭಾರಿ ಅನಾಟೋಲಿ ಆಂಟೊನೋವ್ ಅವರನ್ನು ರಷ್ಯಾ ಕರೆಸಿಕೊಂಡಿದೆ. 'ಈಗಿನ ಸನ್ನಿವೇಶದಲ್ಲಿ ಏನು ಮಾಡಬಹುದು ಮತ್ತು ಅಮೆರಿಕದ ಜತೆಗಿನ ಸಂಬಂಧದ ಮೇಲೆ ಆಗುವ ಪರಿಣಾಮಗಳು ಏನು ಎಂಬುದನ್ನು ವಿಶ್ಲೇಷಿಸುವುದಕ್ಕಾಗಿ ಮಾಸ್ಕೋಗೆ ಬರುವಂತೆ ರಾಯಭಾರಿಗೆ ಆಹ್ವಾನ ನೀಡಲಾಗಿದೆ' ಎಂದು ರಷ್ಯಾದ ವಿದೇಶಾಂಗ ಸಚಿವಾಲಯ ಹೇಳಿದೆ.

ಆದರೆ, ಬೈಡನ್ ಹೇಳಿಕೆಯನ್ನು ರಷ್ಯಾ ಬಹಳ ಗಂಭೀರವಾಗಿಯೇ ತೆಗೆದುಕೊಂಡಿದೆ.

'ನಮ್ಮ ದೇಶದ ಜನರನ್ನು ಬೈಡನ್ ಅವಮಾನಿಸಿದ್ದಾರೆ. ಪುಟಿನ್ ಮೇಲೆ ದಾಳಿ ಎಂದರೆ ದೇಶದ ಮೇಲೆ ದಾಳಿ ನಡೆಸಿದಂತೆ' ಎಂದು ರಷ್ಯಾ ಕೆಳಮನೆಯ ಸಭಾಪತಿ ವ್ಯಾಚೆಸ್ಲಾವ್ ವೊಲೊಡಿನ್ ಹೇಳಿದ್ದಾರೆ. ತಮ್ಮ ಹೇಳಿಕೆಗೆ ಬೈಡನ್ ಅವರು ವಿವರಣೆ ಕೊಡಬೇಕು ಮತ್ತು ಕ್ಷಮೆ ಯಾಚಿಸಬೇಕು ಎಂದು ರಷ್ಯಾ ಸಂಸತ್ತಿನ ಮೇಲ್ಮನೆ ಉಪಸಭಾಪತಿ ಕಾನ್‌ಸ್ಟಾಂಟಿನ್ ಕೊಸ್ಚೆವ್ ಹೇಳಿದ್ದಾರೆ. 'ಬೈಡನ್ ಅವರಂತಹ ಮುತ್ಸದ್ದಿಯಿಂದ ಇಂತಹ ಹೇಳಿಕೆ ಸ್ವೀಕಾರಾರ್ಹವಲ್ಲ. ಯಾವ ಸನ್ನಿವೇಶದಲ್ಲಿಯೂ ಇಂತಹ ಹೇಳಿಕೆ ಒಪ್ಪಿತವಲ್ಲ. ದ್ವಿಪಕ್ಷೀಯ ಸಂಬಂಧವನ್ನು ಇಂತಹ ಹೇಳಿಕೆಯು ಸರಿಪಡಿಸಲಾರದ ರೀತಿಯಲ್ಲಿ ಹಾಳುಗೆಡವುತ್ತದೆ' ಎಂದು ಕೊಸ್ಚೆವ್ ಹೇಳಿದ್ದಾರೆ.

'ನಾವು ನೇರವಾಗಿಯೇ ಇರುತ್ತೇವೆ. ಅಧ್ಯಕ್ಷರು ಮಾತನಾಡಿದ ರೀತಿಯಲ್ಲಿಯೇ, ನಮಗೆ ಕಳವಳ ಇರುವ ವಿಚಾರಗಳ ಬಗ್ಗೆ ಮಾತನಾಡುತ್ತೇವೆ. ತಮ್ಮ ಕೃತ್ಯಗಳ ಹೊಣೆಯನ್ನು ರಷ್ಯನ್ನರು ಹೊತ್ತುಕೊಳ್ಳಲೇಬೇಕಾಗುತ್ತದೆ' ಎಂದು ಶ್ವೇತಭವನದ ವಕ್ತಾರೆ ಜೆನ್ ಸಾಕಿ ಹೇಳಿದ್ದಾರೆ.

ಆದರೆ, ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಹಳಿ ತಪ್ಪಿಸುವ ಹೊಣೆಯು ಅಮೆರಿಕದ್ದೇ ಆಗಿದೆ ಎಂದು ರಷ್ಯಾ ಹೇಳಿದೆ.

ಎರಡೂ ದೇಶಗಳ ಪ್ರತಿನಿಧಿಗಳು ನಿಷ್ಠುರವಾಗಿಯೇ ಮಾತನಾಡುತ್ತಿದ್ದಾರೆ ಎಂಬುದು ಪರಿಸ್ಥಿತಿಯು ಎಷ್ಟು ಸಂಘರ್ಷಮಯವಾಗಿದೆ ಎಂಬುದರ ಸೂಚನೆಯಾಗಿದೆ.


ಪುಟಿನ್

ಟ್ರಂಪ್-ಪುಟಿನ್ ಸೌಹಾರ್ದ ಸಂಬಂಧ


2016ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಪರವಾಗಿ ರಷ್ಯಾ ಹಸ್ತಕ್ಷೇಪ ನಡೆಸಿದೆ ಎಂಬ ಆರೋಪಗಳು ಇವೆ. ಇದನ್ನು ಡೆಮಾಕ್ರಟಿಕ್ ಪಕ್ಷದ ಸದಸ್ಯರು, ನಾಯಕರು ಕಟುವಾಗಿ ಟೀಕಿಸಿದ್ದಾರೆ. ಆದರೆ, ಟ್ರಂಪ್ ಅವರ ರಿಪಬ್ಲಿಕನ್ ಪಕ್ಷವು ಈ ಬಗ್ಗೆ ಚಕಾರ ಎತ್ತಿರಲಿಲ್ಲ. ಬದಲಿಗೆ 2013-2015ರ ಮಧ್ಯೆ ಉದ್ಯಮಿ ಟ್ರಂಪ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಹಲವು ಬಾರಿ ಹಾಡಿ ಹೊಗಳಿದ್ದರು. 2016ರ ಚುನಾವಣೆಯಲ್ಲಿ ಟ್ರಂಪ್ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಈ ಹೊಗಳುವಿಕೆ ಮತ್ತಷ್ಟು ಹೆಚ್ಚಿತು.

ಅಂತರರಾಷ್ಟ್ರೀಯ ವಿದ್ಯಮಾನಗಳಲ್ಲಿ ಪುಟಿನ್ ಅವರು ತೆಗೆದುಕೊಂಡ ನಿಲುವುಗಳನ್ನು ಹಲವು ಸಂದರ್ಭಗಳಲ್ಲಿ ಟ್ರಂಪ್ ಅವರು ಬಹಿರಂಗವಾಗಿಯೇ ಪ್ರಶಂಸಿಸಿದ್ದಾರೆ. ಮಾಧ್ಯಮಗೋಷ್ಠಿಗಳಲ್ಲಿ, ಟ್ವಿಟರ್‌ನಲ್ಲಿ ಪುಟಿನ್ ಪರವಾಗಿ ಮಾತನಾಡಿದ್ದಾರೆ. ಉಕ್ರೇನ್-ರಷ್ಯಾ ಸಂಘರ್ಷ, ರಷ್ಯಾ-ಕ್ರಿಮಿಯನ್ ಸಂಘರ್ಷದ ವೇಳೆ ಪುಟಿನ್ ಅವರು ತೆಗೆದುಕೊಂಡಿದ್ದ ನಿಲುವುಗಳನ್ನು ಟ್ರಂಪ್ ಹೊಗಳಿದ್ದರು. 'ಪುಟಿನ್ ಅವರು ತಮ್ಮ ರಾಷ್ಟ್ರದ ಹಿತಾಸಕ್ತಿಗಾಗಿ ಅತ್ಯಂತ ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ' ಎಂದು ಟ್ರಂಪ್ ಟ್ವೀಟ್ ಮಾಡಿದ್ದರು. ಈ ಟ್ವೀಟ್‌ಗೆ ಹಲವು ಅಮೆರಿಕನ್ನರು ಆಕ್ಷೇಪ ವ್ಯಕ್ತಪಡಿಸಿದ್ದರು.

2017ರಲ್ಲಿ ಅಫ್ಗಾನಿಸ್ತಾನದಲ್ಲಿ ಅಮೆರಿಕದ ಸೈನಿಕರನ್ನು, ಉಗ್ರರು ಹತ್ಯೆ ಮಾಡಿದ್ದರು. ಆ ಉಗ್ರ ಸಂಘಟನೆಗೆ ರಷ್ಯಾ ಹಣಕಾಸು ಮತ್ತು ಶಸ್ತ್ರಾಸ್ತ್ರ ನೆರವು ನೀಡಿದೆ ಎಂದು ಅಮೆರಿಕದ ಗುಪ್ತಚರ ಇಲಾಖೆ ವರದಿ ನೀಡಿತ್ತು. ಆಗಲೂ ರಷ್ಯಾ ವಿರುದ್ಧವಾಗಿ ಟ್ರಂಪ್ ಅವರು ಒಂದು ಹೇಳಿಕೆಯನ್ನೂ ನೀಡಿರಲಿಲ್ಲ. ಪುಟಿನ್ ಸಹ ಟ್ರಂಪ್ ವಿರುದ್ಧವಾಗಿ ಒಂದೂ ಹೇಳಿಕೆ ನೀಡಿರಲಿಲ್ಲ. ಉಕ್ರೇನ್ ಜತೆಗಿನ ಸಂಘರ್ಷದ ಫಲವಾಗಿ ರಷ್ಯಾ ಮೇಲೆ ಅಮೆರಿಕವು ಆರ್ಥಿಕ ದಿಗ್ಬಂಧನ ಹೇರಿತ್ತು. ಭಾರತವು ರಷ್ಯಾದೊಂದಿಗೆ ಮಾಡಿಕೊಂಡಿದ್ದ ಶಸ್ತ್ರಾಸ್ತ್ರ ಒಪ್ಪಂದವನ್ನು ಕೈಬಿಡಬೇಕು ಎಂದು ಅಮೆರಿಕ ಒತ್ತಡ ಹೇರಿತ್ತು. ಆದರೆ, ಅನಂತರ ಈ ಒತ್ತಡವನ್ನು ಕೈಬಿಟ್ಟಿತ್ತು.

ಈಗ ಅಮೆರಿಕದ ನಾಯಕತ್ವ ಬದಲಾಗಿರುವ ಕಾರಣ, ಅಮೆರಿಕದ ನಿಲುವೂ ಬದಲಾಗಿದೆ. ಎರಡೂ ರಾಷ್ಟ್ರಗಳು ಯುದ್ಧ ಮಾಡುವ ಸಾಧ್ಯತೆ ಅತ್ಯಂತ ಕಡಿಮೆ. ಆದರೆ, ಈ ಸಂಘರ್ಷವು ವಾಣಿಜ್ಯ ಸಮರಕ್ಕೆ ಕಾರಣವಾಗುವ ಸಾಧ್ಯತೆ ಅತ್ಯಧಿಕವಾಗಿದೆ. ರಷ್ಯಾದ ಹಸ್ತಕ್ಷೇಪ ವಿಚಾರವನ್ನು ಅಧ್ಯಕ್ಷ ಜೋ ಬೈಡನ್ ಗಂಭೀರವಾಗಿ ಪರಿಗಣಿಸಿದ್ದಾರೆ. ರಷ್ಯಾ ಮೇಲೆ ಹೇರಲಿರುವ ಆರ್ಥಿಕ ದಿಗ್ಬಂಧನದ ಪರಿಣಾಮವು ಭಾರತದ ಮೇಲೂ ಆಗುವ ಸಾಧ್ಯತೆ ಇದೆ. ರಷ್ಯಾದಿಂದ ಇನ್ನಷ್ಟೇ ಬರಬೇಕಿರುವ ಎಸ್-400 ಟ್ರಯಂಫ್ ಕ್ಷಿಪಣಿ ನಿರೋಧಕ ವ್ಯವಸ್ಥೆ, ಭಾರತಕ್ಕೆ ಪೂರೈಕೆಯಾಗುವುದು ವಿಳಂಬವಾಗುವ ಸಾಧ್ಯತೆ ಇದೆ. ಅಥವಾ ಆ ಒಪ್ಪಂದವನ್ನೇ ರದ್ದುಪಡಿಸಿ ಎಂದು ಅಮೆರಿಕವು ಭಾರತದ ಮೇಲೆ ಒತ್ತಡ ಹೇರುವ ಅಪಾಯವೂ ಇದೆ.

ಅಮೆರಿಕದ ಮಿತ್ರರಾಷ್ಟ್ರಗಳ ಮೇಲೆ ರಷ್ಯಾ ಸಹ ದಿಗ್ಬಂಧನ ಹೇರುವ ಸಾಧ್ಯತೆ ಇದೆ. ಅಮೆರಿಕದ ಒತ್ತಡಕ್ಕೆ ಮಣಿದರೆ, ಭಾರತದ ಮೇಲೂ ರಷ್ಯಾ ಅಸಮಾಧಾನ-ಗೊಳ್ಳುವ ಸಾಧ್ಯತೆ ಇದೆ. ಭಾರತಕ್ಕೆ ಅತಿಹೆಚ್ಚು ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದು-ಗುಂಡುಗಳನ್ನು ಪೂರೈಕೆ ಮಾಡುವ ಅತ್ಯಂತ ದೊಡ್ಡ ರಾಷ್ಟ್ರ ರಷ್ಯಾ. ಭಾರತದ ಮೇಲೆ ರಷ್ಯಾ ಅಸಮಾಧಾನಗೊಂಡರೆ, ಶಸ್ತ್ರಾಸ್ತ್ರ ಪೂರೈಕೆಯಲ್ಲೂ ವ್ಯತ್ಯಯ-ವಾಗುವ ಅಪಾಯವಿದೆ.


ಟ್ರಂಪ್


ರಷ್ಯಾ–ಜರ್ಮನಿ ನಡುವೆ ಸಂಪರ್ಕ ಕಲ್ಪಿಸುವ ನಾರ್ಡ್ ಸ್ಟ್ರೀಮ್ ಗ್ಯಾಸ್ ಪೈಪ್‌ಲೈನ್ ಯೋಜನೆ–ಸಂಗ್ರಹ ಚಿತ್ರ

ಗ್ಯಾಸ್ ಪೈಪ್‌ಲೈನ್ ವಿಚಾರದಲ್ಲಿ ಸಂಘರ್ಷ

ರಷ್ಯಾದಿಂದ ಜರ್ಮನಿಗೆ ನೈಸರ್ಗಿಕ ಅನಿಲವನ್ನು ಪೂರೈಸುವ ನಿರ್ಮಾಣ ಹಂತದ ನಾರ್ಡ್ ಸ್ಟ್ರೀಮ್ 2 ಗ್ಯಾಸ್ ಪೈಪ್‌ಲೈನ್ ವಿಚಾರದಲ್ಲಿ ಅಮೆರಿಕ–ರಷ್ಯಾ ನಡುವೆ ಸಂಘರ್ಷ ಏರ್ಪಟ್ಟಿದೆ. ಈ ಯೋಜನೆಗೆ ಸಂಬಂಧಿಸಿದ ಸಂಸ್ಥೆಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ. ಕಾಮಗಾರಿಯಲ್ಲಿ ತೊಡಗಿರುವ ರಷ್ಯಾದ ಹಡಗಿನ ಮೇಲೆ ನಿರ್ಬಂಧ ವಿಧಿಸಿದೆ. ಇದು ಯುರೋಪ್‌ಗೆ ಒಂದು ಕೆಟ್ಟ ಯೋಜನೆ ಆಗಬಲ್ಲದು ಎಂದು ಬೈಡನ್ ಒತ್ತಿ ಹೇಳಿದ್ದಾರೆ. ನ್ಯಾಟೊದಲ್ಲಿ ರಷ್ಯಾದ ಪ್ರಭಾವ ಹೆಚ್ಚಳವಾಗಲು ಈ ಯೋಜನೆ ದಾರಿ ಮಾಡಿಕೊಡಬಹುದು ಎಂಬ ಬಗ್ಗೆ ಅಮೆರಿಕ ಸಂಸದರು ದನಿ ಎತ್ತಿದ್ದಾರೆ.

2019ರಿಂದಲೂ ನಾರ್ಡ್ ಸ್ಟ್ರೀಮ್ 2 ಯೋಜನೆಯು ಅಮೆರಿಕದ ಟೀಕೆಗೆ ಗುರಿಯಾಗಿದೆ. ನೈಸರ್ಗಿಕ ಅನಿಲಕ್ಕಾಗಿ ಯುರೋಪ್‌ನ ದೇಶಗಳು ರಷ್ಯಾದ ಮೇಲೆ ಸಂಪೂರ್ಣವಾಗಿ ಅವಲಂಬನೆಯಾಗುತ್ತವೆ ಎಂಬುದು ಅಮೆರಿಕದ ಆತಂಕ. ಇದಕ್ಕೆ ತಲೆಕೆಡಿಸಿಕೊಳ್ಳದ ಜರ್ಮನಿ, ಅಮೆರಿಕ ನಿರ್ಬಂಧದ ನಡುವೆಯೂ ಯೋಜನೆಯನ್ನು ಪುನರಾರಂಭಿಸಿರುವುದು ಅಮೆರಿಕವನ್ನು ಸಿಟ್ಟಿಗೇಳಿಸಿದೆ.

ಹಸ್ತಕ್ಷೇಪಕ್ಕೆ ಅಮೆರಿಕದ ಆಕ್ಷೇಪ

2020ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ರಷ್ಯಾ ಮಧ್ಯಪ್ರವೇಶ ಮಾಡಿರುವ ಸಾಧ್ಯತೆಯಿದೆ ಎಂದು ಅಮೆರಿಕ ಗುಪ್ತಚರ ಇಲಾಖೆಯು ಮಂಗಳವಾರ ನೀಡಿರುವ ವರದಿಯು ಬೈಡನ್ ಅವರನ್ನು ಕೆರಳಿಸಿದೆ. 2016ರ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಅವರ ಗೆಲುವಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಪರೋಕ್ಷ ನೆರವು ನೀಡಿದ್ದರು ಎಂಬ ವಿವಾದವೇ ಇನ್ನೂ ತಣ್ಣಗಾಗಿಲ್ಲ. ಹೀಗಿರುವಾಗ 2020ರ ಅಧ್ಯಕ್ಷೀಯ ಚುನಾವಣೆಯಲ್ಲೂ ಟ್ರಂಪ್ ಅವರ ಪರವಾಗಿ ಪುಟಿನ್ ಕೆಲಸ ಮಾಡಿದ್ದಾರೆ ಎಂದು ಗುಪ್ತಚರ ವರದಿ ಉಲ್ಲೇಖಿಸಿದೆ. ಟ್ರಂಪ್ ಜೊತೆಗಿನ ಸೌಹಾರ್ದ ಸಂಬಂಧದ ಕಾರಣ ಪುಟಿನ್ ಅವರು ಬೈಡನ್ ಅವರನ್ನು ಸೋಲಿಸಲು ಶ್ರಮಿಸಿರುವ ಸಾಧ್ಯತೆಯಿದೆ ಎಂದು ವರದಿ ಹೇಳಿದೆ.

ಚುನಾವಣೆಯ ಸಮಯದಲ್ಲಿ ಸಾಮಾಜಿಕ ಮಾಧ್ಯಮದ ಮೂಲಕ ಮತದಾರರ ಮೇಲೆ ಪ್ರಭಾವ ಬೀರುವ ಪ್ರಯತ್ನವನ್ನು ರಷ್ಯಾ ನಡೆಸಿತು ಎಂದು ವರದಿ ಉಲ್ಲೇಖಿಸಿದೆ. ರಷ್ಯಾದ ಗುಪ್ತಚರ ಸಂಸ್ಥೆ ಜತೆ ಸಂಪರ್ಕ ಹೊಂದಿದ ಉಕ್ರೇನ್ ಮೂಲದ ವ್ಯಕ್ತಿಗಳು, ಅಮೆರಿಕದ ಕೆಲವು ಪ್ರಮುಖ ವ್ಯಕ್ತಿಗಳು ಮತ್ತು ಮಾಧ್ಯಮಗಳನ್ನು ಬೈಡನ್ ಸೋಲಿಸುವ ಅಭಿಯಾನಕ್ಕೆ ಬಳಸಿಕೊಂಡಿರುವ ಬಗ್ಗೆ ಶಂಕೆ ಇದೆ ಎಂದು ವರದಿ ತಿಳಿಸಿದೆ.

ರಷ್ಯಾದ ನಂಟು ಹೊಂದಿರುವ ಸೈಬರ್ ದಾಳಿಗಳು ಹಾಗೂ ಚುನಾವಣಾ ಸಂಬಂಧಿತ ಆನ್‌ಲೈನ್ ಹಸ್ತಕ್ಷೇಪದ ಬಗ್ಗೆ ಗಟ್ಟಿ ದನಿಯಲ್ಲಿ ಬೈಡನ್ ಮಾತನಾಡಿರುವುದು ಮತ್ತೊಂದು ಸುತ್ತಿನ ಸಂಘರ್ಷದ ಸೂಚನೆ ನೀಡಿದೆ.

ಅಲೆಕ್ಸಿ ವಿಷಪ್ರಾಶನ: ರಷ್ಯಾ ಅಧಿಕಾರಿಗಳಿಗೆ ಅಮೆರಿಕ ನಿರ್ಬಂಧ


ಅಲೆಕ್ಸಿ ನವಾಲ್ನಿ

ಪುಟಿನ್ ಅವರ ಪ್ರಮುಖ ಟೀಕಾಕಾರ ಎನಿಸಿರುವ ಅಲೆಕ್ಸಿ ನವಾಲ್ನಿ ಅವರನ್ನು ಕಳೆದ ವರ್ಷ ವಿಷವಿಟ್ಟು ಕೊಲ್ಲಲು ಯತ್ನಿಸಲಾಗಿತ್ತು. ವಿಷಪ್ರಾಶನ ಮಾಡಿದ ಆರೋಪವನ್ನು ರಷ್ಯಾ ಮೇಲೆ ಅಮೆರಿಕ ಹೊರಿಸಿದರೂ, ಇದನ್ನು ರಷ್ಯಾ ಅಲ್ಲಗಳೆದಿತ್ತು. ಆದರೆ ವಿಷವುಣಿಸಲು ಕಾರಣ ಎನ್ನಲಾದ ರಷ್ಯಾದ ಅಧಿಕಾರಿಗಳ ಮೇಲೆ ಅಮೆರಿಕ ಇದೇ ಮಾರ್ಚ್ 2ರಂದು ನಿರ್ಬಂಧ ವಿಧಿಸಿತ್ತು. ಈ ನಿರ್ಬಂಧದ ಪರಿಣಾಮವಾಗಿ, ಅಮೆರಿಕದಲ್ಲಿರುವ ಈ ಎಲ್ಲ ಅಧಿಕಾರಿಗಳು ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಿದೆ.

ಅಲೆಕ್ಸಿ ಹತ್ಯೆ ಯತ್ನದಲ್ಲಿ ರಷ್ಯಾದ 14 ಸಂಸ್ಥೆಗಳು ಮತ್ತು ಏಳು ಅಧಿಕಾರಿಗಳ ಪಾತ್ರ ಇದೆ ಎಂಬುದು ಅಮೆರಿಕದ ಆರೋಪ. 2018ರಲ್ಲಿಯೂ ಇದೇ ರೀತಿಯ ವಿಷವನ್ನು ರಷ್ಯಾದಿಂದ ದೇಶಭ್ರಷ್ಟನಾಗಿದ್ದ ಸರ್ಜಿ ಸ್ಕ್ರಿಪಾಲ್ ಹಾಗೂ ಆತನ ಮಗಳ ವಿರುದ್ಧ ರಷ್ಯಾ ಬಳಸಿತ್ತು ಎಂದು ಅಮೆರಿಕ ಆಪಾದಿಸಿತ್ತು. ರಷ್ಯಾದ ಪ್ರಮುಖ ಗುಪ್ತಚರ ಸಂಸ್ಥೆ ಎಫ್‌ಎಸ್‌ಬಿ ಮುಖ್ಯಸ್ಥ ಅಲೆಕ್ಸಾಂಡರ್ ಬೊರ್ಟ್ನಿಕೋವ್ ಮತ್ತು ಉಪ ರಕ್ಷಣಾ ಮಂತ್ರಿಗಳಾದ ಅಲೆಕ್ಸಿ ಕ್ರಿವೊರುಚ್ಕೊ ಮತ್ತು ಪಾವೆಲ್ ಪೊಪೊವ್ ಅವರು ಅಮೆರಿಕದ ನಿರ್ಬಂಧಕ್ಕೆ ಒಳಗಾದ ಪ್ರಮುಖರಾಗಿದ್ದಾರೆ. ಅಮೆರಿಕ ಅಧ್ಯಕ್ಷರಾಗಿ ಬೈಡನ್ ತೆಗೆದುಕೊಂಡ ಮೊದಲ ಕಠಿಣ ನಿರ್ಧಾರ ಇದಾಗಿದೆ.

'ನೊವಿಚೋಕ್'ನಂತಹ ರಾಸಾಯನಿಕ ಮತ್ತು ಜೈವಿಕ ಶಸ್ತ್ರಾಸ್ತ್ರಗಳ ವಿರುದ್ಧದ ಅಂತರರಾಷ್ಟ್ರೀಯ ನಿಷೇಧವನ್ನು ಉಲ್ಲಂಘಿಸಿದ್ದಕ್ಕಾಗಿ ರಷ್ಯಾದ ಮೇಲೆ ರಫ್ತು ನಿರ್ಬಂಧವನ್ನು ವಿಸ್ತರಿಸುವುದಾಗಿ ಅಮೆರಿಕ ಘೋಷಿಸಿದೆ. ಈ ಕ್ರಮವೂ ರಷ್ಯಾವನ್ನು ಕೆರಳಿಸಿದೆ.

ಕಳೆದ ತಿಂಗಳು ಪುಟಿನ್ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದ ಬೈಡನ್, ಅಮೆರಿಕದ ನಿಲುವುಗಳನ್ನು ಸ್ಪಷ್ಟಪಡಿಸಿದ್ದರು. ರಷ್ಯಾದ ಆಕ್ರಮಣಕಾರಿ ನೀತಿಗಳು, ಅಧ್ಯಕ್ಷೀಯ ಚುನಾವಣೆಗಳಲ್ಲಿ ಹಸ್ತಕ್ಷೇಪ, ಸೈಬರ್ ದಾಳಿ, ನಾಗರಿಕರಿಗೆ ವಿಷಪ್ರಾಶನದಂತಹ ಕ್ರಮಗಳನ್ನು ಸಹಿಸುವುದಿಲ್ಲ ಎಂದು ನೇರವಾಗಿ ಹೇಳಿದ್ದರು.

ಆಧಾರ: ಬಿಬಿಸಿ, ಇಂಡಿಪೆಂಡೆಂಟ್, ದಿ ನ್ಯೂಯಾರ್ಕ್ ಟೈಮ್ಸ್, ಸಿಇಡಬ್ಲ್ಯು, ರಾಯಿಟರ್ಸ್


ರೈತರ ಪರ ಬಿಜೆಪಿ ವಿರುದ್ಧ ಹೇಳಿಕೆ

ಹುದ್ದೆ ತ್ಯಾಗಕ್ಕೂ ಸಿದ್ಧ ರಾಜ್ಯಪಾಲ ಮಲಿಕ್

ನವದೆಹಲಿ (ಪಿಟಿಐ): ದೆಹಲಿಯ ಗಡಿಯಲ್ಲಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರದಿಂದ ಸೂಕ್ತ ಸ್ಪಂದನೆ ಸಿಗದಿದ್ದಕ್ಕೆ ನೋವಾಗಿದೆ ಎಂದು ಮೇಘಾಲಯ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ. 'ಒಂದು ವೇಳೆ ನನ್ನ ಈ ಅಭಿಪ್ರಾಯದ ಬಗ್ಗೆ ಪಕ್ಷ ಆಕ್ಷೇಪ ಎತ್ತಿದರೆ, ರಾಜ್ಯಪಾಲ ಹುದ್ದೆಯನ್ನು ತೊರೆದು ಹೊರಗಿನಿಂದ ರೈತರ ಪರವಾಗಿ ದನಿ ಎತ್ತುತ್ತೇನೆ' ಎಂದು ಮಲಿಕ್ ಹೇಳಿದ್ದಾರೆ.

'ನಾನು ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದವನು. ಹೀಗಾಗಿಯೇ ರೈತರು ಅನುಭವಿಸುತ್ತಿರುವ ನೋವು ಅರ್ಥಮಾಡಿಕೊಂಡಿದ್ದೇನೆ. ನನ್ನ ಅಭಿಪ್ರಾಯದ ಬಗ್ಗೆ ಪಕ್ಷದ ಮುಖಂಡರು ಏನೇ ಅಂದುಕೊಂಡರೂ ನನಗೆ ಚಿಂತೆಯಿಲ್ಲ' ಎಂದೂ ಮಲಿಕ್ ಹೇಳಿದ್ದಾರೆ.

ರೈತರು ಹಾಗೂ ಸರ್ಕಾರದ ನಡುವೆ ಹಲವು ಸುತ್ತಿನ ಮಾತುಕತೆ ನಡೆದರೂ ಈವರೆಗೆ ಪರಿಹಾರ ಸಿಕ್ಕಿಲ್ಲ. ಹೀಗಾಗಿ ಕೃಷಿಕ ಸಮುದಾಯವನ್ನು ಸರ್ಕಾರ ಕರೆದು ಮಾತುಕತೆಯನ್ನು ಮತ್ತೆ ಪ್ರಾರಂಭಿಸಬೇಕು ಎಂದು ಅವರು ಹೇಳಿದರು.


ಸತ್ಯಪಾಲ್ ಮಲಿಕ್

ರೈತರ 100 ದಿನಗಳ ಪ್ರತಿಭಟನೆಯಲ್ಲಿ ಸತ್ತವರ ಕುರಿತು ಯಾರೂ ಮಾತನಾಡದಿದ್ದುದಕ್ಕೆ ಮಲಿಕ್ ವಿಷಾದ ವ್ಯಕ್ತಪಡಿಸಿದ್ದಾರೆ.

'ಸಾಂವಿಧಾನಿಕ ಹುದ್ದೆಯಲ್ಲಿದ್ದರೂ ನಾನು ರೈತರ ಸಮಸ್ಯೆಗಳ ಬಗ್ಗೆ ಏಕೆ ಮಾತನಾಡುತ್ತಿದ್ದೇನೆ ಎಂದು ನನ್ನನ್ನು ಮಾಧ್ಯಮಗಳು ಪ್ರಶ್ನಿಸಿವೆ. ಒಂದು ನಾಯಿಯನ್ನು ಕೊಂದರೂ, ಎಲ್ಲೆಡೆಯಿಂದ ಸಂತಾಪ ಸಂದೇಶಗಳ ಸುರಿಮಳೆಯಾಗುತ್ತದೆ. ಹೀಗಿರುವಾಗ 250 ರೈತರು ಸತ್ತಿದ್ದಾರೆ ಎಂದರೂ ಯಾರೂ ಒಂದೇ ಒಂದು ಪದವನ್ನು ಉಚ್ಚರಿಸಿಲ್ಲ' ಎಂದು ಅವರು ಹೇಳಿದರು.

'ರೈತರ ಪ್ರತಿಭಟನೆ ಬಗ್ಗೆ ಮಾತನಾಡುವುದನ್ನು ನಾವು ಕೈಬಿಟ್ಟರೆ, ರಾಜಕೀಯದ ಲಾಭ ಮಾಡಿಕೊಳ್ಳುವ ವಿರೋಧಿಗಳಿಗೆ ಸಂಪೂರ್ಣ ಅವಕಾಶ ಮಾಡಿಕೊಟ್ಟಂತಾಗುತ್ತದೆ' ಎಂದು ಮಲಿಕ್ ಹೇಳಿದ್ದಾರೆ.

ರೈತರ ಮನ ನೋಯಿಸದಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಭಾನುವಾರ ಒತ್ತಾಯಿಸಿದ್ದರು. ತಮ್ಮ ತವರು ಜಿಲ್ಲೆ ಭಾಗಪತ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕೇಂದ್ರವು ಕಾನೂನು ಖಾತರಿ ನೀಡಿದರೆ, ರೈತರು ತಮ್ಮ ಪಟ್ಟು ಸಡಿಲಿಸುತ್ತಾರೆ ಎಂದಿದ್ದಾರೆ.

'ಯಾವ ಕಾನೂನೂ ರೈತ ಪರವಾಗಿಲ್ಲ'

'ಯಾವುದೇ ಕಾನೂನು ರೈತರ ಪರವಾಗಿಲ್ಲ. ಇದನ್ನು ಸರಿಪಡಿಸಬೇಕಾದ ತುರ್ತು ಈಗ ಇದೆ. ರೈತರ ಸಮಸ್ಯೆ ಪರಿಹಾರಕ್ಕೋಸ್ಕರ ಎಂತಹ ಸ್ಥಿತಿಯನ್ನಾದರೂ ನಾನು ಎದುರಿಸಲು ಸಿದ್ಧ' ಎಂದು ಮಲಿಕ್ ಹೇಳಿದ್ದಾರೆ

'ರೈತರಿಗೆ ಎಂದಿಗೂ ನಿರಾಸೆ ಮಾಡಬೇಡಿ' ಎಂದು ಅವರು ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಶಾ ಅವರನ್ನು ಕೋರಿದ್ದಾರೆ.

'ರೈತರು ಮತ್ತು ಸೈನಿಕರು ಸಂತುಷ್ಟರಾಗದಿದ್ದಲ್ಲಿ, ಆ ದೇಶವು ಮುಂದೆ ಸಾಗಲು ಸಾಧ್ಯವಿಲ್ಲ. ಆ ದೇಶ ಉಳಿಯುವುದೂ ಇಲ್ಲ. ಆದ್ದರಿಂದ ಸೇನೆ ಮತ್ತು ರೈತರನ್ನು ಸರ್ಕಾರ ತೃಪ್ತಿಪಡಿಸಬೇಕು' ಎಂದು ಹೇಳಿದ್ದಾರೆ. ದೆಹಲಿಯಲ್ಲಿ ನೂರು ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಖಾಲಿ ಕೈಯಲ್ಲಿ ದೆಹಲಿಯಿಂದ ಕಳಿಸಬೇಡಿ ಎಂದು ಅವರು ಮನವಿ ಮಾಡಿದ್ದಾರೆ.

'ರೈತರ ಪರಿಸ್ಥಿತಿ ದಿನೇ ದಿನೇ ಅವರನ್ನು ಬಡವರನ್ನಾಗಿಸುತ್ತಿದೆ. ಆದರೆ ಸರ್ಕಾರಿ ಅಧಿಕಾರಿಗಳ ಸಂಬಳ ಪ್ರತಿ ಮೂರು ವರ್ಷಕ್ಕೊಮ್ಮೆ ಏರಿಕೆಯಾಗುತ್ತದೆ. ರೈತರು ಮಾರುವ ಎಲ್ಲ ವಸ್ತುಗಳನ್ನು ಕಡಿಮೆ ಬೆಲೆಗೆ ಕೇಳುತ್ತಾರೆ. ಆದರೆ ರೈತರು ಕೊಳ್ಳುವ ಎಲ್ಲ ವಸ್ತುಗಳೂ ದುಬಾರಿಯಾಗಿರುತ್ತವೆ' ಎಂದು ಮಲಿಕ್ ರೈತರ ಪಾಡನ್ನು ವಿವರಿಸಿದ್ದಾರೆ.

ರೈತರ ಪ್ರತಿಭಟನೆ ಅಂತ್ಯಗೊಳಿಸುವ ದಿಸೆಯಲ್ಲಿ ಸರ್ಕಾರದಿಂದ ಯಾವುದೇ ಸೂಚನೆ ಬಂದರೆ, ಸಂಧಾನದ ಮಧ್ಯವರ್ತಿಯ ಪಾತ್ರವನ್ನು ನಿರ್ವಹಿಸಲು ನಾನು ಸಿದ್ಧನಿದ್ದೇನೆ

ಕೆ.ಸಿ. ತ್ಯಾಗಿ, ಜೆಡಿಯು ಮುಖಂಡ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'ಭಾರತದ ಮುಂದೆ ಪಾಕಿಸ್ತಾನ ಕೊನೆಗೂ ಮಂಡಿಯೂರಿದೆ. ಭಾರತದಲ್ಲಿ ತಯಾರಾದ ಕೋವಿಡ್ ಲಸಿಕೆಯನ್ನು ಉಚಿತವಾಗಿ ಕಳುಹಿಸಿಕೊಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದೆ. ಹೀಗಾಗಿ ಭಾರತವು 4.5 ಕೋಟಿ ಡೋಸ್ ಲಸಿಕೆಗಳನ್ನು ಕಳುಹಿಸಿಕೊಟ್ಟಿದೆ' ಎಂಬರ್ಥದ ಟ್ವೀಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.



ಗವಿ, ಕೊವ್ಯಾಕ್ಸ್, ಸಿಇಪಿಐ, ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್ ಮೊದಲಾದ ಸಂಘಟನೆಗಳು ಬಡ, ಮಧ್ಯಮ ಆದಾಯದ ರಾಷ್ಟ್ರಗಳ ಜನರಿಗೆ ಲಸಿಕೆ ನೀಡುವ ಗುರಿ ಹಾಕಿಕೊಂಡಿವೆ. ಭಾರತ, ಪಾಕಿಸ್ತಾನ ಸೇರಿದಂತೆ ಹಲವು ದೇಶಗಳು ಅಂತರರಾಷ್ಟ್ರೀಯ ಲಸಿಕೆ ಒಕ್ಕೂಟದ ಸದಸ್ಯ ರಾಷ್ಟ್ರಗಳಾಗಿದ್ದು, ಈ ಸಂಘಟನೆಗಳಿಗೆ ಹಣವನ್ನು ದೇಣಿಗೆ ನೀಡಿವೆ. ಇದರ ಭಾಗಿವಾಗಿಯೇ ಹಲವು ರಾಷ್ಟ್ರಗಳಿಗೆ ಉಚಿತ ಲಸಿಕೆ ಸರಬರಾಜಾಗಿದೆ. ಭಾರತದ ಜೊತೆಗೆ ಪಾಕಿಸ್ತಾನಕ್ಕೂ ಈ ವೇದಿಕೆಗಳ ಮೂಲಕ ಉಚಿತ ಲಸಿಕೆ ಸಿಕ್ಕಿದೆ. ಸೀರಂ ಸಂಸ್ಥೆಯ ಕೋವಿಶೀಲ್ಡ್ ಲಸಿಕೆಯನ್ನು ಖರೀದಿಸಿರುವ ಕೊವ್ಯಾಕ್ಸ್ ಸಂಘಟನೆಯು, ಅದನ್ನು ಪಾಕಿಸ್ತಾನಕ್ಕೆ ಪೂರೈಸಿದೆ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಕನ್ಯಾ ಪರೀಕ್ಷೆ

ಮಹೋಷಧಕುಮಾರ ಅಮರಾದೇವಿಯನ್ನು ತನ್ನ ಹೆಂಡತಿಯಾಗಲು ತಕ್ಕ ಕನ್ಯೆ ಎಂದು ಮನದಲ್ಲಿ ತೀರ್ಮಾನಿಸಿದ. ಆದರೂ ಆಕೆಯ ಗುಣಗಳನ್ನು ಮತ್ತಷ್ಟು ಪರೀಕ್ಷೆ ಮಾಡಬೇಕು ಎಂದುಕೊಂಡ.

ಮಾತುಕತೆಯಾದ ಮೇಲೆ ಅಮರಾದೇವಿ, 'ಸ್ವಾಮಿ, ನಾನು ಗೋಧಿಗಂಜಿ ತಂದಿದ್ದೇನೆ. ಕುಡಿಯುತ್ತೀರಾ?' ಎಂದು ಕೇಳಿದಳು. ಆಹಾರವನ್ನು ಬೇಡವೆನ್ನುವುದು ಅಮಂಗಲವೆಂದುಕೊಂಡು, 'ಆಯ್ತು ಕೊಡು, ದೇವಿ' ಎಂದ. ಆಕೆ ಗಂಜಿಯ ಮಡಕೆಯನ್ನು ಕೆಳಗಿಳಿಸಿದಳು. ಕುಮಾರ ಗಮನಿ-ಸುತ್ತಿದ್ದ. ಆಕೆ ಕೈ ತೊಳೆಯಲು ನೀರು ಕೊಟ್ಟರೆ ಸರಿ, ಇಲ್ಲವಾದರೆ ಆಕೆಯನ್ನು ಬಿಟ್ಟು ಹೋಗುತ್ತೇನೆ ಎಂದುಕೊಂಡ. ಆಕೆ ಒಂದು ಲೋಟದಲ್ಲಿ ಸ್ವಚ್ಛವಾದ ನೀರು ತೆಗೆದುಕೊಂಡು, 'ಸ್ವಾಮಿ, ಊಟಕ್ಕೆ ಮೊದಲು ಕೈ ತೊಳೆಯಿರಿ' ಎಂದು ನೀರು ಹಾಕಿದಳು. ಕುಮಾರನಿಗೆ ಸಂತೋಷವಾಯಿತು. ಆಕೆ ತಟ್ಟೆಯಲ್ಲಿ ನೀಡಿದ ಗಂಜಿಯನ್ನು ಕುಡಿದ. ಅದು ತುಂಬ ತೆಳ್ಳಗಾಗಿ, ಗೋಧಿಯ ಅಂಶ ಕಡಿಮೆಯಾಗಿತ್ತು. 'ಭದ್ರೆ, ಗಂಜಿ ಬಹಳ ಮಂದವಾಗಿದೆ' ಎಂದ. ಆಕೆ, 'ಹೌದು, ಸ್ವಾಮಿ, ಈ ವರ್ಷ ಹೆಚ್ಚು ನೀರು ದೊರಕಲಿಲ್ಲ' ಎಂದಳು. ಹಾಗೆಂದರೆ ಈ ವರ್ಷ ಮಳೆ ಕಡಿಮೆಯಾಗಿ, ಬೆಳೆ ಸರಿಯಾಗಿ ಬರದೆ, ಮನೆಯಲ್ಲಿ ಬಡತನ ಬಂದಿದೆ ಎಂದು ತಿಳಿದುಕೊಂಡ.


ಕೈ, ಬಾಯಿ ತೊಳೆದುಕೊಂಡು, ಆಕೆಯ ಮನೆಯ ವಿಳಾಸವನ್ನು ಕೇಳಿ ತಿಳಿದುಕೊಂಡ. ನಂತರ ಮನೆಯನ್ನು ಹುಡುಕಿಕೊಂಡು ಹೋದ. ಅಮರಾದೇವಿಯ ತಾಯಿ ಅವನನ್ನು ಪ್ರೀತಿಯಿಂದ ಸ್ವಾಗತಿಸಿದಳು. ಆಕೆಗೆ ಈತ ತನ್ನ ಮಗಳನ್ನು ಹುಡುಕಿಕೊಂಡು ಬಂದಿರಬೇಕು ಎನ್ನಿಸಿತು. ಕುಮಾರ ಮನೆಯನ್ನು ನೋಡಿದ. ಅವರು ದರಿದ್ರರಾಗಿದ್ದಾರೆಂ-ದೂ, ಒಂದು ಕಾಲಕ್ಕೆ ಚೆನ್ನಾಗಿ ಬದುಕಿದವರೆಂದು ತಿಳಿಯಿತು.

'ಅಮ್ಮಾ, ನಾನೊಬ್ಬ ದರ್ಜಿ. ಹೊಲಿಯಲು ಯಾವುದಾದರೂ ಬಟ್ಟೆ ಇದ್ದರೆ ಕೊಡಿ' ಎಂದ ಕುಮಾರ. ಆಕೆ,

'ಬಟ್ಟೆಗಳಿವೆ, ಆದರೆ ಹೊಲಿಯಲು ಕೊಡಲು ಹಣವಿಲ್ಲ' ಎಂದಳು.

'ಅಮ್ಮಾ, ನನಗೆ ಕೂಲಿಯ ಅಪೇಕ್ಷೆ ಇಲ್ಲ. ಬಟ್ಟೆ ಕೊಡಿ ಹೊಲಿಯುತ್ತೇನೆ' ಎಂದ ಮಹೋಷಧಕುಮಾರ. ಆಕೆ ಹಳೆ ಬಟ್ಟೆಗಳನ್ನು ತಂದುಕೊಟ್ಟಳು. ಆತ ಅವುಗಳನ್ನು ಕ್ಷಣಾರ್ಧ-ದಲ್ಲಿ ಹೊಲಿದು ಸರಿ ಮಾಡುತ್ತಿದ್ದ. ಆಕೆ ತಮ್ಮ ಮನೆಯ ಸುತ್ತಮುತ್ತಲಿನವರಿಗೆ ಈ ಪವಾಡ ಸದೃಶ ಕೆಲಸವನ್ನು ಹರಡಿದಳು. ಜನ ಬಟ್ಟೆಗಳನ್ನು ತಂದು ತಂದು ಕೊಟ್ಟರು. ಒಂದೇ ದಿನದಲ್ಲಿ ಕುಮಾರ ಸಾವಿರ ನಾಣ್ಯಗಳನ್ನು ಸಂಪಾದಿಸಿದ. ಸಂಜೆಯ ಹೊತ್ತಿಗೆ ಅಮರಾದೇವಿ ತಲೆಯ ಮೇಲೆ ಸೌದೆಯ ಹೊರೆಯನ್ನು ಎತ್ತಿಕೊಂಡು ಬಂದು ಅಡುಗೆ ಮಾಡಿದಳು. ಊಟ ರುಚಿಯಾಗಿತ್ತು. ಹಾಗಾದರೆ ಕನ್ಯೆ ಪಾಕಶಾಸ್ತ್ರ ನಿಪುಣೆಯಾಗಿದ್ದಾಳೆ ಎಂದುಕೊಂಡ. ಎಲ್ಲರ ಊಟವಾದ ಮೇಲೆ ಏನಾದರೂ ಪದಾರ್ಥ ಉಳಿದಿದೆಯೇ ಎಂದು ಅಡುಗೆ ಮನೆಗೆ ಹೋಗಿ ನೋಡಿ ಬಂದ. ಯಾವ ಪದಾರ್ಥವೂ ಉಳಿದು ವ್ಯರ್ಥವಾಗಿರಲಿಲ್ಲ. ಆದ್ದರಿಂದ ಆಕೆ ತುಂಬ ಜಾಣೆ, ಯಾವ ಪದಾರ್ಥವನ್ನು ವ್ಯಯ ಮಾಡದೆ, ಹಣಕಾಸನ್ನು ಚೆನ್ನಾಗಿ ನಿಭಾಯಿಸುತ್ತಾಳೆ ಎಂದು ತಿಳಿದುಕೊಂಡ. ಆದರೂ, ಅಡುಗೆ ಯಾವುದೂ ಚೆನ್ನಾಗಿರಲಿಲ್ಲ, ಪದಾರ್ಥವನ್ನೆಲ್ಲ ವ್ಯರ್ಥ ಮಾಡಿದೆ ಎಂದು ಆಕೆಯನ್ನು ತೆಗಳಿದ. ಆಕೆ ಮಾತಿಗೆ ವಿರೋಧ ತೋರದೆ, ಮೃದುವಾಗಿ ನಕ್ಕಳು. ನಕ್ಕಿದ್ದು ಏಕೆ ಎಂದು ಕೇಳಿದಾಗ, 'ನೀವು ಸುಮ್ಮನೆ ನನ್ನನ್ನು ಪರೀಕ್ಷಿಸಲು ತೆಗಳಿದ್ದು. ನೀವು ಊಟ ಮಾಡುವಾಗ ಮುಖದಲ್ಲಿ ಇದ್ದ ಸಂತೃಪ್ತಿಯನ್ನು ಕಂಡಿದ್ದೆ. ನೀವು ಎರಡೆರಡು ಬಾರಿ ಹಾಕಿಸಿಕೊಂಡಾಗ ಊಟ ಇಷ್ಟವಾಯಿತು ಎಂಬುದು ತಿಳಿದಿತ್ತು. ಅದಕ್ಕೆ ನಗೆ ಬಂತು' ಎಂದಳು. ಹಾಗಾದರೆ ಈ ಹುಡುಗಿ ಮನಸ್ಸನ್ನು ಚೆನ್ನಾಗಿ ಅರಿಯುತ್ತಾಳೆ ಎಂಬುದು ಖಚಿತವಾಗಿ, ಮನಸ್ಸು ಆಕೆಯನ್ನು ಒಪ್ಪಿತು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 19 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಷಷ್ಠಿ ಗಂ. 46-28 (ರಾ. 1-07) ಶುಕ್ರವಾರ ನಿತ್ಯ ನಕ್ಷತ್ರ ಕೃತ್ತಿಕೆ ಗಂ. 10-48 (ಹ. 10-51) ವಿಷ್ಕಂಭ ನಾಮ ಯೋಗ ಗಂ. 5-1 ಕೌಲವ ಕರಣ ಗಂ. 13-55 ವಿಷ ಗಂ. 54-55 ಅಮೃತ ಗಂ. 3-51 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-29 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 1, 6

ಮೇಷ: ಶತ್ರುಭೀತಿ ದೂರವಾಗಿ ನಿರುಮ್ಮಳವೆನ್ನಿಸಲಿದೆ. ವ್ಯವಹಾರಗಳಲ್ಲಿ ಮಕ್ಕಳ ಸಹಕಾರ ದೊರೆಯುವುದು. ಆತ್ಮೀಯರೊಂದಿಗೆ ಸಮಾಲೋಚನೆಯಿಂದ ನೆಮ್ಮದಿ. ಉದ್ಯೋಗಾಕಾಂಕ್ಷಿಗಳಿಗೆ ಪರೀಕ್ಷೆಯ ಕಾಲ.

ವೃಷಭ: ಅನಿರೀಕ್ಷಿತ ಪ್ರಯಾಣ ಎದುರಾಗಲಿದೆ. ವೃತ್ತಿ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಆರೋಗ್ಯದಲ್ಲಿ ಸುಧಾರಣೆ. ಬಂಧು ಬಾಂಧವರ ಭೇಟಿಯಿಂದಾಗಿ ಮಾನಸಿಕ ನೆಮ್ಮದಿ ಹೊಂದುವಿರಿ.

ಮಿಥುನ: ವಾಹನ, ಯಂತ್ರೋಪಕರಣಗಳಿಂದಾಗಿ ಸ್ವಲ್ಪಮಟ್ಟಿನ ತೊಂದರೆ. ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಸಂತಸದ ಸುದ್ದಿಯೊಂದನ್ನು ಸ್ವೀಕರಿಸಲಿದ್ದೀರಿ. ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ.

ಕರ್ಕಾಟಕ: ಕೆಲಸ–ಕಾರ್ಯಗಳಲ್ಲಿ ಯಶಸ್ಸು. ಪ್ರೀತಿಪಾತ್ರರ ಭೇಟಿಯಿಂದಾಗಿ ನೆಮ್ಮದಿ. ವಿದ್ಯಾಭ್ಯಾಸದಲ್ಲಿ ಸಫಲತೆ. ವಿವಾದಗಳಲ್ಲಿ ಯಶಸ್ಸು ನಿಮ್ಮದಾಗಲಿದೆ. ಸಾಮಾಜಿಕ ಗೌರವಾದರಗಳು.

ಸಿಂಹ: ವಿವಾಹ ಸಂಬಂಧ ವಿರೋಧಿಗಳಿಂದ ಒತ್ತಡವನ್ನು ಎದುರಿಸಬೇಕಾದೀತು. ಕುಟುಂಬ ವರ್ಗದವರಲ್ಲಿ ಸಣ್ಣಪುಟ್ಟ ಮನಸ್ತಾಪ ಕಂಡುಬರುವುದು. ಮಿತ್ರರ ಸಹಕಾರದಿಂದಾಗಿ ಎಲ್ಲವೂ ಸುಗುಮವಾಗಲಿದೆ.

ಕನ್ಯಾ: ಎದೆಗುಂದದ ಧೈರ್ಯದಿಂದಾಗಿ ಕೆಲಸ–ಕಾರ್ಯಗಳಲ್ಲಿ ಅಡಚಣೆಗಳು ನಿವಾರಣೆಯಾಗುವುದು. ಲೇವಾದೇವಿ ವ್ಯವಹಾರದಿಂದ ಅಧಿಕ ಲಾಭ. ಆಪ್ತರ ಭೇಟಿ ಸಂತಸ ನೀಡಲಿದೆ. ವಿಪರೀತ ಖರ್ಚು.

ತುಲಾ: ಒತ್ತಡಗಳ ಪರಿಣಾಮವಾಗಿ ವಿರೋಧಿಗಳು ತಟಸ್ಥರಾಗಲಿದ್ದಾರೆ. ವಾಹನ, ಯಂತ್ರೋಪಕರಣಗಳಿಂದ ನೆಮ್ಮದಿ. ಕುಟುಂಬದಲ್ಲಿನ ಕಿರಿಕಿರಿಯಿಂದ ಹೊರಬಂದು ನೆಮ್ಮದಿಯನ್ನು ಹೊಂದಲಿದ್ದೀರಿ.

ವೃಶ್ಚಿಕ: ಅಧ್ಯಯನದಲ್ಲಿ ಉನ್ನತಿ ಕಾಣುವಿರಿ. ವೃತ್ತಿಜೀವನದಲ್ಲಿ ಪ್ರಗತಿ. ಅಸ್ಥಿರ ಮನಸ್ಸಿನಿಂದಾಗಿ ಭಯ ಮೂಡುವ ಸಾಧ್ಯತೆ. ಪ್ರೀತಿಪಾತ್ರರೊಂದಿಗಿನ ಸಮಾಲೋಚನೆ ಮಾನಸಿಕ ನೆಮ್ಮದಿ ತರಲಿದೆ.

ಧನು: ಸಮಯೋಚಿತವಾಗಿ ಕೈಗೊಂಡ ಕಾರ್ಯಗಳು ಸಂಪೂರ್ಣಗೊಂಡು ಹಿರಿಯರಿಂದ ಮೆಚ್ಚುಗೆ. ಆರೋಗ್ಯದಲ್ಲಿ ಸುಧಾರಣೆ. ಪ್ರಯಾಣದಲ್ಲಿನ ನೆಮ್ಮದಿಯನ್ನು ಸಂಪೂರ್ಣ ಪಡೆದುಕೊಳ್ಳಲಿದ್ದೀರಿ.

ಮಕರ: ಭಿನ್ನಮತ ಬಗೆಹರಿಯುವುದರೊಂದಿಗೆ ಕೆಲಸ–ಕಾರ್ಯಗಳು ಸರಾಗವಾಗಿ ಸಂತಸ ಮೂಡಲಿದೆ. ಭೂ ವ್ಯವಹಾರದಲ್ಲಿ ಹಿರಿಯರ ಸಲಹೆ ಪಡೆದು ಮುಂದುವರೆಯುವುದು ಒಳಿತು. ವ್ಯಾಪಾರಸ್ಥರಿಗೆ ನಿರೀಕ್ಷಿತ ಲಾಭ.

ಕುಂಭ: ಕೆಲಸದಲ್ಲಿ ಒತ್ತಡ ಎದುರಿಸುವಿರಿ. ವಿಪರೀತ ಶ್ರಮ ವಹಿಸಿ ಕಾರ್ಯನಿರ್ವಹಿಸುವುದರಿಂದಾಗಿ ದೇಹಾಲಸ್ಯ. ಅನಾವಶ್ಯಕ ಓಡಾಟಗಳು ಎದುರಾಗುವ ಸಾಧ್ಯತೆ. ಸಂಗಾತಿಯ ಸಹಕಾರದಿಂದ ನೆಮ್ಮದಿ.


ಮೀನ: ವ್ಯಾಪಾರ ವ್ಯವಹಾರಗಳಲ್ಲಿನ ಲಾಭ ವೃದ್ಧಿಯಾಗಲಿದೆ. ಹರ್ಷ ಮೂಡಿಸುವ ಸಂದೇಶಗಳನ್ನು ಕೇಳುವಿರಿ. ಬಹುದಿನಗಳಿಂದ ಬರಬೇಕಾದ ಬಾಕಿ ಹಣ ಬರಲಿದೆ. ಕುಟುಂಬದಲ್ಲಿ ಶಾಂತ ವಾತಾವರಣ ನೆಲೆಸುವುದು.

ನಿಮ್ಮ ಜನ್ಮದಿನ 19-ಮಾರ್ಚ್ ಈ ದಿನ ಅತ್ಯಂತ ಶುಭಕರ. ಒತ್ತಡದ ಬದುಕಿನಿಂದ ಹೊರಬಂದು ಸ್ವತಂತ್ರ ಬದುಕನ್ನು ರೂಢಿಸಿಕೊಳ್ಳಲಿದ್ದೀರಿ. ಸಂಗಾತಿಯ ವಿಶ್ವಾಸಕ್ಕೆ ಪಾತ್ರರಾಗುವ ಜೊತೆಯಲ್ಲಿ ಜೋಡಿಯಾಗಿ ಬಂಡಿಯನ್ನು ಎಳೆಯಲಿದ್ದೀರಿ. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಯ ಕಂಡುಬಂದರೂ ಆಘಾತಕಾರಿಯಾಗಲಾರದು.

ಪದಬಂಧ 4541 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಡಗಿನ ಚುಕ್ಕಾಣಿ ಹಿಡಿದವ (4)
2.ಹಿಮದ ಹತ್ತಿರವಿರುವ ಕೋಣ ಕಾಣುತ್ತಿದೆಯೇ? (3)
4.ಅಂಗಸಾಧನೆ ಅಥವಾ ಕಸರತ್ತು (3)
6.ಹುಯಿಲಿಡುತ್ತಾ ಓದಿದ ಮರಣಪತ್ರ! (3)
7.ಪ್ರೇಮಿಗಳ ಅಗಲಿಕೆಯ ಬೇನೆ (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಸೊಕ್ಕಿಗೊಂದು ಪರ್ಯಾಯ ಪದ (3)
13.ಒಡವೆಯನ್ನಿರಿಸಿಕೊಂಡಿರುವ ಷಹರು (3)
14.ಕತ್ತಿಯ ಅಲುಗು (4)

ಮೇಲಿಂದ ಕೆಳಕ್ಕೆ
1.ಮಾಡಲೇ ಬೇಕಾದುದು ಕೊನೆಗೆ ದೀರ್ಘವಾಗಿದೆಯಲ್ಲಾ? (3)
2.ನೈರ್ಮಲ್ಯದ ಉಡಿ! (3)
3.ಬರವಿದ್ದಾಗ ಕುಡಿದ ಪಾನೀಯ! (4)
5.ಮನದಿಂದ ಮಾಡಿಕೊಂಡ ಅರಿಕೆ (3)
6.ನಡುವೆ ದಾಹವಿದ್ದಾಗ ನೀಡಿದ ದೃಷ್ಟಾಂತ (5)
8.ಈ ಪರಿ ಕಾಣಿಸಿದ ಆವರಣ (3)
9.ಇದು ಹಾಸ್ಯ ನಾಟಕ (4)
10.ಆಧಾರದಿಂದ ಕೂಡಿದುದು (3)
12.ತುಪಾಕಿ ಹಾರಿಸುವ ಕೀಲುಮೊಳೆಯೇ ಅಶ್ವವೇ? (4)



4540ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪಮಾನ 3.ಅನುಕ್ರಮ 5.ತಟಾಕ 6.ತತ್ತಿ 7.ಒಣಹರಟೆ 10.ಶಾಪ 12.ನೆನಪು 14.ನತದೃಷ್ಟ 15.ವರ್ಧಮಾನ

ಮೇಲಿಂದ ಕೆಳಕ್ಕೆ: 1.ಉಪವೀತ 2.ನವೀಕರಣ 3.ಅಣ್ಣ 4.ಮದಕರಿ 5.ತಮ್ಮಟೆ 7.ಒನಪು 8.ರಜತೋತ್ಸವ 9.ಮನೆತನ 11.ಪರಿಜ್ಞಾನ 13.ಕಷ್ಟ

ಸುಡೊಕು 4927

	6			2		5		
5					7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4926 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಚಿನ್ನ ₹ 105, ಬೆಳ್ಳಿ ₹ 1,073 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರದಲ್ಲಿ ಏರಿಕೆ ಕಂಡುಬಂದಿದೆ. 10 ಗ್ರಾಂ ಚಿನ್ನದ ದರ ₹ 105ರಷ್ಟು ಹೆಚ್ಚಾಗಿ ₹ 44,509ರಂತೆ ಹಾಗೂ ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,073ರಷ್ಟು ಹೆಚ್ಚಾಗಿ ₹ 57,364ರಂತೆ ಮಾರಾಟವಾಗಿದೆ.

ಮುಂಬೈ ಧಾರಣೆ

ಶೇಂಗಾ

18-3-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1250 (1257)
ಪಾಮ್ ವಾರದ ಡೆಲಿವರಿ	1213 (1228)
ಸೂರ್ಯಕಾಂತಿ ಎಣ್ಣೆ ಕಚ್ಚಾ	1730 (1750)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,550 (44,650)
ಬೆಳ್ಳಿ ಕೆ.ಜಿ 66,850 (66,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,721
ಇಂದಿನ ಅಂತ್ಯ	14,558
▼	163
ದಿನದ ಕನಿಷ್ಠ	14,478

ವಿನಿಮಯ ದರ

$ ಡಾಲರ್	72.53
£ ಪೌಂಡ್	101.2
€ ಯುರೊ	86.60
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹385
12 ಮೊಟ್ಟೆಗೆ	₹52

ಮೈಸೂರು

100 ಮೊಟ್ಟೆಗೆ	₹388

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1250 (1280)
ಸೂರ್ಯಕಾಂತಿ (ರಿಫೈನ್ಡ್)	₹1770 (1800)
ಪಾಮೋಲಿನ್	₹1215 (1230)

ಬ್ಯಾಡಗಿ ಮೆಣಸಿನಕಾಯಿ: 2.19 ಲಕ್ಷ ಚೀಲ ಆವಕ

ಬ್ಯಾಡಗಿ: ಇಲ್ಲಿಯ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಗುರುವಾರ 2.19 ಲಕ್ಷ ಚೀಲ (54,830 ಕ್ವಿಂಟಲ್) ಮೆಣಸಿನಕಾಯಿಯನ್ನು ತರಲಾಗಿದ್ದು, ಆವಕದಲ್ಲಿ ತುಸು ಹೆಚ್ಚಳವಾಗಿದೆ.

ಪ್ರಸಕ್ತ ಹಂಗಾಮಿನಲ್ಲಿ 6ನೇ ಬಾರಿಗೆ ಎರಡು ಲಕ್ಷಕ್ಕಿಂತ ಹೆಚ್ಚು ಚೀಲ ಮೆಣಸಿನಕಾಯಿ ಒಂದೇ ದಿನ ಆವಕವಾದಂತಾಗಿದೆ.

18 ಚೀಲ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹ 32,119ರಂತೆ ಮಾರಾಟವಾಗಿದೆ. ಕಳೆದ ಸೋಮವಾರ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹ 33,909ರಂತೆ ಮಾರಾಟವಾಗಿತ್ತು. ಬ್ಯಾಡಗಿ ಕಡ್ಡಿ ಮತ್ತು ಗುಂಟೂರು ತಳಿ ಮೆಣಸಿನಕಾಯಿ ಕನಿಷ್ಠ ಹಾಗೂ ಗರಿಷ್ಠ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಂಡಿವೆ.

ಗುರುವಾರದ ದರ (ಪ್ರತಿ ಕ್ವಿಂಟಲ್‌ಗೆ)

ಮೆಣಸಿನ ತಳಿ	ಕನಿಷ್ಠ	ಗರಿಷ್ಠ
ಬ್ಯಾಡಗಿ ಕಡ್ಡಿ	₹1,029	₹24,500
ಬ್ಯಾಡಗಿ ಡಬ್ಬಿ	₹1,509	₹32,119
ಗುಂಟೂರು ತಳಿ	₹700	₹10,509

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಕುಮಟ	
ಚಿಪ್ಪು	25172-31448
ಕೋಕ	17300-29671
ಹಳೆಚಾಲಿ	35899-40419
ಹೊಸಚಾಲಿ	35289-37099
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	22899-29099
ಚಾಲಿ	34639-37299
ಕೋಕ	18899-29311
ಕೆಂಪುಗೋಟು	27469-30099
ರಾಶಿ	40769-41899
ತಟ್ಟಿಬೆಟ್ಟೆ	35499-40099
ಯಲ್ಲಾಪುರ	
ಬಿಳಿಗೋಟು	23009-30899
ಚಾಲಿ	31699-39630
ಕೋಕ	18812-29600
ಕೆಂಪುಗೋಟು	27131-33899
ರಾಶಿ	39869-44469
ತಟ್ಟಿಬೆಟ್ಟೆ	34299-39769
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	41500-43419
ಗೊರಬಲು	18100-32399
ರಾಶಿ ಇಡಿ	37089-42566
ಸರಕು	46239-73500
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	275-364
ದ್ವಿತಳಿ (ಬಿ.ವಿ)	255-460

ಐ.ಟಿ. ಸಚಿವ ರವಿಶಂಕರ್ ಪ್ರಸಾದ್ ಮಾಹಿತಿ

ದೇಶಿ ಆ್ಯಪ್ ಸ್ಟೋರ್‌ಗೆ ಕೇಂದ್ರದ ಒಲವು

ನವದೆಹಲಿ (ಪಿಟಿಐ): ಖಾಸಗಿ ಕಂಪನಿಗಳಿಗೆ ಆ್ಯಪ್‌ಗಳನ್ನು ಹೋಸ್ಟ್ ಮಾಡಲು ಉತ್ತೇಜನ ನೀಡುವ ಜೊತೆಗೆ ಸರ್ಕಾರವು ತನ್ನ ಮೊಬೈಲ್ ಆ್ಯಪ್ ಸ್ಟೋರ್ ಅನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಮತ್ತು ಬಲಪಡಿಸಲು ಉತ್ಸುಕವಾಗಿದೆ ಎಂದು ಕೇಂದ್ರ ಐ.ಟಿ. ಸಚಿವ ರವಿಶಂಕರ್ ಪ್ರಸಾದ್ ರಾಜ್ಯಸಭೆಗೆ ತಿಳಿಸಿದ್ದಾರೆ.

ದೇಶೀಯವಾಗಿ ಅಭಿವೃದ್ಧಿಪಡಿಸಿದ ಮೊದಲ ಆ್ಯಪ್‌ಸ್ಟೋರ್ 'ಮೊಬೈಲ್ ಸೇವಾ ಆ್ಯಪ್‌ಸ್ಟೋರ್'ನಲ್ಲಿ ವಿವಿಧ ವಿಭಾಗಗಳ 965ಕ್ಕೂ ಹೆಚ್ಚಿನ ಆ್ಯಪ್‌ಗಳಿವೆ ಎಂದು ಅವರು ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದ್ದಾರೆ. ಈ ಆ್ಯಪ್ ಸ್ಟೋರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸ್ಟೋರ್‌ಅನ್ನು ಇನ್ನಷ್ಟು ಬಲಪಡಿಸಲು ಸರ್ಕಾರ ಬಯಸುತ್ತದೆ ಎಂದು ತಿಳಿಸಿದ್ದಾರೆ.



ದೇಶವು ಸ್ವಂತ ಡಿಜಿಟಲ್ ಅಪ್ಲಿಕೇಷನ್ ಸ್ಟೋರ್ ಹೊಂದಿಲ್ಲದ ಕಾರಣ, ಡಿಜಿಟಲ್ ಸೇವೆಗಳಿಗಾಗಿ ಗೂಗಲ್ ಮತ್ತು ಆ್ಯಪಲ್ ಮೇಲೆ ಅವಲಂಬಿಸಲಾಗಿದೆ. ಇದರಿಂದ ಡಿಜಿಟಲ್ ವ್ಯವಸ್ಥೆಗಳಲ್ಲಿ ಸಮಸ್ಯೆ ಸೃಷ್ಟಿಯಾಗುತ್ತಿದೆಯೇ, ಸರ್ಕಾರ ಮತ್ತು ಖಾಸಗಿ ಆ್ಯಪ್‌ಗಳಿಗೆ ಒಂದೇ ಅಥವಾ ಪ್ರತ್ಯೇಕ ಡಿಜಿಟಲ್ ಆ್ಯಪ್ ಸ್ಟೋರ್ ಹೊಂದಲು ಸಚಿವಾಲಯ ಚಿಂತನೆ ನಡೆಸುತ್ತಿದೆಯೇ ಎನ್ನುವ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಭಾರತವು ಮೊಬೈಲ್ ಆ್ಯಪ್‌ಗಳ ಅತಿದೊಡ್ಡ ಬಳಕೆದಾರ ದೇಶವಾಗಿದೆ ಎಂದು ಪ್ರಸಾದ್ ಮಾಹಿತಿ ನೀಡಿದ್ದಾರೆ. ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಜೊತೆಗೆ ಆ್ಯಪ್‌ಗಳನ್ನು ರೂಪಿಸಲು ದೇಶದಲ್ಲಿ ಆ್ಯಪ್ ಅಭಿವೃದ್ಧಿಪಡಿಸುವವರಿಗೆ ಪ್ರೋತ್ಸಾಹ ಕೂಡ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

2021ರ ಭಾರತದ ಆ್ಯಪ್ ಮಾರುಕಟ್ಟೆಯ ಅಂಕಿ–ಅಂಶಗಳನ್ನು ಉಲ್ಲೇಖಿಸಿದ ಅವರು, ಆಂಡ್ರಾಯ್ಡ್‌ನಲ್ಲಿ ಇರುವ ಸರಿಸುಮಾರು ಶೇಕಡ 5ರಷ್ಟು ಆ್ಯಪ್‌ಗಳು ಭಾರತೀಯರು ರೂಪಿಸಿದ್ದಾಗಿವೆ ಎಂದಿದ್ದಾರೆ.

ಆರಂಭಿಕ ಹಂತಗಳಲ್ಲಿ ಆ್ಯಪಗಳನ್ನು ಉಚಿತವಾಗಿ ಹೋಸ್ಟ್ ಮಾಡಲು ಸರಿಯಾದ ಭಾರತೀಯ ಆಪ್ ಸ್ಟೋರ್ ಇರಬೇಕು ಎನ್ನುವುದನ್ನು ಸರ್ಕಾರ ಕಂಡುಕೊಂಡಿದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಐದು ದಿನಗಳಲ್ಲಿ ಕರಗಿತು ₹ 8 ಲಕ್ಷ ಕೋಟಿ ಸಂಪತ್ತು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಐದನೆ ದಿನವೂ ನಕಾರಾತ್ಮಕ ವಹಿವಾಟು ನಡೆದಿದೆ. ಇದರಿಂದಾಗಿ ಹೂಡಿಕೆದಾರರ ಸಂಪತ್ತು ₹ 8 ಲಕ್ಷ ಕೋಟಿಗಳಷ್ಟು ಕರಗಿದ್ದು, ಷೇರುಪೇಟೆಯ ಬಂಡವಾಳ ಮೌಲ್ಯ ₹ 201.22 ಲಕ್ಷ ಕೋಟಿಗಳಿಗೆ ಇಳಿಕೆಯಾಗಿದೆ.

ದೇಶದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಹಾಗೂ ಅಮೆರಿಕದ ಬಾಂಡ್ ಗಳಿಕೆ ಶೇ 1.72ರಷ್ಟು ಏರಿಕೆಯಾಗಿರುವುದರಿಂದ ಸೂಚ್ಯಂಕಗಳು ಇಳಿಕೆ ಕಾಣುವಂತಾಗಿದೆ ಎಂದು ತಜ್ಞರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 585 ಅಂಶ ಇಳಿಕೆಯಾಗಿ 49,217 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 163 ಅಂಶ ಇಳಿಕೆ ಕಂಡು 14,558 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ.

ಐದು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 2,063 ಅಂಶ ಹಾಗೂ ನಿಫ್ಟಿ 617 ಅಂಶಗಳಷ್ಟು ಇಳಿಕೆ ಕಂಡಿವೆ.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.58ರವರೆಗೂ ಇಳಿಕೆ ಕಂಡಿವೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 2 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 72.53ರಂತೆ ವಿನಿಮಯಗೊಂಡಿತು.

ಬ್ರೆಂಟ್ ಕಚ್ಚಾತೈಲ ದರ ಶೇ 0.40ರಷ್ಟು ಇಳಿಕೆಯಾಗಿ ಒಂದು ಬ್ಯಾರಲ್‌ಗೆ 67.73 ಡಾಲರ್‌ಗಳಿಗೆ ತಲುಪಿದೆ.

ಫ್ಯೂಚರ್ ರಿಟೇಲ್–ರಿಲಯನ್ಸ್ ಒಪ್ಪಂದಕ್ಕೆ ಹಿನ್ನಡೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಜೊತೆಗಿನ ₹ 24,713 ಕೋಟಿ ಮೌಲ್ಯದ ಒಪ್ಪಂದದ ವಿಚಾರವಾಗಿ ಮುಂದಡಿ ಇರಿಸುವಂತೆ ಇಲ್ಲ ಎಂದು ಫ್ಯೂಚರ್ ರಿಟೇಲ್ ಲಿಮಿಟೆಡ್‌ಗೆ ಸಿಂಗಪುರದ ಮಧ್ಯಸ್ಥಿಕೆ ಕೇಂದ್ರ ನೀಡಿದ್ದ ಆದೇಶವನ್ನು ದೆಹಲಿ ಹೈಕೋರ್ಟ್ ಗುರುವಾರ ಎತ್ತಿಹಿಡಿದಿದೆ.

ಫ್ಯೂಚರ್ ಸಮೂಹವು ತನ್ನ ಕೆಲವು ವಹಿವಾಟುಗಳನ್ನು ರಿಲಯನ್ಸ್‌ಗೆ ಮಾರಾಟ ಮಾಡಲು ಮುಂದಾಗಿತ್ತು. ಇದಕ್ಕೆ ಅಮೆಜಾನ್ ಕಂಪನಿಯು ಆಕ್ಷೇಪ ವ್ಯಕ್ತಪಡಿಸಿತ್ತು. ಫ್ಯೂಚರ್ ಸಮೂಹವು ಮಧ್ಯಸ್ಥಿಕೆ ಕೇಂದ್ರದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಫ್ಯೂಚರ್ ಸಮೂಹ ಮತ್ತು ಅದರ ಆಡಳಿತ ಮಂಡಳಿಯ ನಿರ್ದೇಶಕರು ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಹಿರಿಯ ನಾಗರಿಕರಿಗೆ ಕೋವಿಡ್ ಲಸಿಕೆ ಒದಗಿಸಲು ಪ್ರಧಾನ ಮಂತ್ರಿ ಪರಿಹಾರ ನಿಧಿಗೆ ₹ 20 ಲಕ್ಷ ಜಮಾ ಮಾಡಬೇಕು ಎಂದು ನ್ಯಾಯಾಲಯ ಆದೇಶಿಸಿದೆ. ಅಲ್ಲದೆ, ಏಪ್ರಿಲ್ 28ರಂದು ವಿಚಾರಣೆಗೆ ನಿರ್ದೇಶಕರು ಹಾಜರಿರಬೇಕು, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಕೂಡ ಆದೇಶ ನೀಡಿದೆ.

ಸಿಂಗಪುರದ ಮಧ್ಯಸ್ಥಿಕೆ ಕೇಂದ್ರ ನೀಡಿರುವ ಆದೇಶವನ್ನು ಅನುಷ್ಠಾನಕ್ಕೆ ತರುವಂತೆ ಮಾಡಬೇಕು ಎಂದು ಕೋರಿ ಅಮೆಜಾನ್, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಬೆಂಗಳೂರಿನಲ್ಲಿ 440 ಫ್ಲ್ಯಾಟ್: ಶಾಪೂರ್ಜಿ ₹ 300 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಶಾಪೂರ್ಜಿ ಪಲ್ಲೋಂಜಿ ರಿಯಲ್ ಎಸ್ಟೇಟ್ ಕಂಪನಿಯು ಬೆಂಗಳೂರಿನಲ್ಲಿ 440 ಫ್ಲ್ಯಾಟ್‌ಗಳು ಇರುವ ಐಷಾರಾಮಿ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಲು ಅಂದಾಜು ₹ 300 ಕೋಟಿ ಹೂಡಿಕೆ ಮಾಡಲಿದೆ.

ಬೆಂಗಳೂರಿನ ಬಿನ್ನಿಪೇಟೆಯಲ್ಲಿ 46 ಎಕರೆ ಜಾಗದಲ್ಲಿ ಐಷಾರಾಮಿ ವಸತಿ ಯೋಜನೆ 'ಪಾರ್ಕ್‌ವೆಸ್ಟ್'ನಲ್ಲಿ ಹೊಸ ಹಂತಕ್ಕೆ ಚಾಲನೆ ನೀಡಿದ್ದು ಅದರಲ್ಲಿ 462.10 ಚದರ ಅಡಿಯಿಂದ 1,185 ಚದರ ಅಡಿಯವರೆಗಿನ 440 ಐಷಾರಾಮಿ ಫ್ಲ್ಯಾಟ್‌ಗಳು ಇರುವ ಅಪಾರ್ಟ್‌ಮೆಂಟ್ ನಿರ್ಮಾಣವಾಗಲಿದೆ. ಬೆಲೆಯು ₹ 72 ಲಕ್ಷದಿಂದ ₹ 2.06 ಕೋಟಿಯವರೆಗೆ ಇರಲಿದೆ ಎಂದು ತಿಳಿಸಿದೆ

ವಿಶಾಲವಾದ ಐಷಾರಾಮಿ ಮನೆಗಳಿಗೆ ಬೇಡಿಕೆ ಕಳೆದ ಕೆಲವು ತಿಂಗಳುಗಳಿಂದ ಸ್ಥಿರವಾಗಿದೆ. ಕೋವಿಡ್ ನಂತರ ಬೆಂಗಳೂರಿನ ಗ್ರಾಹಕರ ವರ್ತನೆಯಲ್ಲಿ ಬದಲಾವಣೆ ಆಗಿದೆ ಎನ್ನುವುದನ್ನು ಇದು ಸೂಚಿಸುತ್ತಿದೆ ಎಂದು ಕಂಪನಿಯ ಸಿಇಒ ವೆಂಕಟೇಶ್ ಗೋಪಾಲಕೃಷ್ಣನ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಮಲಾ ನಿವಾಸದ ಬಳಿ ವ್ಯಕ್ತಿ ಸೆರೆ: ಬಂದೂಕು ವಶ

ವಾಷಿಂಗ್ಟನ್: ಬಂದೂಕು ಹಾಗೂ ಮದ್ದುಗುಂಡುಗಳನ್ನು ಹೊಂದಿದ್ದ ಆರೋಪದಲ್ಲಿ ಯುವಕನೊಬ್ಬನನ್ನು, ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಅಧಿಕೃತ ನಿವಾಸದ ಬಳಿ ಪೊಲೀಸರು ಬಂಧಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಟೆಕ್ಸಾಸ್‌ನ ಸ್ಯಾನ್ ಆಂಟೋನಿಯಾ ನಿವಾಸಿ ಪೌಲ್ ಮುರ್ರೆ ಎಂಬಾತನನ್ನು ಬುಧವಾರ ಬಂಧಿಸಿದ್ದು, ಆತನ ವಾಹನದಿಂದ ರೈಫಲ್ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿವಾಸದ ನವೀಕರಣ ಕಾಮಗಾರಿಗಳು ನಡೆಯುತ್ತಿರುವ ಕಾರಣ, ಕಮಲಾ ಅವರು ಅಲ್ಲಿ ವಾಸಿಸುತ್ತಿಲ್ಲ. ಶ್ವೇತಭವನ ಬಳಿಯ ಬ್ಲೇರ್ ಹೌಸ್‌ನಲ್ಲಿ ವಾಸಿಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಯು.ಎಸ್ ಕ್ಯಾಪಿಟಲ್ ಬಳಿ ಜನವರಿ 6ರಂದು ನಡೆದ ದಾಂದಲೆಯ ಬಳಿಕ ಅವರ ನಿವಾಸಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ.

ಮಹಾರಾಷ್ಟ್ರ ಸರ್ಕಾರಕ್ಕೆ ತಿಳಿ ಹೇಳಲು ಮನವಿ

ನವದೆಹಲಿ: ಭಾಷಾವಾರು ಪ್ರಾಂತ್ಯ ರಚನೆಗೂ ಮುನ್ನವೇ ಕರ್ನಾಟಕದ ಅವಿಭಾಜ್ಯ ಅಂಗವಾಗಿರುವ ಬೆಳಗಾವಿಯ ವಿಷಯವನ್ನು ರಾಜಕೀಯ ಲಾಭಕ್ಕಾಗಿ ಜೀವಂತವಾಗಿರಿಸಿ ಗಡಿವಿವಾದ ಕೆದಕಲಾಗುತ್ತಿದೆ ಎಂದು ಕಾಂಗ್ರೆಸ್ ಸದಸ್ಯ ಜಿ.ಸಿ. ಚಂದ್ರಶೇಖರ್ ದೂರಿದರು.

ರಾಜ್ಯಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಮಹಾಜನ್ ಆಯೋಗದ ವರದಿಯಲ್ಲೂ ಬೆಳಗಾವಿ ಮಾತ್ರವಲ್ಲದೆ, ಮಹಾರಾಷ್ಟ್ರದ ಗಡಿಯಲ್ಲಿರುವ ಅನೇಕ ಪ್ರದೇಶಗಳು ಕರ್ನಾಟಕದ ಭಾಗವೆಂದೇ ಹೇಳಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯೋತ್ಸವದ ದಿನವಾದ ನವೆಂಬರ್ 1ರಂದು ಕನ್ನಡಿಗರು ಸ್ವಾಭಿಮಾನದ ದಿನವನ್ನಾಗಿ ಆಚರಿಸಿದರೆ, ಮಹಾರಾಷ್ಟ್ರದ ರಾಜಕಾರಣಿಗಳು ಆ ದಿನವನ್ನ ಕರಾಳ ದಿನವಾಗಿ ಆಚರಿಸುತ್ತ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುತ್ತಿದ್ದಾರೆ ಎಂದು ಅವರು ಹೇಳಿದರು.

ಇಂಥ ಬೆಳವಣಿಗೆಗಳಿಂದ ಕರ್ನಾಟಕ ಹೊತ್ತಿ ಉರಿಯುವಂತಾಗಿದೆ ಎಂದ ಅವರು, ಗಡಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣವು ಸುಪ್ರೀಂ ಕೋರ್ಟ್ ಎದುರು ವಿಚಾರಣೆಯ ಹಂತದಲ್ಲಿ ಇರುವುದರಿಂದ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ಮಹಾರಾಷ್ಟ್ರ ಸರ್ಕಾರಕ್ಕೆ ತಿಳಿ ಹೇಳಬೇಕು ಎಂದು ಕೋರಿದರು.

ವಿಮೆ ಪ್ರೀಮಿಯಂ ಹೆಚ್ಚಿಸುವ ಬದಲಾವಣೆ ಬೇಡ: ಪ್ರಾಧಿಕಾರ

ನವದೆಹಲಿ (ಪಿಟಿಐ): ಚಾಲ್ತಿಯಲ್ಲಿರುವ ಆರೋಗ್ಯ ವಿಮೆಗಳ ಪ್ರೀಮಿಯಂ ಮೊತ್ತ ಹೆಚ್ಚಿಸುವಂತಹ ಯಾವುದೇ ಬದಲಾವಣೆಗೆ ಮುಂದಾಗದಂತೆ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ವಿಮಾ ಕಂಪನಿಗಳಿಗೆ ಸೂಚನೆ ನೀಡಿದೆ.

ವೈಯಕ್ತಿಕ ಅಪಘಾತ ಮತ್ತು ಪ್ರಯಾಣ ವಿಮೆಗಳಿಗೆ ಕೂಡ ಈ ಸೂಚನೆ ಅನ್ವಯ ಆಗುತ್ತದೆ.

ಪ್ರೀಮಿಯಂ ಮೊತ್ತದಲ್ಲಿ ಹೆಚ್ಚಳಕ್ಕೆ ಕಾರಣವಾಗುವ ರೀತಿಯಲ್ಲಿ, ಈಗಾಗಲೇ ನೀಡಿರುವ ಸವಲತ್ತುಗಳಲ್ಲಿ ಬದಲಾವಣೆ ತರಲು, ಈಗಾಗಲೇ ಇರುವ ವಿಮಾ ಉತ್ಪನ್ನಗಳ ಜೊತೆ ಹೆಚ್ಚುವರಿ ಸವಲತ್ತು ನೀಡಲು ವಿಮಾ ಕಂಪನಿಗಳಿಗೆ ಅವಕಾಶ ಇಲ್ಲ ಎಂದು ಐಆರ್‌ಡಿಎಐ ಸುತ್ತೋಲೆ ಹೇಳಿದೆ.



ವಿಮಾ ಕಂಪನಿಗಳು ನಿಯಮಗಳಿಗೆ ಅನುಗುಣವಾಗಿ ವಿಮೆಗಳಲ್ಲಿ ಸಣ್ಣ ಬದಲಾವಣೆ ತರಲು ಅವಕಾಶ ಹೊಂದಿವೆ.

'ಹೆಚ್ಚುವರಿ ಪ್ರಯೋಜನಗಳನ್ನು ಸೇರಿಸುವುದು ಅಥವಾ ಈಗಾಗಲೇ ನೀಡಿರುವ ಪ್ರಯೋಜನಗಳನ್ನು ಮೇಲ್ದರ್ಜೆಗೆ ಏರಿಸುವ ಕೆಲಸವನ್ನು ಕಂಪನಿಗಳು ಮಾಡಬಹುದು. ಆದರೆ ಅವನ್ನು ಒಂದು ಆಯ್ಕೆಯಾಗಿ, ಅವಕ್ಕೆ ಪ್ರತ್ಯೇಕ ಪ್ರೀಮಿಯಂ ಪಡೆದು ಮಾಡಬೇಕು, ವಿಮೆ ಖರೀದಿಸುವವರಿಗೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಅವರು ಇಚ್ಛಿಸಿದಲ್ಲಿ ಮಾತ್ರ ಅಂತಹ ಸೌಲಭ್ಯ ನೀಡಬೇಕು' ಎಂದು ಪ್ರಾಧಿಕಾರ ತಾಕೀತು ಮಾಡಿದೆ.

ವಿಮೆಯಲ್ಲಿ ಬಳಕೆ ಮಾಡುವ ಪದಗಳು ಆದಷ್ಟು ಸರಳವಾಗಿರುವಂತೆ, ವಿಮೆ ಖರೀದಿಸುವವರಿಗೆ ಸುಲಭವಾಗಿ ಅರ್ಥವಾಗುವಂತೆ ಇರಬೇಕು ಎಂದು ಕೂಡ ಸೂಚಿಸಲಾಗಿದೆ.

ಚಿನ್ನಪ್ರಿಯರಿಗೆ ಸಿಹಿ ಸುದ್ದಿ • ಸಚಿವ ನಿರಾಣಿ ಮಾಹಿತಿ

ಸರ್ಕಾರಿ ಆಭರಣ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು, ಮೈಸೂರು ಸೇರಿ ರಾಜ್ಯದ ಪ್ರಮುಖ ನಗರಗಳಲ್ಲಿ ಚಿನ್ನಾಭರಣಗಳ ಮಳಿಗೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು.

ಮೈಸೂರು ಸಿಲ್ಕ್ಸ್, ಮೈಸೂರು ಸ್ಯಾಂಡಲ್ ಸೋಪ್ ಮತ್ತು ಕಾವೇರಿ ಹ್ಯಾಂಡ್‌ಲೂಮ್ ಮಾದರಿಯಲ್ಲಿ ಬ್ರ್ಯಾಂಡಿಂಗ್ ಮಾಡಿ ಅದೇ ಮಾದರಿಯಲ್ಲಿ ಆಭರಣಗಳ ಮಳಿಗೆ ತೆರೆಯಲಾಗುವುದು. ಸರ್ಕಾರವೇ ಮಳಿಗೆಗಳನ್ನು ನಿರ್ವಹಣೆ ಮಾಡಲಿದ್ದು, ಗ್ರಾಹಕರ ಬೇಡಿಕೆಗೆ ತಕ್ಕಂತೆ ಆಭರಣಗಳನ್ನು ತಯಾರಿಸಿಕೊಡಲಾಗುವುದು ಎಂದು ವಿವರಿಸಿದರು.

ರಾಜ್ಯದಲ್ಲಿ ಮಳಿಗೆಗಳ ಯಶಸ್ಸು ಆಧರಿಸಿ ಹೊರ ರಾಜ್ಯಗಳಲ್ಲೂ ಆಭರಣಗಳ ಮಳಿಗೆಗಳನ್ನು ಆರಂಭಿಸುವ ಯೋಜನೆ ಇದೆ ಎಂದರು.

ಗಂಡಭೇರುಂಡ ಚಿನ್ನದ ನಾಣ್ಯ

ಮದುವೆ ಮತ್ತು ಇತರ ಸಮಾರಂಭಗಳಲ್ಲಿ ಬಂಧು–ಬಾಂಧವರು ಮತ್ತು ಮಿತ್ರರಿಗೆ ಉಡುಗೊರೆಯಾಗಿ ವಿತರಿಸಲು ಕರ್ನಾಟಕದ ಲಾಂಛನವಾದ 'ಗಂಡಭೇರುಂಡ' ಗುರುತಿನ ಚಿನ್ನದ ನಾಣ್ಯಗಳನ್ನು ಹೊರತರಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಚಿನ್ನದ ಉತ್ಪಾದನೆ ದ್ವಿಗುಣಗೊಳಿಸಲು ಉದ್ದೇಶಿಸಲಾಗಿದೆ. ಈಗ ಹಟ್ಟಿ ಚಿನ್ನದ ಗಣಿಯಲ್ಲಿ 1,500 ರಿಂದ 1,800 ಕೆ.ಜಿ ಚಿನ್ನದ ಉತ್ಪಾದನೆ ಆಗುತ್ತಿದೆ. 2022 ರ ವೇಳೆಗೆ ಆ ಪ್ರಮಾಣವನ್ನು 5,000 ಕೆ.ಜಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು.

'ಬೆಂಗಳೂರಿನಲ್ಲಿ ಪ್ರತ್ಯೇಕ 'ಸುಪ್ರೀಂ' ಪೀಠ ಸ್ಥಾಪಿಸಿ'

ನವದೆಹಲಿ: ದಕ್ಷಿಣ ಭಾರತದ ನಿವಾಸಿಗಳ ಅನುಕೂಲಕ್ಕಾಗಿ ಸುಪ್ರೀಂ ಕೋರ್ಟ್‌ನ ಪ್ರತ್ಯೇಕ ಪೀಠವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವಂತೆ ರಾಜ್ಯಸಭೆ ಸದಸ್ಯ ಬಿಜೆಪಿಯ ಕೆ.ಸಿ. ರಾಮಮೂರ್ತಿ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ರಾಜ್ಯಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ವಿವಿಧ ರಾಜ್ಯಗಳಲ್ಲಿ ಪ್ರತ್ಯೇಕ ಹೈಕೋರ್ಟ್ ಪೀಠಗಳು ಇರುವಂತೆಯೇ, ಸುಪ್ರೀಂ ಕೋರ್ಟ್‌ನ ಪೀಠವೊಂದನ್ನು ದೇಶದ ವಿವಿಧೆಡೆ ಸ್ಥಾಪಿಸಬೇಕು ಎಂಬ ಬೇಡಿಕೆ ಅನೇಕ ವರ್ಷಗಳಿಂದ ಇದೆ. ಕೇಂದ್ರವು ಇದನ್ನು ಪರಿಗಣಿಸಬೇಕು' ಎಂದು ಕೋರಿದರು.

ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ರಾಷ್ಟ್ರ ರಾಜಧಾನಿ ದೆಹಲಿಗೆ ತೆರಳಿ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥ ಮಾಡಿಕೊಂಡು ಬರುವುದಕ್ಕೆ ಕಕ್ಷಿದಾರರಿಗೂ, ಅವರ ಪರ ವಕೀಲರಿಗೂ ಕಷ್ಟವಾಗುತ್ತದೆ. ಮಾತ್ರವಲ್ಲ, ಸಾಕಷ್ಟು ಖರ್ಚಿಗೆ ದಾರಿ ಮಾಡಿಕೊಡುತ್ತದೆ' ಎಂದರು.

ಉತ್ತಮ ಹವಾನಾನ, ಸಕಲ ಮೂಲಸೌಕರ್ಯ ಇರುವ ದಕ್ಷಿಣದ ಬೆಂಗಳೂರಿನಲ್ಲಿ ಪೀಠ ಸ್ಥಾಪಿಸುವ ಮೂಲಕ ಕರ್ನಾಟಕ, ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳದ ಜನತೆಗೆ ಅನುಕೂಲ ಕಲ್ಪಿಸುವತ್ತ ಕೇಂದ್ರ ಆಲೋಚಿಸಬೇಕು ಎಂದು ಮನವಿ ಮಾಡಿದರು.

ವಿಮಾ ಮಸೂದೆಗೆ ರಾಜ್ಯಸಭೆ ಒಪ್ಪಿಗೆ

ನವದೆಹಲಿ (ಪಿಟಿಐ): ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಮಿತಿಯನ್ನು ಈಗಿರುವ ಶೇಕಡ 49ರಷ್ಟರಿಂದ ಶೇ 74ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಗೆ ರಾಜ್ಯಸಭೆ ಗುರುವಾರ ಅಂಗೀಕಾರ ನೀಡಿದೆ.



ನಿರ್ಮಲಾ

ವಿಮಾ (ತಿದ್ದುಪಡಿ) ಮಸೂದೆ 2021ರ ಮೇಲಿನ ಚರ್ಚೆಗೆ ಉತ್ತರಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ವಿಮಾ ವಲಯಕ್ಕೆ ಸಂಬಂಧಿಸಿದ ಹೂಡಿಕೆದಾರರ ಜೊತೆ, ವಿಮಾ ನಿಯಂತ್ರಣ ಪ್ರಾಧಿಕಾರವಾದ ಐಆರ್‌ಡಿಎಐ ಜೊತೆ ವಿಸ್ತೃತ ಸಮಾಲೋಚನೆ ನಡೆಸಿದ ನಂತರ ಎಫ್‌ಡಿಐ ಮಿತಿಯನ್ನು ಶೇ 74 ಕ್ಕೆ ಹೆಚ್ಚಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದರು.



2020ರಲ್ಲಿ ಕೋವಿಡ್–19 ಪರಿಣಾಮ: ವಿಶ್ವಸಂಸ್ಥೆಯಿಂದ ವರದಿ ಬಿಡುಗಡೆ

ಮಕ್ಕಳು, ತಾಯಂದಿರ ಮರಣ ಪ್ರಮಾಣ ಹೆಚ್ಚು

ವಿಶ್ವಸಂಸ್ಥೆ (ಪಿಟಿಐ): ಕೋವಿಡ್‌–19 ಪಿಡುಗಿನಿಂದಾಗಿ ಭಾರತದಲ್ಲಿ ಕಳೆದ ವರ್ಷ ಆರೋಗ್ಯ ಸೇವೆಯಲ್ಲಿ ಸಾಕಷ್ಟು ವ್ಯತ್ಯಯ ಕಂಡುಬಂತು. ಈ ಕಾರಣಕ್ಕಾಗಿ 2020ರಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಭಾರತದಲ್ಲಿ 5 ವರ್ಷದೊಳಗಿನ ಮಕ್ಕಳು ಹಾಗೂ ತಾಯಂದಿರ ಮರಣ ಪ್ರಮಾಣದಲ್ಲಿ ಹೆಚ್ಚಳ ಕಂಡುಬರಲಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ.

ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾದ ಯುನಿಸೆಫ್ ಹಾಗೂ ಯುಎನ್‌ಎಫ್‌ಪಿಎ ಬಿಡುಗಡೆ ಮಾಡಿರುವ 'ದಕ್ಷಿಣ ಏಷ್ಯಾದಲ್ಲಿ ಕೋವಿಡ್‌–19ರ ನೇರ ಹಾಗೂ ಪರೋಕ್ಷ ಪರಿಣಾಮ ಹಾಗೂ ಪ್ರತಿಕ್ರಿಯೆ' ಎಂಬ ವರದಿಯಲ್ಲಿ ಈ ವಿಷಯವನ್ನು ವಿವರಿಸಲಾಗಿದೆ.

ಈ ವರ್ಷದ ಫೆಬ್ರುವರಿ ಅಂತ್ಯದ ವರೆಗಿನ ಅವಧಿಯಲ್ಲಿ ದಕ್ಷಿಣ ಏಷ್ಯಾದಲ್ಲಿ 1.2 ಕೋಟಿ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈ ಪೈಕಿ ಗರಿಷ್ಠ 1.9 ಕೋಟಿ ಪ್ರಕರಣಗಳು ಭಾರತದಲ್ಲಿ ವರದಿಯಾಗಿವೆ ಎಂದು ಯುನಿಸೆಫ್ ಹೇಳಿದೆ.

2021ರ ಸೆಪ್ಟೆಂಬರ್ ವೇಳೆಗೆ ಕೋವಿಡ್‌–19 ಪರೀಕ್ಷೆ ಹಾಗೂ ಚಿಕಿತ್ಸೆಗಾಗಿ ಭಾರತ 10 ಶತಕೋಟಿ ಡಾಲರ್ ವೆಚ್ಚ ಮಾಡಲಿದೆ ಎಂದು ಅಂದಾಜಿಸಲಾಗಿದ್ದು, ಇದು ದಕ್ಷಿಣ ಏಷ್ಯಾದಲ್ಲಿಯೇ ಗರಿಷ್ಠ ವೆಚ್ಚವಾಗಿರಲಿದೆ ಎಂದು ವರದಿ ಹೇಳಿದೆ.

ದಕ್ಷಿಣ ಏಷ್ಯಾದ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳಾದ ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭಾರತ, ನೇಪಾಳ, ಪಾಕಿಸ್ತಾನ ಹಾಗೂ ಶ್ರೀಲಂಕಾಕ್ಕೆ ಸಂಬಂಧಿಸಿದ ಅಂಕಿ–ಅಂಶಗಳ ಆಧಾರದಲ್ಲಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

ಮಕ್ಕಳ ಹಾಗೂ ತಾಯಂದಿರ ಆರೋಗ್ಯ, ಆರ್ಥಿಕತೆ, ಉದ್ಯೋಗ ವಲಯ ಹಾಗೂ ಶಿಕ್ಷಣದ ಮೇಲೆ ಕೋವಿಡ್ ಪಿಡುಗಿನ ಪರಿಣಾಮವನ್ನು ವಿಶ್ಲೇಷಿಸಲಾಗಿದೆ. ಲಾಕ್‌ಡೌನ್, ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಹಾಗೂ ಮಾಸ್ಕ್ ಧರಿಸುವಂತಹ ಕ್ರಮಗಳಿಂದ ಭಾರತದಲ್ಲಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯವಿದೆ ಎಂದೂ ಅಭಿಪ್ರಾಯಪಡಲಾಗಿದೆ.

ಕೋವಿಡ್: ಋತುಮಾನಕ್ಕೆ ತಕ್ಕಂತೆ ಬಾಧಿಸುವ ಕಾಯಿಲೆಯಾಗುವ ಸಾಧ್ಯತೆ

ಜಿನಿವಾ (ಎಎಫ್‌ಪಿ): ಕೋವಿಡ್‌–19 ಋತುಮಾನಕ್ಕೆ ತಕ್ಕಂತೆ ಕಾಣಿಸಿಕೊಳ್ಳುವ ಕಾಯಿಲೆಯ ರೂಪ ಪಡೆಯುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆ ಗುರುವಾರ ಹೇಳಿದೆ.

ಆದರೆ, ಹವಾಮಾನದಲ್ಲಿನ ಬದಲಾವಣೆಗಳನ್ನು ಆಧಾರವಾಗಿಟ್ಟುಕೊಂಡು, ಈ ಪಿಡುಗಿನ ಪ್ರಸರಣ ತಡೆಯಲು ಜಾರಿಗೊಳಿಸಿರುವ ಮಾರ್ಗಸೂಚಿಗಳನ್ನು ನಿರ್ಲಕ್ಷ್ಯ ಮಾಡಬಾರದು ಎಂದೂ ಎಚ್ಚರಿಸಿದೆ.

ಕೋವಿಡ್ ಪ್ರಸರಣದ ಮೇಲೆ ಹವಾಮಾನದಲ್ಲಿನ ಬದಲಾವಣೆ, ವಾಯುವಿನ ಗುಣಮಟ್ಟ ಯಾವ ರೀತಿಯ ಪ್ರಭಾವ ಬೀರುತ್ತವೆ ಎಂಬ ಬಗ್ಗೆ ಅಧ್ಯಯನ ನಡೆಸಲು ರಚಿಸಿದ್ದ ತಜ್ಞರ ತಂಡ, ಈ ಸೋಂಕು ಕಾಲಕಾಲಕ್ಕೆ ಮನುಕುಲವನ್ನು ಪೀಡಿಸುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದೆ.

ವಿಶ್ವಸಂಸ್ಥೆಯ ವಿಶ್ವ ಹವಾಮಾನ ಸಂಘಟನೆ ರಚಿಸಿದ್ದ ಈ ತಂಡದಲ್ಲಿ 16 ಜನ ತಜ್ಞರಿದ್ದಾರೆ.

'ಉಸಿರಾಟದಲ್ಲಿ ತೊಂದರೆ ತರುವ ವೈರಾಣು ಸೋಂಕುಗಳು ನಿರ್ದಿಷ್ಟ ಋತುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಚಳಿಗಾಲದಲ್ಲಿ ಇನ್‌ಫ್ಲುಯೆಂಜಾ ಹಾಗೂ ಸಮಶೀತೋಷ್ಣ ವಾತಾವರಣದಲ್ಲಿ ಕೊರೊನಾ ಸೋಂಕಿನ ಹಾವಳಿ ಹೆಚ್ಚಾಗಿ ಕಂಡುಬರಲಿದೆ' ಎಂದು ತಜ್ಞರು ಹೇಳಿದ್ದಾರೆ.

ಪ್ರಾಧ್ಯಾಪಕ ಸ್ಥಾನಕ್ಕೆ ಮೆಹ್ತಾ ರಾಜೀನಾಮೆ: ವಿ.ವಿ ಹಳೆ ವಿದ್ಯಾರ್ಥಿಗಳ ಸಂಘ ಆಕ್ರೋಶ

ನವದೆಹಲಿ (ಪಿಟಿಐ): ಪ್ರಸಿದ್ಧ ರಾಜಕೀಯ ನಿರೂಪಕರಾದ ಪ್ರತಾಪ್ ಭಾನು ಮೆಹ್ತಾ ಅವರು ವಿ.ವಿ ಯ ಪ್ರಾಧ್ಯಾಪಕ ಸ್ಥಾನಕ್ಕೆ ರಾಜೀನಾಮೆ ನೀಡಿದ ವಿಚಾರಕ್ಕೆ ಸಂಬಂಧಿಸಿದಂತೆ ಸೋನಿಪತ್‌ನ ಅಶೋಕ ವಿಶ್ವವಿದ್ಯಾಲಯದ ಬೋಧಕ ವೃಂದ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಮಂಡಳಿ ಸದಸ್ಯರಿಗೆ ಪತ್ರ ಬರೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೆಹ್ತಾ ಅವರು ಎರಡು ವರ್ಷಗಳ ಹಿಂದೆ ಕುಲಪತಿ ಸ್ಥಾನದಿಂದ ಕೆಳಗಿಳಿದಿದ್ದರು. ವಾರದ ಮುಂಚೆ ತಮ್ಮ ಪ್ರಾಧ್ಯಾಪಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದಾದ ಬೆನ್ನಲ್ಲೇ ಖ್ಯಾತ ಅರ್ಥಶಾಸ್ತ್ರಜ್ಞ ಅರವಿಂದ್ ಸುಬ್ರಹ್ಮಣಿಯಂ ಸಹ ವಿ.ವಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ

ಮೆಹ್ತಾ ಅವರಿಗೆ ಬೆಂಬಲ ಸೂಚಿಸಿ, ವಿ.ವಿಯ ಹಳೆ ವಿದ್ಯಾರ್ಥಿಗಳ ಸಂಘವು ಪ್ರತ್ಯೇಕ ಹೇಳಿಕೆಯನ್ನು ಬಿಡುಗಡೆ ಮಾಡಿದೆ. ಮೆಹ್ತಾ ಅವರ ಬರಹ, ಸರ್ಕಾರದ ವಿರುದ್ಧ ಟೀಕೆಗಳಿಂದಲೇ ಅವರು ರಾಜೀನಾಮೆ ನೀಡಿದ್ದಾರೆ. ಈ ಪರಿಸ್ಥಿತಿ ತುಂಬಾ ಕಷ್ಟಕರವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಹಾಗೆಯೇ ರಾಜೀನಾಮೆಯನ್ನು ರದ್ದುಗೊಳಿಸುವಂತೆಯೂ ಕೋರಲಾಗಿದೆ.



ಗುಂಡಿನ ದಾಳಿ: ಅಮೆರಿಕ ಮೂಲದ ಬಂದೂಕುಧಾರಿ ವಿರುದ್ಧ ಆರೋಪ

ಅಟ್ಲಾಂಟಾ: ಅಟ್ಲಾಂಟಾದ ಮೂರು ಪ್ರದೇಶಗಳಲ್ಲಿನ ಮಸಾಜ್ ಪಾರ್ಲರ್‌ಗಳ ಮೇಲೆ ದಾಳಿ ನಡೆಸಿ ಎಂಟು ಮಂದಿ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಬಂಧಿಸಲಾಗಿದ್ದ ಬಂದೂಕುಧಾರಿ, 21 ವರ್ಷದ ರಾಬರ್ಟ್‌ನ ವಿರುದ್ಧ ದೋಷಾರೋಪ ಹೊರಿಸಲಾಗಿದೆ.

ಗುಂಡಿನ ದಾಳಿ ಕುರಿತು ತನಿಖೆ ನಡೆಸುತ್ತಿರುವ ಅಧಿಕಾರಿಗಳು, ಅಮೆರಿಕದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ನಡೆದ ಅತ್ಯಂತ ಭೀಕರ ಸಾಮೂಹಿಕ ಹತ್ಯೆಯಂತಹ ಕೃತ್ಯ ನಡೆಸಲು ರಾಬರ್ಟ್‌ಗೆ ಯಾವ ಪ್ರಚೋದನೆ ಇತ್ತು ಎಂಬುದನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದಾರೆ.

'ಮಂಗಳವಾರ ನಡೆಸಿದ ದಾಳಿ ಒಂದು ಜನಾಂಗವನ್ನು ಗುರಿಯಾಗಿಸಿಕೊಂಡು ಮಾಡಿದ್ದಲ್ಲ' ಎಂಬುದಾಗಿ ಪೊಲೀಸರಿಗೆ ಲಾಂಗ್ ಹೇಳಿದ್ದಾನೆ. 'ತಾನೊಬ್ಬ ಲೈಂಗಿಕ ವ್ಯಸನಿ ಎಂದೂ ಹೇಳಿಕೊಂಡಿರುವ ಲಾಂಗ್, ಘಟನಾ ಸ್ಥಳದಲ್ಲಿ ಕಂಡು ಬಂದ ದೃಶ್ಯಗಳು ನನ್ನನ್ನು ಪ್ರಚೋದಿಸುವಂತಿದ್ದವು ಎಂದು ಹೇಳಿದ್ದಾಗಿ' ಪೊಲೀಸರು ಹೇಳಿದರು.

ಆದರೆ, ಈ ಘಟನೆಯಲ್ಲಿ ಮೃತಪಟ್ಟ 8 ಜನರ ಪೈಕಿ ಆರು ಮಹಿಳೆಯರು ಏಷ್ಯಾದ ಮೂಲದವರು. ಹೀಗಾಗಿ, ಜನಾಂಗವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿಲ್ಲ ಎಂಬ ಆರೋಪಿಯ ಹೇಳಿಕೆಗಳ ಬಗ್ಗೆ ಸಂದೇಹ ಮೂಡುವಂತಾಗಿದೆ ಎಂದು ಹೇಳಲಾಗುತ್ತಿದೆ.

5 ಲಕ್ಷ ಡಾಲರ್‌ಗೂ ಹೆಚ್ಚು ನಗದು ಪಾವತಿ: ಉದ್ಯಮಿ ಹೇಳಿಕೆ

ಸೂಕಿ ವಿರುದ್ಧ ಭ್ರಷ್ಟಾಚಾರ ಆರೋಪ

ಮ್ಯಾಂಡಲೆ, ಮ್ಯಾನ್ಮಾರ್ (ಎಪಿ): ಪದಚ್ಯುತ ನಾಯಕಿ ಆಂಗ್ ಸಾನ್ ಸೂ ಕಿ ಅವರಿಗೆ 5.5 ಲಕ್ಷ ಡಾಲರ್ (₹ 399.24 ಕೋಟಿ) ಮೊತ್ತವನ್ನು ಪಾವತಿಸಿದ್ದಾಗಿ ನಿರ್ಮಾಣ ಕ್ಷೇತ್ರದ ಪ್ರಮುಖ ಉದ್ಯಮಿಯೊಬ್ಬರು ಆರೋಪಿಸಿದ್ದಾರೆ.

ಉದ್ಯಮಿ ಮೌಂಗ್ ವೇಕ್ ಈ ಹೇಳಿಕೆ ನೀಡಿದ್ದು, ಸರ್ಕಾರಿ ಒಡೆತನದ ಟಿ.ವಿ ಚಾನೆಲ್‌ನಲ್ಲಿ ಇದು ಪ್ರಸಾರವಾಗಿದೆ. ವೇಕ್ ಅವರು ಮಿಲಿಟರಿ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ.

ಸೂ ಕಿ ವಿರುದ್ಧ ಮತ್ತಷ್ಟು ಗಂಭೀರ ಆರೋಪಗಳನ್ನು ಹೊರಿಸಲು ಉದ್ಯಮಿಯ ಈ ಹೇಳಿಕೆ ಕಾರಣವಾಗಲಿದೆ ಎಂದೂ ಹೇಳಲಾಗುತ್ತಿದೆ.

ಡ್ರಗ್ಸ್ ಸಾಗಣೆ ಪ್ರಕರಣದಲ್ಲಿ ವೇಕ್ ಅವರಿಗೆ ಈ ಹಿಂದೆ ಶಿಕ್ಷೆ ವಿಧಿಸಲಾಗಿತ್ತು. 'ತನ್ನ ವ್ಯವಹಾರ ಸುಸೂತ್ರವಾಗಿ ನಡೆಯಲು ಸಹಕಾರ ನೀಡುವ ಸಂಬಂಧ ಹಲವಾರು ಸಚಿವರಿಗೆ ಹಣ ಪಾವತಿಸಿದ್ದೆ. ಸೂ ಕಿ ಅವರು ತಮ್ಮ ತಾಯಿಯ ಹೆಸರಿನಲ್ಲಿ ಸ್ಥಾಪಿಸಿರುವ ಚಾರಿಟಬಲ್‌ಗೆ 2018ರಲ್ಲಿ ಒಂದು ಲಕ್ಷ ಅಮೆರಿಕನ್ ಡಾಲರ್ (₹72.71 ಲಕ್ಷ) ನೀಡಿದ್ದೆ' ಎಂದು ತಿಳಿಸಿದ್ದಾರೆ.

'2019ರಲ್ಲಿಯೂ 1.5 ಲಕ್ಷ ಅಮೆರಿಕನ್ ಡಾಲರ್ (₹1.09 ಕೋಟಿ)ಹಾಗೂ ಕಳೆದ ವರ್ಷ ಫೆಬ್ರುವರಿಯಲ್ಲಿ 50,000 ಡಾಲರ್ (₹36.35 ಲಕ್ಷ)ಮತ್ತು ಕಳೆದ ವರ್ಷ ಏಪ್ರಿಲ್‌ನಲ್ಲಿ 2.5 ಲಕ್ಷ ಡಾಲರ್ (₹1.81 ಕೋಟಿ) ನೀಡಿದ್ದೆ' ಎಂದೂ ವೇಕ್ ಹೇಳಿದ್ದಾರೆ. ಆದರೆ, ಯಾವ ಉದ್ದೇಶಕ್ಕೆ ಎನ್ನುವುದನ್ನು ಬಹಿರಂಗೊಪಡಿಸಿಲ್ಲ.

ಈ ಆರೋಪಗಳನ್ನು ತಳ್ಳಿಹಾಕಿರುವ ಸೂ ಕಿ ಪರ ವಕೀಲರು, 'ಇದೊಂದು ಜೋಕ್' ಎಂದು ಹೇಳಿದ್ದಾರೆ.

ಸೂ ಕಿ ಅವರನ್ನು ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಲುಕಿಸಲು ಮಿಲಿಟರಿ ಪ್ರಯತ್ನಿಸುತ್ತಿದೆ. ರಾಜಕೀಯ ಪಕ್ಷವೊಂದರಿಂದ 6 ಲಕ್ಷ ಡಾಲರ್ (₹4.36 ಕೋಟಿ) ಮೌಲ್ಯದ ಚಿನ್ನದ ಗಟ್ಟಿಗಳನ್ನು ಸೂ ಕಿ ಪಡೆದಿದ್ದಾರೆ ಎಂದು ಮಿಲಿಟರಿ ಈಗಾಗಲೇ ಆರೋಪಿಸಿದೆ. ಭ್ರಷ್ಟಾಚಾರ ನಿಗ್ರಹ ಆಯೋಗ ಎಲ್ಲ ಆರೋಪಗಳ ಬಗ್ಗೆ ತನಿಖೆ ನಡೆಸುತ್ತಿದೆ.

ಬಂಧನದ ವಾರಂಟ್: ದೇಶದ್ರೋಹದ ಆರೋಪದ ಮೇಲೆ ವಿಶ್ವಸಂಸ್ಥೆಯ ರಾಯಭಾರಿ ಕ್ಯಾವ್ ಮೊಯ್ ಟುನ್ ಅವರ ವಿರುದ್ಧ ಬಂಧನದ ವಾರಂಟ್ ಹೊರಡಿಸಲಾಗಿದೆ.

ಸೇನಾ ಆಡಳಿತವನ್ನು ಖಂಡಿಸಿದ್ದ ಕ್ಯಾವ್ ಅವರು, ದೇಶದಲ್ಲಿ ಮತ್ತೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅಂತರರಾಷ್ಟ್ರೀಯ ಸಮುದಾಯ ಕಠಿಣ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕು ಎಂದು ವಿಶ್ವಸಂಸ್ಥೆಯಲ್ಲಿ ಹೇಳಿದ್ದರು.

ಎಸ್–400 ಮಾರಾಟ: ಭಾರತ ಭೇಟಿ ವೇಳೆ ಚರ್ಚೆಗೆ ಒತ್ತಾಯ

ವಾಷಿಂಗ್ಟನ್ (ಪಿಟಿಐ): ರಷ್ಯಾ ಎಸ್–400 ಕ್ಷಿಪಣಿ ವ್ಯವಸ್ಥೆಯನ್ನು ಭಾರತಕ್ಕೆ ಮಾರಾಟ ಮಾಡಿದ ವಿಷಯ ಕುರಿತು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಚರ್ಚಿಸುವಂತೆ ಸೆನೆಟ್ ಸದಸ್ಯರೊಬ್ಬರು ಅಮೆರಿಕ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರನ್ನು ಒತ್ತಾಯಿಸಿದ್ದಾರೆ.


ಲಾಯ್ಡ್ ಆಸ್ಟಿನ್

ಸೆನೆಟ್‌ನ ವಿದೇಶಿ ಸಂಬಂಧಗಳ ಸಮಿತಿಯ ಚೇರಮನ್ ಆಗಿರುವ ಸಂಸದ ರಾಬರ್ಟ್ ಮೆನೆಂಡೇಜ್ ಈ ಸಂಬಂಧ ಆಸ್ಟಿನ್ ಅವರಿಗೆ ಪತ್ರ ಬರೆದಿದ್ದಾರೆ. ವಿದೇಶಾಂಗ ನೀತಿ ನಿರೂಪಣೆಯಲ್ಲಿ ಈ ಸಮಿತಿ ಪ್ರಮುಖ ಪಾತ್ರ ವಹಿಸುವುದರಿಂದ, ರಾಬರ್ಟ್ ಅವರ ಪತ್ರಕ್ಕೆ ಮಹತ್ವ ಬಂದಿದೆ.

ಬೌದ್ಧಿಕಆಸ್ತಿ ಹಕ್ಕುಗಳ ಜಾರಿಗೆ ತಡೆ: ಡಬ್ಲ್ಯುಟಿಒಗೆ ಮನವಿ

ಭಾರತಕ್ಕೆ ಬೆಂಬಲ: ಬೈಡನ್‌ಗೆ ಅಮೆರಿಕ ಸಂಸದರ ಒತ್ತಾಯ

ವಾಷಿಂಗ್ಟನ್ (ಪಿಟಿಐ): ಕೋವಿಡ್‌–19 ಲಸಿಕೆಯ ಉತ್ಪಾದನೆ, ಪೂರೈಕೆಯನ್ನು ಹೆಚ್ಚಿಸಲು ವ್ಯಾಪಾರಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಹಕ್ಕುಗಳ (ಟಿಆರ್‌ಐಪಿಎಸ್) ಜಾರಿಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯಬೇಕು ಎಂಬ ಭಾರತ, ದಕ್ಷಿಣ ಆಫ್ರಿಕಾದ ಮನವಿಗೆ ಬೆಂಬಲಿಸುವಂತೆ ಅಮೆರಿಕದ ಕೆಲವು ಸಂಸದರು ಅಧ್ಯಕ್ಷ ಜೋ ಬೈಡನ್ ಅವರನ್ನು ಒತ್ತಾಯಿಸಿದ್ದಾರೆ.

ಟಿಆರ್‌ಐಪಿಎಸ್ ಒಪ್ಪಂದದ ಕೆಲ ನಿಯಮಗಳ ಜಾರಿಗೆ ಕಾಲಮಿತಿಯ ತಡೆ ನೀಡುವಂತೆ ವಿಶ್ವ ವ್ಯಾಪಾರ ಸಂಘಟನೆಗೆ (ಡಬ್ಲ್ಯುಟಿಒ) ಭಾರತ ಹಾಗೂ ದಕ್ಷಿಣ ಆಫ್ರಿಕಾ ಮನವಿ ಮಾಡಿವೆ. ಇತರ ಹಲವಾರು ದೇಶಗಳು ಭಾರತದ ಈ ನಡೆಗೆ ಬೆಂಬಲ ಸೂಚಿಸಿವೆ.

ಈ ಮೊದಲಿನ ಡೊನಾಲ್ಡ್ ಟ್ರಂಪ್ ಆಡಳಿತ ಇಂಥ ಮನವಿಯನ್ನು ವಿರೋಧಿಸಿತ್ತು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸದರಾದ ರೋಸಾ ಡಿಲಾರೊ, ಜಾನ್ ಶಕೋವ್ಸ್ಕಿ, ಅರ್ಲ್ ಬ್ಲೂಮೆನಾರ್, ಲಾಯ್ಡ್ ಡಾಗೆಟ್, ಆಡ್ರಿಯಾನೋ ಎಸ್ಪಿಲಟ್ ಹಾಗೂ ಆ್ಯಂಡಿ ಲೆವಿನ್, 'ಅಧ್ಯಕ್ಷ ಬೈಡನ್ ಅವರಿಗೆ ಈ ಸಂಬಂಧ 60ಕ್ಕೂ ಹೆಚ್ಚು ಸಂಸದರು ಪತ್ರ ಬರೆಯುತ್ತೇವೆ' ಎಂದರು.

ಟಿಆರ್‌ಐಪಿಎಸ್‌ನ ಕೆಲ ನಿಯಮಗಳ ಜಾರಿಗೆ ತಾತ್ಕಾಲಿಕ ತಡೆ ನೀಡುವುದರಿಂದ, ಲಸಿಕೆ ಉತ್ಪಾದನೆಗೆ ಅಗತ್ಯವಿರುವ ತಂತ್ರಜ್ಞಾನದ ವಿನಿಮಯ ಸಾಧ್ಯವಾಗಲಿದೆ. ಇದರಿಂದ ವಿವಿಧ ದೇಶಗಳಿಗೆ ಲಸಿಕೆ ಮಾರಾಟ ಮಾಡುವಾಗ ನಿರ್ಬಂಧ ಹೇರಲು ಅವಕಾಶ ಇರುವುದಿಲ್ಲಎಂದು ಅಮೆರಿಕದ ಸಂಸದರು ಪ್ರತಿಪಾದಿಸಿದ್ದಾರೆ.



ಹೊನಲು ಬೆಳಕಿನಲ್ಲಿ ಹೊಳೆದ ಸೂರ್ಯ; ಕೊನೆಯ ಓವರ್‌ನಲ್ಲಿ ಜಯದ ದಡ ಸೇರಿದ ಭಾರತ

ಭಾರತಕ್ಕೆ ಸರಣಿ ಜಯದ ಕನಸು ಜೀವಂತ

ಅಹಮದಾಬಾದ್ (ಪಿಟಿಐ): ಗುರುವಾರ ರಾತ್ರಿಯ ಕೊನೆಯ ಓವರ್‌ನಲ್ಲಿ ಎಲ್ಲ ನಾಟಕೀಯ ತಿರುವುಗಳನ್ನು ದಾಟುವಲ್ಲಿ ಯಶಸ್ವಿಯಾದ ಮಧ್ಯಮ ವೇಗಿ ಶಾರ್ದೂಲ್ ಠಾಕೂರ್ 'ಖಳನಾಯಕ'ನಾಗುವ ಕಳಂಕದಿಂದ ತಪ್ಪಿಸಿಕೊಂಡರು. ತಮ್ಮ ಗೆಳೆಯ ಸೂರ್ಯಕುಮಾರ್ ಯಾದವ್ ಗಳಿಸಿದ ಅರ್ಧಶತಕ ವ್ಯರ್ಥವಾಗಲೂ ಅವರು ಬಿಡಲಿಲ್ಲ.

ಇದರಿಂದಾಗಿ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತಕ್ಕೆ 8 ರನ್‌ಗಳ ಗೆಲುವಿನ ಕಾಣಿಕೆಯನ್ನೂ ನೀಡಿದರು. ಐದು ಪಂದ್ಯಗಳ ಸರಣಿಯಲ್ಲಿ 2–2ರ ಸಮಬಲ ಸಾಧಿಸಿತು. ಆತಿಥೇಯ ಬಳಗದ ಸರಣಿ ಗೆಲುವಿನ ಕನಸು ಮರುಜೀವ ಪಡೆಯಿತು.

ಈ ಸರಣಿಯಲ್ಲಿ ಟಾಸ್ ಸೋತ ತಂಡವು ಗೆದ್ದ ಮೊದಲ ಪಂದ್ಯವೂ ಇದಾಯಿತು. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಸೂರ್ಯಕುಮಾರ್ ಯಾದವ್ (57; 31ಎಸೆತ, 6ಬೌಂಡರಿ, 3ಸಿಕ್ಸರ್) ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 185 ರನ್ ಗಳಿಸಿತು. ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 177 ರನ್ ಗಳಿಸಿ ಪರಾಭವಗೊಂಡಿತು.

ಇಂಗ್ಲೆಂಡ್ ತಂಡವು ಸುಲಭವಾಗಿ ಮಣಿಯಲಿಲ್ಲ. ಬೌಲಿಂಗ್‌ನಲ್ಲಿ ನಾಲ್ಕು ವಿಕೆಟ್ ಗಳಿಸಿದ್ದ ಜೋಫ್ರಾ ಆರ್ಚರ್ ಬ್ಯಾಟಿಂಗ್‌ನಲ್ಲೂ ಮಿಂಚಿದರು. ಕೊನೆಯ ಓವರ್‌ನಲ್ಲಿ ತಂಡದ ಗೆಲುವಿಗೆ 23 ರನ್‌ಗಳ ಅಗತ್ಯವಿತ್ತು. ಶಾರ್ದೂಲ್ ಠಾಕೂರ್ ಹಾಕಿದ ಆ ಓವರ್‌ನಲ್ಲಿ ಜೋಫ್ರಾ ಒಂದು ಬೌಂಡರಿ ಮತ್ತು ಸಿಕ್ಸರ್ ಹೊಡೆದರು. ಇದರಿಂದ ಬೌಲರ್ ಮೇಲೆ ಒತ್ತಡ ಹೆಚ್ಚಿತು.

ಸೂರ್ಯ ಹೊಳಪು: ತಾವು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಎದುರಿಸಿದ ಮೊದಲ ಎಸೆತವನ್ನೇ ಸಿಕ್ಸರ್‌ಗೆ ಎತ್ತಿದ ಸೂರ್ಯಕುಮಾರ್ ಯಾದವ್ ಮಿಂಚಿನ ಅರ್ಧಶತಕ ಗಳಿಸಿದರು.

ಈ ಸರಣಿಯ ಎರಡನೇ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಸೂರ್ಯಕುಮಾರ್‌ಗೆ ಬ್ಯಾಟಿಂಗ್ ಮಾಡುವ ಅವಕಾಶ ಸಿಕ್ಕಿರಲಿಲ್ಲ. ನಾಲ್ಕನೇ ಪಂದ್ಯದಲ್ಲಿ ಬದಲು ಸೂರ್ಯ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದರು. ವೇಗಿ ಜೋಫ್ರಾ ಹಾಕಿದ ಶರವೇಗದ ಶಾಟ್ ಪಿಚ್ ಎಸೆತವನ್ನು ಹುಕ್ ಮಾಡಿದ ಸೂರ್ಯ ಚೆಂಡನ್ನು ಬೌಂಡರಿಯಾಚೆ ಕಳಿಸಿದರು. ಏಯಾನ್ ಮಾರ್ಗನ್ ಬಳಗ ನಿಬ್ಬೆರಗಾಯಿತು. ಇನ್ನೊಂದು ತುದಿಯಲ್ಲಿದ್ದ ಕೆ.ಎಲ್. ರಾಹುಲ್ ಜೊತೆಗೆ ಸೂರ್ಯ ಎರಡನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಸೇರಿಸಿದರು.

ಕಳೆದ ಎರಡೂ ಪಂದ್ಯಗಳಲ್ಲಿ ಸೊನ್ನೆ ಸುತ್ತಿದ್ದ ರಾಹುಲ್ ಈ ಪಂದ್ಯದಲ್ಲಿ ಲಯ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದರು. ಆದರೆ ಅವರು 14 ರನ್ ಗಳಿಸಿದ್ದ ಸಂದರ್ಭದಲ್ಲಿ ಬೆನ್ ಸ್ಟೋಕ್ಸ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ಜೋಫ್ರಾಗೆ ಕ್ಯಾಚಿತ್ತರು. ಸರಣಿಯಲ್ಲಿ ಎರಡು ಅರ್ಧಶತಕ ಬಾರಿಸಿರುವ ನಾಯಕ ವಿರಾಟ್ ಕೊಹ್ಲಿ ಕೇವಲ ಒಂದು ರನ್ ಗಳಿಸಿ ನಿರ್ಗಮಿಸಿದರು.

ಸೂರ್ಯ, 28ನೇ ಎಸೆತದಲ್ಲಿ ಅರ್ಧ ಶತಕದ ಗಡಿ ಮುಟ್ಟಿದರು. ಅದರಲ್ಲಿ ಆರು ಬೌಂಡರಿ ಮತ್ತು ಎರಡು ಸಿಕ್ಸರ್ ಗಳಿದ್ದವು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ರಿಷಭ್ ಪಂತ್(30; 23ಎಸೆತ, 4ಬೌಂಡರಿ) ಅವರೊಂದಿಗೆ 40 ರನ್ ಸೇರಿಸಿದರು. 14ನೇ ಓವರ್‌ನಲ್ಲಿ ಸೂರ್ಯ ಕುಮಾರ್ ಔಟಾದರು.

ಕ್ರೀಸ್‌ಗೆ ಬಂದ ಶ್ರೇಯಸ್ ಅಯ್ಯರ್ ಅಯ್ಯರ್ (37; 18ಎಸೆತ, 5ಬೌಂಡರಿ, 1ಸಿಕ್ಸರ್) ಕೂಡ ಬೌಲರ್‌ಗಳನ್ನು ದಂಡಿಸಿದರು.

ರೋಹಿತ್ ಶರ್ಮಾ ಟಿ20 ಕ್ರಿಕೆಟ್‌ನಲ್ಲಿ ಒಟ್ಟಾರೆ ಒಂಬತ್ತು ಸಾವಿರ ರನ್ ಗಳಿಸಿದ ಸಾಧನೆ ಮಾಡಿದರು.


ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಭಾರತ 8ಕ್ಕೆ 185 (20 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಸಿ ಮತ್ತು ಬಿ ಜೊಫ್ರಾ ಆರ್ಚರ್	12
ಕೆ.ಎಲ್.ರಾಹುಲ್ ಸಿ ಜೊಫ್ರಾ ಆರ್ಚರ್ ಬಿ ಬೆನ್ ಸ್ಟೋಕ್ಸ್	14
ಸೂರ್ಯಕುಮಾರ್ ಯಾದವ್ ಸಿ ಡೇವಿಡ್ ಮಲಾನ್ ಬಿ ಸ್ಯಾಮ್ ಕರನ್	57
ವಿರಾಟ್ ಕೊಹ್ಲಿ ಸ್ಟಂಪ್ಡ್ ಜೋಸ್ ಬಟ್ಲರ್ ಬಿ ಆದಿಲ್ ರಶೀದ್	1
ರಿಷಭ್ ಪಂತ್ ಬಿ ಜೊಫ್ರಾ ಆರ್ಚರ್	30
ಶ್ರೇಯಸ್ ಅಯ್ಯರ್ ಸಿ ಡೇವಿಡ್ ಮಲಾನ್ ಬಿ ಜೊಫ್ರಾ ಆರ್ಚರ್	37
ಹಾರ್ದಿಕ್ ಪಾಂಡ್ಯ ಸಿ ಬೆನ್ ಸ್ಟೋಕ್ಸ್ ಬಿ ಮಾರ್ಕ್ ವುಡ್	11
ಶಾರ್ದೂಲ್ ಠಾಕೂರ್ ಔಟಾಗದೆ	10
ವಾಷಿಂಗ್ಟನ್ ಸುಂದರ್ ಸಿ ಆದಿಲ್ ರಶೀದ್ ಬಿ ಜೊಫ್ರಾ ಆರ್ಚರ್	4
ಭುವನೇಶ್ವರ್ ಕುಮಾರ್ ಔಟಾಗದೆ	0
ಇತರೆ (ಲೆಗ್ ಬೈ 5, ವೈಡ್ 4)	9

ವಿಕೆಟ್ ಪತನ: 1-21 (ರೋಹಿತ್ ಶರ್ಮಾ, 3.4), 2-63 (ಕೆ.ಎಲ್.ರಾಹುಲ್, 7.4), 3-70 (ವಿರಾಟ್ ಕೊಹ್ಲಿ, 8.4), 4-110 (ಸೂರ್ಯಕುಮಾರ್, 13.2), 5-144 (ರಿಷಭ್ ಪಂತ್, 16.2), 6-170 (ಹಾರ್ದಿಕ್ ಪಾಂಡ್ಯ, 18.5), 7-174 (ಶ್ರೇಯಸ್ ಅಯ್ಯರ್, 19.1), 8-179 (ವಾಷಿಂಗ್ಟನ್ ಸುಂದರ್, 19.4)

ಬೌಲಿಂಗ್: ಆದಿಲ್ ರಶೀದ್ 4–1–39–1, ಜೊಫ್ರಾ ಆರ್ಚರ್ 4–0–33–4, ಮಾರ್ಕ್ ವುಡ್ 4–1–25–1, ಕ್ರಿಸ್ ಜೋರ್ಡಾನ್ 4–0–41–0, ಬೆನ್ ಸ್ಟೋಕ್ಸ್ 3–0–26–1, ಸ್ಯಾಮ್ ಕರನ್ 1–0–16–1

ಇಂಗ್ಲೆಂಡ್ 8ಕ್ಕೆ 177 (20 ಓವರ್‌ಗಳಲ್ಲಿ)

ಜೇಸನ್ ರಾಯ್ ಸಿ ಸೂರ್ಯಕುಮಾರ್ ಯಾದವ್ ಬಿ ಹಾರ್ದಿಕ್ ಪಾಂಡ್ಯ	40
ಜೋಸ್ ಬಟ್ಲರ್ ಸಿ ಕೆ.ಎಲ್.ರಾಹುಲ್ ಬಿ ಭುವನೇಶ್ವರ್ ಕುಮಾರ್	9
ಡೇವಿಡ್ ಮಲಾನ್ ಬಿ ರಾಹುಲ್ ಚಾಹರ್	14
ಜಾನಿ ಬೆಸ್ಟೊ ಸಿ ವಾಷಿಂಗ್ಟನ್ ಸುಂದರ್ ಬಿ ರಾಹುಲ್ ಚಾಹರ್	25
ಬೆನ್ ಸ್ಟೋಕ್ಸ್ ಸಿ ಸೂರ್ಯಕುಮಾರ್ ಯಾದವ್ ಬಿ ಶಾರ್ದೂಲ್ ಠಾಕೂರ್	46
ಏಯಾನ್ ಮಾರ್ಗನ್ ಸಿ ವಾಷಿಂಗ್ಟನ್ ಸುಂದರ್ ಬಿ ಶಾರ್ದೂಲ್ ಠಾಕೂರ್	4
ಸ್ಯಾಮ್ ಕರನ್ ಬಿ ಹಾರ್ದಿಕ್ ಪಾಂಡ್ಯ	3
ಕ್ರಿಸ್ ಜೋರ್ಡಾನ್ ಸಿ ಹಾರ್ದಿಕ್ ಪಾಂಡ್ಯ ಬಿ ಶಾರ್ದೂಲ್ ಠಾಕೂರ್	12
ಜೊಫ್ರಾ ಆರ್ಚರ್ ಔಟಾಗದೆ	18
ಆದಿಲ್ ರಶೀದ್ ಔಟಾಗದೆ	0
ಇತರೆ (ಲೆಗ್‌ಬೈ 2, ವೈಡ್ 4)	6

ವಿಕೆಟ್ ಪತನ: 1-15 (ಜೋಸ್ ಬಟ್ಲರ್, 2.5), 2-60 (ಡೇವಿಡ್ ಮಲಾನ್, 7.5), 3-66 (ಜೇಸನ್ ರಾಯ್, 8.5), 4-131 (ಜಾನಿ ಬೆಸ್ಟೊ, 14.5), 5-140 (ಬೆನ್ ಸ್ಟೋಕ್ಸ್, 16.1), 6-140 (ಏಯಾನ್ ಮಾರ್ಗನ್, 16.2), 7-153 (ಸ್ಯಾಮ್ ಕರನ್, 17.6), 8-177 (ಕ್ರಿಸ್ ಜೋರ್ಡಾನ್, 19.5)

ಬೌಲಿಂಗ್: ಭುವನೇಶ್ವರ್ ಕುಮಾರ್ 4–1–30–1, ಹಾರ್ದಿಕ್ ಪಾಂಡ್ಯ 4–0–16–2, ಶಾರ್ದೂಲ್ ಠಾಕೂರ್ 4–0–42–3, ವಾಷಿಂಗ್ಟನ್ ಸುಂದರ್ 4–0–52–0, ರಾಹುಲ್ ಚಾಹರ್ 4–0–35–2

ಫಲಿತಾಂಶ: ಭಾರತಕ್ಕೆ 8 ರನ್‌ಗಳ ಜಯ; ಸರಣಿ 2–2ರಲ್ಲಿ ಸಮ

ಮುಂದಿನ ಪಂದ್ಯ: ಮಾರ್ಚ್ 20; ಅಹಮದಾಬಾದ್

ವಿಶ್ವಕಪ್ ಶೂಟಿಂಗ್ ಇಂದಿನಿಂದ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯಲ್ಲಿ ಶುಕ್ರವಾರ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಸ್ಪರ್ಧೆ ಆರಂಭವಾಗಲಿದೆ.

ಕೊರೊನಾ ಕಾಲದಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಆತಿಥೇಯ ಭಾರತದ 57 ಶೂಟಿಂಗ್ ಪಟುಗಳು ಕಣಕ್ಕಿಳಿಯಲಿದ್ದಾರೆ. ಇಲ್ಲಿ 15 ಸ್ಪರ್ಧಿಗಳಿಗೆ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಅವಕಾಶವಿದೆ.

ಪಿಸ್ತೂಲ್ ಮತ್ತು ರೈಫಲ್ ಸೂಟಿಂಗ್‌ಪಟುಗಳಿಗೆ ಕಳೆದೊಂದು ವರ್ಷದಲ್ಲಿ ಆನ್‌ಲೈನ್ ಸ್ಪರ್ಧೆಗಳು ನಡೆದಿದ್ದವು. ಇದೀಗ ಶೂಟಿಂಗ್ ರೇಂಜ್‌ನಲ್ಲಿ ಇದೇ ಮೊದಲ ಸಲ ಮುಖಾಮುಖಿಯಾಗುವರು.

ಈಚೆಗೆ ಈಜಿಪ್ಟ್‌ನಲ್ಲಿ ನಡೆದಿದ್ದ ಶಾಟ್‌ಗನ್ ವಿಶ್ವಕಪ್ ಟೂರ್ನಿಯಲ್ಲಿ ಸ್ಕೀಟ್ ಮತ್ತು ಟ್ರ್ಯಾಪ್ ಸ್ಪರ್ಧಿಗಳು ಭಾಗವಹಿಸಿದ್ದರು. ಕಾಮನ್‌ವೆಲ್ತ್ ಕೂಟದ ಚಿನ್ನದ ಪದಕವಿಜೇತ ಅನೀಶ್ ಭಾನವಾಲಾ, ದಿವ್ಯಾಂಶು ಸಿಂಗ್ ಪನ್ವಾರ್, ಪಂಕಜ್ ಕುಮಾರ್, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್, ಮನು ಭಾಕರ್, ಸೌರಭ್ ಚೌಧರಿ, ಅಭಿಷೇಕ್ ವರ್ಮಾ ಮತ್ತು ಯಶಸ್ವಿನಿ ಸೇರಿದಂತೆ ಭಾರತದ ಪ್ರಮುಖ ಶೂಟಿಂಗ್ ಪಟುಗಳು ಒಲಿಂಪಿಕ್ ಅರ್ಹತೆ ಗಿಟ್ಟಿಸಲು ಗುರಿ ಇಟ್ಟಿದ್ದಾರೆ.

ಟಿ20 ವಿಶ್ವಕಪ್ ಅರ್ಹತಾ ಟೂರ್ನಿ ಮುಂದೂಡಿಕೆ

ದುಬೈ (ಪಿಟಿಐ): ಕೊರೊನಾ ವೈರಸ್ ಪ್ರಸರಣ ಹೆಚ್ಚುತ್ತಿರುವುದರಿಂದ 2022ರ ಪುರುಷರ ಟಿ20 ಏಷ್ಯಾ ಮತ್ತು ವಿಶ್ವಕಪ್ ಅರ್ಹತಾ ಸುತ್ತಿನ ಮೂರು ಟೂರ್ನಿಗಳನ್ನು ಮುಂದೂಡಲಾಗಿದೆ.

ಏಪ್ರಿಲ್ 3 ಮತ್ತು 9ರಂದು ಏಷ್ಯಾ ಎ ಕ್ವಾಲಿಫೈಯರ್ ಪಂದ್ಯಗಳು ಆಯೋಜನೆಗೊಂಡಿದ್ದವು. ಬಹರೇನ್, ಕುವೈತ್, ಮಾಲ್ಡೀವ್ಸ್, ಕತಾರ್ ಮತ್ತು ಸೌದಿ ಅರೇಬಿಯಾ ತಂಡಗಳು ಈ ಪಂದ್ಯಗಳಲ್ಲಿ ಆಡಬೇಕಿತ್ತು. ಈ ಪಂದ್ಯಗಳನ್ನು ಕುವೈತ್‌ನಲ್ಲಿ ಅಕ್ಟೋಬರ್ 23ರಿಂದ 29ರವರೆಗೆ ನಡೆಸಲಾಗುವುದು ಎಂದು ಐಸಿಸಿ ತಿಳಿಸಿದೆ.

ಟಿ20 ವಿಶ್ವಕಪ್ ಪ್ರಾದೇಶಿಕ ಅರ್ಹತಾ ಟೂರ್ನಿಗಳಾದ ಆಫ್ರಿಕಾ ಎ ಮತ್ತು ಬಿ ಕ್ವಾಲಿಫೈಯರ್ ಪಂದ್ಯಗಳನ್ನೂ ಮುಂದೂಡಲಾಗಿದೆ. ಎ ಗುಂಪಿನ ಕ್ವಾಲಿಫೈಯರ್‌ನಲ್ಲಿ ಅಕ್ಟೋಬರ್ 25 ರಿಂದ 31ರಂದು ನಡೆಸಲು ಉದ್ದೇಶಿಸಲಾಗಿದೆ. ಇದರಲ್ಲಿ ಘಾನಾ, ಲೆಸೊತೊ, ಮಲಾವಿ, ರವಾಂಡಾ, ಸೇಚೆಲ್ಸ್, ಸ್ವಿಜರ್‌ಲೆಂಡ್ ಮತ್ತು ಉಗಾಂಡಾ, ಕ್ವಾಲಿಫೈಯರ್ ಬಿ ಗುಂಪಿನಲ್ಲಿ ಬೋತ್ಸವಾನಾ, ಕ್ಯಾಮರೂನ್, ಮೊಜಾಂಬಿಕ್, ಸಿಯೆರಾ ಲಿಯೊನ್, ಸೇಂಟ್ ಹೆಲೆನಾ ಮತ್ತು ತಾಂಜಾನಿಯಾ ತಂಡಗಳು ಆಡಲಿವೆ.

ಸುದ್ದಿ 2 ನಿಮಿಷ

100 ಎಸೆತಗಳ ಟೂರ್ನಿಗೆ ಎಲಿಸ್

ಲಂಡನ್ (ಎಎಫ್‌ಪಿ): ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡದ ಆಲ್‌ರೌಂಡರ್ ಎಲಿಸ್ ಪೆರಿ ಇಂಗ್ಲೆಂಡ್‌ನಲ್ಲಿ ನಡೆಯಲಿರುವ 100 ಎಸೆತಗಳ ಟೂರ್ನಿಯ ಮೊದಲ ಆವೃತ್ತಿಯಲ್ಲಿ ಆಡಲು ಮುಂದಾಗಿದ್ದಾರೆ.

ಅಂತ-ರರಾಷ್ಟ್ರೀಯ ಕ್ರಿಕೆಟ್ ಸಮಿತಿಯ ವರ್ಷದ ಮಹಿಳಾ ಆಟಗಾರ್ತಿ ಪ್ರಶಸ್ತಿಗೆ ಆಯ್ಕೆಯಾಗಿರುವ ಎಲಿಸ್ ಪೆರಿ ಬರ್ಮಿಂಗ್‌ಹ್ಯಾಂ ಫೀನಿಕ್ಸ್ ತಂಡದಲ್ಲಿ ಆಡಲು ಒಪ್ಪಿಕೊಂಡಿದ್ದಾರೆ. 30 ವರ್ಷದ ಪೆರಿ, ಮಹಿಳೆಯರ ಏಕದಿನ ಕ್ರಿಕೆಟ್‌ನ ಆಲ್‌ರೌಂಡರ್‌ಗಳ ಪಟ್ಟಿಯ ಅಗ್ರ ಸ್ಥಾನದಲ್ಲಿದ್ದಾರೆ. ಟಿ20 ರ‍್ಯಾಂಕಿಂಗ್ ಪಟ್ಟಿಯ ಅಗ್ರ ಸ್ಥಾನದಲ್ಲಿರುವ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಕೂಡ ಫೀನಿಕ್ಸ್ ತಂಡದಲ್ಲಿ ಇದ್ದಾರೆ.

'ಎಲಿಸ್ ಪೆರಿ ವಿಶ್ವದ ಅತ್ಯುತ್ತಮ ಕ್ರಿಕೆಟ್ ಪಟುಗಳಲ್ಲಿ ಒಬ್ಬರಾಗಿದ್ದು ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸುವ ಸಾಮರ್ಥ್ಯವಿದೆ' ಎಂದು ಫೀನಿಕ್ಸ್ ಕೋಚ್ ಬೆನ್ ಸಾಯರ್ ಅಭಿಪ್ರಾಯಪಟ್ಟಿದ್ದಾರೆ.



ಆಲ್ ಇಂಗ್ಲೆಂಡ್: ಲಕ್ಷ್ಯ ಜಯಭೇರಿ

ಬರ್ಮಿಂಗ್‌ಹ್ಯಾಂ (ಪಿಟಿಐ): ಭಾರತದ ಯುವ ಆಟಗಾರ ಲಕ್ಷ್ಯ ಸೇನ್, ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಈ ಮೂಲಕ ಟೂರ್ನಿಯಲ್ಲಿ ಎಂಟರ ಘಟ್ಟ ಪ್ರವೇಶಿಸಿದ ಅತಿ ಕಿರಿಯ ಆಟಗಾರ ಎನಿಸಿಕೊಂಡರು. ಆದರೆ ಎಚ್.ಎಸ್.ಪ್ರಣಯ್ ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದರು.

2019ರಲ್ಲಿ ಒಟ್ಟು ಐದು ಪ್ರಶಸ್ತಿಗಳನ್ನು ಗೆದ್ದು ಗಮನ ಸೆಳೆದಿದ್ದ 19 ವರ್ಷದ ಲಕ್ಷ್ಯಸೇನ್ ಇಲ್ಲಿ 21-18, 21-16ರಲ್ಲಿ ಫ್ರಾನ್ಸ್‌ನ ಥಾಮಸ್ ರುಕ್ಸಲ್ ಎದುರು ಜಯ ಗಳಿಸಿದರು.

ಮೊದಲ ಸುತ್ತಿನಲ್ಲಿ ಕಿದಂಬಿ ಶ್ರೀಕಾಂತ್ ಅವರನ್ನು ಮಣಿಸಿದ್ದ ಜಪಾನ್‌ನ ಕೆಂಟೊ ಮೊಮೊಟಾ 21–15, 21–14ರಲ್ಲಿ ಪ್ರಣಯ್ ವಿರುದ್ಧ ಗೆಲುವು ಸಾಧಿಸಿದರು. ಈ ಪಂದ್ಯ ಕೇವಲ 48 ನಿಮಿಷಗಳಲ್ಲಿ ಮುಗಿಯಿತು.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿ ಮಿಶ್ರ ಡಬಲ್ಸ್‌ನಲ್ಲಿ ಜಪಾನ್‌ನ ಯೂಕಿ ಕನೇಕೊ ಮತ್ತು ಮಿಸಾಕಿ ಮಸುಟೊಮೊ ಎದುರು 19-21, 9-21ರಲ್ಲಿ ಸೋತರು.

ಹಿಂದೆ ಸರಿದ ಸೈನಾ ನೆಹ್ವಾಲ್: ಮಹಿಳೆಯರ ವಿಭಾಗದ ಮೊದಲ ಸುತ್ತಿನ ಪಂದ್ಯದ ಅರ್ಧದಲ್ಲೇ ಭಾರತದ ಸೈನಾ ನೆಹ್ವಾಲ್ ಹಿಂದೆ ಸರಿದರು. ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ಎದುರಿನ ಪಂದ್ಯದಲ್ಲಿ 8-21, 4–10ರ ಹಿನ್ನಡೆ ಅನುಭವಿಸಿದ್ದ ಸಂದರ್ಭದಲ್ಲಿ ಬಲಗಾಲಿನ ತೊಡೆಯಲ್ಲಿ ನೋವು ಕಾಣಿಸಿಕೊಂಡ ಕಾರಣ ಅವರು ನಿವೃತ್ತರಾಗಲು ನಿರ್ಧರಿಸಿದರು.

ಮಿಶ್ರ ಡಬಲ್ಸ್‌ನ ಮತ್ತೊಂದು ಪಂದ್ಯದಲ್ಲಿ ಪ್ರಣವ್ ಜೆರೆ ಛೋಪ್ರಾ ಮತ್ತು ಎನ್.ಸಿಕ್ಕಿ ರೆಡ್ಡಿ 15-21, 17-21ರಲ್ಲಿ ಡೆನ್ಮಾರ್ಕ್‌ನ ರಸ್ಮಸ್ ಎಸ್ಪೆರ್ಸನ್ ಮತ್ತು ಕ್ರಿಸ್ಟಿನ್ ಬುಶ್ ಎದುರು ಸೋತರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ.ಸಿಂಧು ಡೆನ್ಮಾರ್ಕ್‌ನ ಲಿನ್ ಕ್ರಿಸ್ಟೋಫರ್‌ಸೆನ್ ಎದುರು 21-8, 21-8ರಲ್ಲಿ ಜಯ ಗಳಿಸಿದರು.

3ನೇ ಅಂಪೈರ್ ತೀರ್ಪು: ಲಕ್ಷ್ಮಣ್ ಗರಂ

ಬೆಂಗಳೂರು: ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತದ ಬ್ಯಾಟ್ಸ್‌ಮನ್ ಸೂರ್ಯಕುಮಾರ್ ಯಾದವ್ ಕ್ಯಾಚ್ ಪರಿಶೀಲನೆ ಮಾಡಿ ನೀಡಿದ ತೀರ್ಪಿನ ವಿರುದ್ಧ ಮಾಜಿ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಮತ್ತು ವಾಸೀಂ ಜಾಫರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಅತ್ಯಾಧುನಿಕ ತಂತ್ರಜ್ಞಾನ ಬಳಸಿ ವಿವಿಧ ಆಯಾಮಗಳಲ್ಲಿ ಕ್ಯಾಚ್ ಪಡೆದ ರೀತಿಯನ್ನು ಪರಿಶೀಲಿಸಲಾಗಿದೆ. ಒಂದು ಹಂತದಲ್ಲಿ ಚೆಂಡು ನೆಲಕಚ್ಚಿದ್ದು ಸ್ಪಷ್ಟವಾಗಿದೆ. ಆನ್‌ಫೀಲ್ಡ್ ಅಂಪೈರ್ ನೀಡಿದ ಸಾಫ್ಟ್ ಸಿಗ್ನಲ್, ನಂತರ ಪರಿಶೀಲಿಸಿದ ಟಿವಿ ಅಂಪೈರ್ ಔಟ್ ತೀರ್ಪು ನೀಡಿದ್ದಾರೆ. ಈ ನಿಯಮದ ಪರಿಷ್ಕರಣೆಯ ಕುರಿತು ಮರುಚಿಂತನೆ ಅಗತ್ಯವಾಗಿದೆ' ಎಂದು ಲಕ್ಷ್ಮಣ್ ಟ್ವೀಟ್ ಮಾಡಿದ್ದಾರೆ. ಮಾಜಿ ಕ್ರಿಕೆಟಿಗ ವಾಸೀಂ ಜಾಫರ್ ಕೂಡ ಸಾಫ್ಟ್ ಸಿಗ್ನಲ್ ಕುರಿತು ಟೀಕಿಸಿದ್ದಾರೆ.

ವಿಶ್ವ ಚಾಂಪಿಯನ್‌ಗೆ ನಿಖತ್ ಪೆಟ್ಟು

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್ ಪಲ್ಸೇವಾ ಎಕಟೇರಿನಾಗೆ ಆಘಾತ ನೀಡಿದ ಭಾರತದ ನಿಖತ್ ಜರೀನ್ ಅವರು ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಬೋಸ್ಫೋರಸ್ ಬಾಕ್ಸಿಂಗ್ ಟೂರ್ನಿಯ ಮಹಿಳೆಯರ 51 ಕೆಜಿ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿರುವ ನಿಖತ್ ಟೂರ್ನಿಯ ಎರಡನೇ ದಿನವಾದ ಬುಧವಾರ ರಾತ್ರಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ರಷ್ಯಾದ ಬಾಕ್ಸಿಂಗ್ ಪಟುವನ್ನು 5–0ಯಿಂದ ಮಣಿಸಿದರು. ಮುಂದಿನ ಸುತ್ತಿನಲ್ಲೂ ನಿಖತ್‌ಗೆ ಕಠಿಣ ಪೈಪೋಟಿ ಎದುರಾಗಿದ್ದು ಎರಡು ಬಾರಿಯ ವಿಶ್ವ ಚಾಂಪಿಯನ್ ಕಜಕಸ್ತಾನದ ಕೈಜೈಯ್‌ಬೇ ನಜೀಮ್ ಎದುರು ಸೆಣಸುವರು.

ಭಾರತದ ಶಿವ ಥಾಪ, ಸೋನಿಯಾ ಲಾಥರ್ ಮತ್ತು ಪರ್ವೀನ್ ಕೂಡ ತಮ್ಮ ವಿಭಾಗಗಳಲ್ಲಿ ಜಯ ಗಳಿಸಿ ಎಂಟರ ಘಟ್ಟ ಪ್ರವೇಶಿಸಿದರು. 2013ರ ಏಷ್ಯನ್ ಚಾಂಪಿಯನ್ ಥಾಪಾ 63 ಕೆಜಿ ವಿಭಾಗದ ಬೌಟ್‌ನಲ್ಲಿ 3–2ರಲ್ಲಿ ಕಜಕಸ್ತಾನದ ಸ್ಮಗುಲೊವ್ ಭಗ್ಗಿಯೊವ್ ವಿರುದ್ಧ ಜಯ ಗಳಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಲಾಥರ್ 57 ಕೆಜಿ ವಿಭಾಗದಲ್ಲಿ ಸುರ್ಮೆನಲಿ ತುಗ್ಸೆನವ್ ವಿರುದ್ಧ 5-0ಯಿಂದ ಜಯ ಗಳಿಸಿದರು. 60 ಕೆಜಿ ವಿಭಾಗದಲ್ಲಿ ಪರ್ವೀನ್, ಒಜಿಯೋಲ್ ಎಸ್ರಾ ವಿರುದ್ಧ 5–0ಯಿಂದ ಜಯ ಗಳಿಸಿದರು. ಆದರೆ ದುರ್ಯೋಧನ್ ನೇಗಿ, ಬ್ರಿಜೇಶ್ ಯಾದವ್ ಮತ್ತು ಕೃಷ್ಣ ಶರ್ಮಾ ಸೋತು ಹೊರಬಿದ್ದರು.


ನಿಖತ್ ಜರೀನ್–ಪಿಟಿಐ ಚಿತ್ರ

ವಿಶ್ವಕಪ್‌ಗೆ ಭಾರತ ತಂಡ

ನೋಯಿಡಾ (ಪಿಟಿಐ): ಭಾರತದ ಟೆಂಟ್ ಪೆಗ್ಗಿಂಗ್ ತಂಡ ಅಂತರರಾಷ್ಟ್ರೀಯ ಟೆಂಟ್ ಪೆಗ್ಗಿಂಗ್ ಫೆಡರೇಷನ್ (ಐಟಿಪಿಎಫ್) ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆದುಕೊಂಡಿತು.

ಅರ್ಹತಾ ಸುತ್ತಿನಲ್ಲಿ ನಡೆದ ಏಳು ಸ್ಪರ್ಧೆಗಳ ಪೈಕಿ ಭಾರತ ಆರು ಚಿನ್ನ ಮತ್ತು ಒಂದು ಕಂಚಿನ ಪದಕ ಗಳಿಸಿತು. ಟೂರ್ನಿಯಲ್ಲಿ ಒಟ್ಟು 515 ಪಾಯಿಂಟ್ ಕಲೆ ಹಾಕಿದ ಭಾರತ ಮೊದಲ ಸ್ಥಾನ ತನ್ನದಾಗಿಸಿಕೊಂಡಿತು. 482.5 ಪಾಯಿಂಟ್ ಗಳಿಸಿದ ಪಾಕಿಸ್ತಾನ ಎರಡನೇ ಸ್ಥಾನ ಗಳಿಸಿತು. ನೇಪಾಳ 457.5 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿತು. ಬೆಲಾರಸ್ ಮತ್ತು ಅಮೆರಿಕ ಕ್ರಮವಾಗಿ 220.5 ಮತ್ತು 183.5 ಪಾಯಿಂಟ್ ಗಳಿಸಿತು.

ದಿನೇಶ್ ಕಾರ್ಲೇಕರ್, ಬಿ.ಆರ್. ಜೇನಾ, ಮೋಹಿತ್ ಕುಮಾರ್, ಸಂದೀಪ್ ಕುಮಾರ್ ಮತ್ತು ಹರಿಕೇಶ್ ಸಿಂಗ್ ಅವರು ಭಾರತ ತಂಡದಲ್ಲಿದ್ದರು.

'ಇದು ಅಮೋಘ ಸಾಧನೆ. ನಮ್ಮ ರೈಡರ್‌ಗಳ ಸಾಮರ್ಥ್ಯ ಖುಷಿ ನೀಡಿದೆ. ಅವರ ಕಠಿಣ ಶ್ರಮಕ್ಕೆ ಇನ್ನಷ್ಟು ಮನ್ನಣೆ ಸಿಗುವ ಭರವಸೆ ಇದೆ' ಎಂದು ಭಾರತ ತಂಡದ ಕೋಚ್ ಹಾಗೂ ಮ್ಯಾನೇಜರ್ ಅಹಮ್ಮದ್ ಅಫ್ಸರ್ ಅಭಿಪ್ರಾಯಪಟ್ಟರು.

ವಿಜೇಂದರ್–ಲಾಪ್ಸನ್ ಮುಖಾಮುಖಿ

ಪಣಜಿ, ಗೋವಾ (ಪಿಟಿಐ): ಭಾರತದ ಬಾಕ್ಸಿಂಗ್ ತಾರೆ ವಿಜೇಂದರ್ ಸಿಂಗ್, ಒಂದು ವರ್ಷದ ಬಳಿಕ ಕಣಕ್ಕಿಳಿಯಲು ಸಜ್ಜಾಗಿದ್ದಾರೆ. ಶುಕ್ರವಾರ ನಡೆಯುವ 76 ಕೆಜಿ ಸೂಪರ್ ಮಿಡ್ಲ್ ವೇಟ್ ವಿಭಾಗದ ಬೌಟ್‌ನಲ್ಲಿ ರಷ್ಯಾದ ಆರ್ಟಿಶ್ ಲಾಪ್ಸನ್ ಸವಾಲನ್ನು ಅವರು ಎದುರಿಸುವರು. ಮೆಜೆಸ್ಟಿಕ್ ಪ್ರೈಸ್ ಕ್ಯಾಸಿನೊ ಹಡಗಿನಲ್ಲಿ ನಡೆಯಲಿರುವ ಈ ಬೌಟ್‌ಗೆ 'ಬ್ಯಾಟಲ್ ಆನ್ ಶಿಪ್' ಎಂದೇ ಹೆಸರು ಇಡಲಾಗಿದ್ದು ವಿಜೇಂದರ್ ವೃತ್ತಿಪರ ಬಾಕ್ಸಿಂಗ್‌ನಲ್ಲಿ ತಮ್ಮ ಅಮೋಘ ಓಟ ಮುಂದುವರಿಸುವತ್ತ ಚಿತ್ತ ನೆಟ್ಟಿದ್ದಾರೆ. ಒಲಿಂಪಿಕ್ ಪದಕ ವಿಜೇತ ಬಾಕ್ಸರ್ ವೃತ್ತಿಪರ ಕಣಕ್ಕೆ ಇಳಿದ ನಂತರ ಒಂದು ಬೌಟ್ ಕೂಡ ಸೋತಿಲ್ಲ. ಎಂಟು ನಾಕೌಟ್ ಒಳಗೊಂಡಂತೆ ಒಟ್ಟು 12 ಸ್ಪರ್ಧೆಗಳಲ್ಲಿ ಅವರು ಈ ವರೆಗೆ ಪಾಲ್ಗೊಂಡಿದ್ದಾರೆ. ವಿಜೇಂದರ್ ಮತ್ತು ಲಾಪ್ಸನ್ ಪೈಪೋಟಿಯನ್ನು ಕೆಲವು ದಿನಗಳ ಹಿಂದೆಯೇ ಘೋಷಿಸಲಾಗಿತ್ತು.

ಉಷಾ ದಾಖಲೆ ಮುರಿದ ಧನಲಕ್ಷ್ಮಿ

ಪಟಿಯಾಲ: ಸ್ಪ್ರಿಂಟರ್ ಹಿಮಾ ದಾಸ್ ಅವರನ್ನು ಹಿಂದಿಕ್ಕಿ ಫೆಡರೇಷನ್ ಕಪ್ ರಾಷ್ಟ್ರೀಯ ಅಥ್ಲೆಟಿಕ್ ಕೂಟದ 200 ಮೀಟರ್ಸ್ ಓಟದ ಫೈನಲ್ ತಲುಪಿದ ತಮಿಳುನಾಡಿನ ಧನಲಕ್ಷ್ಮಿ, 1998ರಲ್ಲಿ ಪಿ.ಟಿ.ಉಷಾ ಮಾಡಿದ ದಾಖಲೆಯನ್ನು ಮುರಿದರು. ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಧನಲಕ್ಷ್ಮಿ 23.26 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಚೆನ್ನೈನಲ್ಲಿ ನಡೆದಿದ್ದ ಕೂಟದಲ್ಲಿ ಉಷಾ 23.30 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು.

ಕರ್ನಾಟಕದ ಎಂ.ಆರ್.ಪೂವಮ್ಮ 800 ಮೀಟರ್ಸ್ ಓಟದಲ್ಲಿ ಕಂಚಿನ ಪದಕ ಗಳಿಸಿದರು. ದೆಹಲಿಯ ಚಾಂದ್ (2:02.57) ಚಿನ್ನ ಗೆದ್ದರೆ ಅಂತಿಮ ಕ್ಷಣಗಳಲ್ಲಿ ಮಿಂಚಿದ ಪಶ್ಚಿಮ ಬಂಗಾಳದ ಲಿಲಿ ದಾಸ್ ಬೆಳ್ಳಿ ಗಳಿಸಿದರು.

ಕುಸ್ತಿಪಟು ರಿತಿಕಾ ಆತ್ಮಹತ್ಯೆ

ಚಂಡೀಗಡ (ಪಿಟಿಐ): ಕುಸ್ತಿಪಟು ರಿತಿಕಾ ಪೋಗಟ್ (17) ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹರಿಯಾಣ ಪೊಲೀಸರು ತಿಳಿಸಿದ್ದಾರೆ.

ಒಲಿಂಪಿಯನ್ ಗೀತಾ ಪೋಗಟ್ ಅವರ ಚಿಕ್ಕಪ್ಪನ ಮಗಳು ರಿತಿಕಾ ಮಾರ್ಚ್ 15ರಂದು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ. ಚರ್ಕಿ ದಾದ್ರಿಯ ಮನೆಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ.

ರಾಜಸ್ಥಾನದ ಭರತಪುರದಲ್ಲಿ ಮಾ 12 ರಿಂದ 14ರವರೆಗೆ ನಡೆದ ರಾಜ್ಯ ಮಟ್ಟದ ಕುಸ್ತಿ ಚಾಂಪಿಯನ್‌ಷಿಪ್ ನಲ್ಲಿ ಸೋತಿದ್ದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಮೂಲತಃ ರಾಜಸ್ಥಾನದ ಜೈಪುರದ ವರಾದ ರಿತಿಕಾ ಕಳೆದ ನಾಲ್ಕು ವರ್ಷ ಗಳಿಂದ ತಮ್ಮ ದೊಡ್ಡಪ್ಪ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಮಹಾವೀರ್ ಸಿಂಗ್ ಪೋಗಟ್ (ಗೀತಾ ತಂದೆ) ಅವರೊಂದಿಗೆ ದಾದ್ರಿಯಲ್ಲಿ ನೆಲೆಸಿದ್ದರು. ಪೋಗಟ್ ಅವರ ಅಕಾಡೆಮಿಯಲ್ಲಿ ರಿತಿಕಾ ಕೂಡ ತರಬೇತಿ ಪಡೆಯುತ್ತಿದ್ದರು.

'ನಮ್ಮ ಕುಟುಂಬಕ್ಕೆ ಇದು ದೊಡ್ಡ ಆಘಾತ ನೀಡಿದೆ. ರಿತಿಕಾ ಪ್ರತಿಭಾನ್ವಿತ ಕುಸ್ತಿಪಟುವಾಗಿದ್ದಳು. ಸೋಲು–ಗೆಲುವು ಕ್ರೀಡಾಪಟುವಿನ ಜೀವನದಲ್ಲಿ ಸರ್ವೇಸಾಮಾನ್ಯ. ಈ ತರಹದ ಹೆಜ್ಜೆಯನ್ನು ಯಾರೂ ಇಡಬಾರದು' ಎಂದು ಗೀತಾ ಪೋಗಟ್ ಟ್ವೀಟ್ ಮಾಡಿದ್ದಾರೆ.

ಕೋಲ್ಕತ್ತ ರೇಸ್

'ಡೆಲ್ಫಿನಿ' ಗೆಲ್ಲುವ ನಿರೀಕ್ಷೆ

ಅಕಾರ್ನ್ ಸ್ಟೇಕ್ಸ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಡೆಲ್ಫಿನಿ' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಕಾರ್ಲೆಟ್ ವಿಚ್ 1, ರೈಟ್ ಮೂವ್ 5, ಇಂಟೆಲೆಕ್ಚನ್ 4
2ನೇ ರೇಸ್: ಎಸ್ಟ್ರೆಲ್ಲಾ ಸ್ಟಾರ್ 7, ವಿಸ್ಪರಿಂಗ್ ಗ್ರಾಸ್ 11, ಡೇರಿಂಗ್ ಹಾರ್ಟ್ 9
3ನೇ ರೇಸ್: ಸಿಲ್ವರ್ ಬ್ರೇಸ್‌ಲೆಟ್ 3, ಹುಕುಮತ್ 2, ಬರಾಕ್ 4
4ನೇ ರೇಸ್: ಡೆಲ್ಫಿನಿ 1, ಬ್ಲೇಜಿಂಗ್ ಬೆಲ್ಸ್ 2, ಯುಫ್ರೆಟಸ್ 3
5ನೇ ರೇಸ್: ಅಮೊರಸ್ ವೈಟ್ 1, ಇನ್ ಟು ದಿ ಸ್ಪಾಟ್‌ಲೈಟ್ 3, ಅರೇಕ ಲೆಜೆಂಡ್ 4
6ನೇ ರೇಸ್: ಇನ್‌ಕೊನಿಟೊ 7, ದೆಸ್ಪಾಸಿಟೊ 5, ಫ್ಯಾನ್‌ಕೋರ್ಟ್ 1

ಉತ್ತಮ ಬೆಟ್: ಸಿಲ್ವರ್ ಬ್ರೇಸ್‌ಲೆಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್‌ಗೆ
2,3,4,5,6	1,2,3	4,5,6